TEXT PROBLEM WITHIN THE BOOK ONLY

ಕನಕಲತಾಪರಿಣಯ ನಾಟಕಂ.

ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಂದ

ವಿರಚಿಸಲ್ಪಟ್ಟುದು.

ಕಂ॥ " ಉತ್ಸವಕರಮೆನೆಬೆಳಪಶ । ರತ್ಸಮಯದೊಳಿಂದು
ಕಾಂತಿವಳವೇರುವವೊಲ್ ॥ ವತ್ಸಳರೆನಿಸುವಬುಧ
ರಿನ । ಮತ್ಸರರಿಂ ಕೃತಿಕೃತಾರ್ಥಮಕ್ಕುಮಮೋಘಂ ॥ "

ಮೈಸೂರು

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

1906.

ಅವತರಣಿಕೆ

—೦—

ಇದುವರೆಗೆ ಕರ್ಣಾಟಕ ಭಾಷೆಯಲ್ಲಿ ಪ್ರಚಿತಗಳಾಗಿರುವ ನಾಟಕಗಳೆಲ್ಲವೂ ಸಂಸ್ಕೃತ ಮತ್ತು ಇಂಗ್ಲಿಷ್ ನಾಟಕಗಳ ಭಾಷಾಂತರಗಳಾಗಿರುವುವಲ್ಲದೆ ಮತ್ತೆ ಬೇರೆಯಲ್ಲ. ಈಗ ನಾನು ಕರ್ಣಾಟಕ ಭಾಷೆಯಲ್ಲಿ ನಾಟಕ ರಚನೆಯೇ ಇಲ್ಲವೆಂಬ ಈ ಕೊರತೆಯನ್ನು ಹೋಗಲಾಡಿಸಬೇಕೆಂದು ಉದ್ಯುಕ್ತನಾಗಿ "ಕನಕಲತಾಪರಿಣಯ" ವೆಂಬ ನಾಟಕವನ್ನು ರಚಿಸಿದೆನು. ಇದು ನನ್ನಿಂದಲೇ ಕಲ್ಪಿತವಾದ ಕಥೆಯಾಗಿರುವುದರಿಂದ ಕಲ್ಪಿತ ಕಥೆಯು ಪ್ರಕರಣವೆನ್ನಿಸಿಕೊಳ್ಳುವುದೆಂದು ಅನೇಕರು ನನ್ನನ್ನು ಆಕ್ಷೇಪಿಸಬಹುದು. ಆದರೆ ಕವಿಸಾರ್ವಭೌಮನಾದ ಕಾಳಿದಾಸನು "ಮಾಳವಿಕಾಗ್ನಿಮಿತ್ರ ನಾಟಕ" ರಚನೆಯಲ್ಲಿ ಅನುಸರಿಸಿರುವ ಮಾರ್ಗವನ್ನೇ ನಾನೂ ಇದರಲ್ಲಿ ಅನುಸರಿಸಿರುವೆನು. ಮೊದಲು ನನ್ನಿಂದ ರಚಿತವಾದ "ಪ್ರಿಯದರ್ಶಿಕಾ ನಾಟಿಕೆ" ಯನ್ನೂ, ಮತ್ತು "ಕೃಷ್ಣವಿಜಯ ವ್ಯಾಯೋಗ" ವನ್ನೂ ಮುದ್ರಿಸಿ ಪ್ರಚಾರಪಡಿಸಿಕೊಟ್ಟಂತೆಯೇ ಇದನ್ನು ಮುದ್ರಿಸಿ ನನಗೆ ಪ್ರೋತ್ಸಾಹವನ್ನುಂಟುಮಾಡಿಕೊಟ್ಟ ಕರ್ಣಾಟಕ ಗ್ರಂಥಮಾಲಾ ಸಂಪಾದಕರ ಉಪಕಾರವು ನನಗೆ ಚಿರಸ್ಮರಣೀಯವಾಗಿರುವುದು.

ಈ ಗ್ರಂಥದಲ್ಲಿ ನನ್ನ ಪ್ರಮಾದಜನ್ಯಗಳಾದ ಯಾವ ದೋಷಗಳು ಕಂಡುಬಂದಾಗ್ಯೂ ವಿದ್ವಾಂಸರು ನನ್ನಲ್ಲಿ ಕೃಪೆಯಿಟ್ಟು ತಿಳಿಸಿದರೆ ಕೃತಜ್ಞತೆಯಿಂದ ಅವುಗಳನ್ನು ಮುಂದಣ ಮುದ್ರಣದಲ್ಲಿ ಸರಿಪಡಿಸುವೆನು.

ನಂಜನಗೂಡು ಶ್ರೀಕಂಠಶಾಸ್ತ್ರಿ,
ಕೃಷ್ಣರಾಜ ಮೊಹಲ್ಲಾ ಮೈಸೂರು.

A TRIBUTE

MOST RESPECTFULLY AND LOYALLY OFFERED

TO

H. H. Sri Krishna Raj Wodeyar Bahadur

THE MAHARAJA OF MYSORE.

THE PATRON OF KANADA LITERATURE

BY

HIS HIGHNESS' MOST GRATEFUL AND HUMBLE SUBJECT

THE POET.

ಕಥಾಸಾರಂ

೧ ನೆಯ ಅಂಕಂ—ಚಂದ್ರನಗರದ ಚಂಡವಿಕ್ರಮನ ಮಗಳಾದ ಕನಕಲತೆಯನ್ನು ಅವಳ ತಾಯಿಯಾದ ಸ್ವಯಂಪ್ರಭೆಯ ಇಷ್ಟಾನುಸಾರ ರಾಜನ ಮೈದುನನಾದ ಮಧೂಲಕನೆಂಬ ದುಷ್ಟನಿಗೆ ಕೊಟ್ಟು ಮದುವೆ ಮಾಡಬೇಕೆಂದು ನಿಷ್ಕರ್ಷೆಯಾಗಿತ್ತು. ಇದು ಅವಳಿಗೆ ಇಷ್ಟವಿರಲಿಲ್ಲ. ಹೀಗಿರುವಲ್ಲಿ ಅಲ್ಲಿ ನಡೆವ ವಸಂತೋತ್ಸವವನ್ನು ನೋಡುವುದಕ್ಕಾಗಿ ಬಂದಿದ್ದ ವಿಮಲನಗರದ ವಿಕ್ರಮಸಿಂಹನೆಂಬ ಧೊರೆಯನ್ನು ಇವಳು ಒಂದಾನೊಂದು ಉದ್ಯಾನವನದಲ್ಲಿ ಕಂಡು ಮೋಹಿಸಿ ತನ್ನ ಸಖಿಯರ ಸಹಾಯದಿಂದ ಅವನೊಡನೆ ಹೊರಟುಹೋದಳು.

೨ ನೆಯ ಅಂಕಂ—ಕನಕಲತೆಯ ಸಖಿಯೂ ಮಧೂಲಕನ ಪಕ್ಷಪಾತಿನಿಯೂ ಆದ ಮಾಲಿನಿಯೆಂಬುವಳು ಇದನ್ನು ತಿಳಿದು ಚಂಡವಿಕ್ರಮನಿಗೆ ಗಂಡುಮಕ್ಕಳಿಲ್ಲದುದರಿಂದ ರಾಜ್ಯವೆಲ್ಲಾ ವಿಕ್ರಮಸಿಂಹನಿಗೇ ಆಗುವುದೆಂತಲೂ ತನ್ನ ಕಡೆಯವನಾದ ಮಧೂಲಕನಿಗೆ ಏನೂ ಇಲ್ಲದೆ ಹೋಗುವುದೆಂತಲೂ ಯೋಚಿಸಿ, ಚಂಡವಿಕ್ರಮನನ್ನೂ, ವಿಕ್ರಮಸಿಂಹನನ್ನೂ ಕೊಲ್ಲಬೇಕೆಂದು ಒಬ್ಬ ಯಕ್ಷಿಣಿಯೊಡನೆ ಹೇಳಿ ಕಳುಹಿಸಿ ಈ ವಿಷಯವನ್ನೆಲ್ಲಾ ಮಧೂಲಕನಿಗೂ ತಿಳಿಸಿ ಕನಲತೆಯನ್ನು ಕರೆದುಕೊಂಡು ಬರುವಂತೆ ಅವನನ್ನು ಕಳುಹಿಸಿದಳು. ಮಧೂಲಕನು ತನ್ನ ಸ್ನೇಹಿತರೊಡನೆ ಹೊರಟು ಮಾರ್ಗದಲ್ಲಿ ನೀರು ತರುವುದಕ್ಕಾಗಿ ಹೋಗಿದ್ದ ವಿಕ್ರಮಸಿಂಹನ ಆಗಮನವನ್ನು ನಿರೀಕ್ಷಿಸುತ್ತಾ ಕುಳಿತಿದ್ದ ಕನಕಲತೆಯನ್ನು ಕಂಡು ತನ್ನ ಮಿತ್ರರ ಸಹಾಯದಿಂದ ವಿದೂಷಕನನ್ನು ಹೊಡೆದು ಕೆಡಿವಿ, ತಾನು ಕೊಡಬೇಕಾದ ಋಣಕ್ಕಾಗಿ ಪೀಡಿಸುತಿದ್ದ ತನ್ನ ಮಿತ್ರರಿಬ್ಬರನ್ನೂ ತಂತ್ರಮಾಡಿ ಹೊಡೆದು ನೆಲಕ್ಕೆ ಕೆಡವಿದನು. ಈ ಘೋರಕೃತ್ಯವನ್ನು ಕಂಡು ಕನಕಲತೆಯು ನಿಂದಿಸಲು ಮಧೂಲಕನು ಅವಳನ್ನು ಬಲಾತ್ಕರಿಸುವುದಕ್ಕೆ ಯತ್ನಿಸಿದನು. ಕನಕಲತೆಯ ರೋದನ ಶಬ್ದವನ್ನು ಬೇಟೆಗಾಗಿ ಬಂದಿದ್ದ ಅರಿ

ಕೇಸರಿಯೆಂಬ ಧೊರೆಯು ಕೇಳಿ ಅಲ್ಲಿಗೆ ಬರಲು ಮಧೂಲಕನು ಓಡಿಹೋದನು. ಅರಿಕೇಸರಿಯು ಬಲಾತ್ಕರಿಸಿ ಕನಕಲತೆಯನ್ನು ತನ್ನ ಪಟ್ಟಣಕ್ಕೆ ಎಳೆದುಕೊಂಡು ಹೋದನು.

೩ ನೆಯ ಅಂಕಂ—ವಿಕ್ರಮಸಿಂಹನನ್ನು ಕೊಲ್ಲಬೇಕೆಂದು ಬಂದ ಯಕ್ಷಿಣಿಯು ಅವನನ್ನು ಕಂಡು ಮೋಹಿಸಿ ತನ್ನನ್ನು ಮದುವೆ ಮಾಡಿಕೊಳ್ಳೆಂದು ಎಷ್ಟು ಹೇಳಿದರೂ ಅವನು ಕೇಳದಿರಲು ಅವನನ್ನು ಕಲ್ಲಿನಂತೆ ನಿಂತಿರುವಹಾಗೆ ಮಾಡಿ ತಾನು ಕನಕಲತೆಯನ್ನು ಹುಡುಕಿಕೊಂಡು ಹೊರಟುಹೋದಳು. ವಿಕ್ರಮಸಿಂಹನಿಗೆ ಸಹಾಯಮಾಡಿದ ಕನಕಲತೆಯ ಸಖಿಯರನ್ನು ಮಾಲಿನಿಯು ರಾಜ್ಯದಿಂದ ಓಡಿಸಿ ಕನಕಲತೆಯ ತಾಯಿಯಾದ ಸ್ವಯಂಪ್ರಭೆಯನ್ನು ಸೆರೆಯಲ್ಲಿ ಹಾಕಿಸಿದಳು. ಕನಕಲತೆಯ ಸಖಿಯರು ವಿಕ್ರಮಸಿಂಹನ ಬಳಿಗೆ ಬರಬೇಕೆಂದು ಬರುತ್ತಾ ದಾರಿಯಲ್ಲಿ ಬಿದ್ದಿದ್ದ ವಿದೂಷಕನನ್ನೂ ಮಧೂಲಕನ ಮಿತ್ರರನ್ನೂ ಶೈತ್ಯೋಪಚಾರ ಮಾಡಿ ಎಬ್ಬಿಸಿ ನಡೆದ ಸಂಗತಿಯನ್ನು ತಿಳಿದುಕೊಂಡು ಎಲ್ಲರೂ ವಿಕ್ರಮಸಿಂಹನನ್ನು ಹುಡುಕಿಕೊಂಡು ಹೊರಟರು. ಮಧೂಲಕನ ಮಿತ್ರರು ಅವನು ತಮಗೆ ಮೋಸಮಾಡಿದ್ದಕ್ಕೆ ಅವನನ್ನು ಹಿಡಿದು ಕೊಲ್ಲಬೇಕೆಂದು ಶಪಥ ಮಾಡಿಕೊಂಡು ಹೊರಟರು, ಅರಣ್ಯದಲ್ಲಿ ಕಲ್ಲಿನಂತೆ ನಿಂತಿರುವ ವಿಕ್ರಮಸಿಂಹನನ್ನು ವಿದೂಷಕನು ಕಂಡು ತಿರಸ್ಕರಿಣೀಮಂತ್ರದಿಂದ ಅವನ ಮಾಯಾಪಾಶವನ್ನು ಪರಿಹರಿಸಿದನು. ಬಳಿಕ ಎಲ್ಲರೂ ಕನಕಲತೆಯನ್ನು ಹುಡುಕಿಕೊಂಡು ಹೊರಟರು.

೪ ನೆಯ ಅಂಕಂ—ಯಕ್ಷಿಣಿಯು ಕನಕಲತೆಯನ್ನು ಹುಡುಕಿಕೊಂಡು ಹೋಗಿ ಅರಿಕೇಸರಿಯ ಅಂತಃಪುರದಲ್ಲಿ ಕಂಡು ತನ್ನ ವಿದ್ಯಾಪ್ರಭಾವದಿಂದ ಅವಳನ್ನು ಬಿಡಿಸಿಕೊಂಡು ಬರುತ್ತಿರುವಾಗ ದಾರಿಯಲ್ಲಿ ಕಳ್ಳರು ಮಂತ್ರಶಕ್ತಿಯಿಂದ ಯಕ್ಷಿಣಿಯನ್ನು ಕೊಂದು ಕನಕಲತೆಯನ್ನು ತಮ್ಮ ಗುಹೆಯಲ್ಲಿ ಕೂಡಿದರು. ಕನಕಲತೆಯು ತನ್ನ ಪಾತಿವ್ರತ್ಯವನ್ನು ರಕ್ಷಿಸಿಕೊಳ್ಳಬೇಕೆಂದು ಆ ಗುಹೆಯ ಹಿಂಭಾಗದಲ್ಲಿ ಹರಿಯುತ್ತಿದ್ದ ಹೊಳೆಯಲ್ಲಿ ಬಿದ್ದಳು. ಅಲ್ಲಿ ತಮ್ಮ ಗುರುವಿಗೆ ಅರ್ಘ್ಯೋದಕವನ್ನು ತೆಗೆದುಕೊಂಡು

ಹೋಗಬೇಕೆಂದು ಬಂದಿದ್ದ ಋಷಿಶಿಷ್ಯರು ಕನಕಲತೆಯನ್ನು ತೀರಕ್ಕೆ ಕರೆತಂದು ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋದರು.

೫ನೆಯ ಅಂಕಂ—ಚಂಡವಿಕ್ರಮನ ಕಡೆಯವನಾದ ಒಬ್ಬ ಕಂಚುಕಿಯು ಸ್ವಯಂಪ್ರಭೆಯನ್ನೂ ಅವಳ ಪರಿವಾರವನ್ನೂ ಸೆರೆಯಿಂದ ಬಿಡಿಸಲು ಸ್ವಯಂಪ್ರಭೆಯ ಮಂತ್ರಿಯು ಮಾಲಿನಿಗೆ ಮರಣದಂಡನೆಯನ್ನು ವಿಧಿಸಿದನು. ಸ್ವಯಂಪ್ರಭೆಯು ಕಂಚುಕಿಯೊಡನೆ ಕನಕಲತೆಯನ್ನು ನೋಡಬೇಕೆಂದು ಹೊರಟು ಬರುತ್ತಾ ದಾರಿಯಲ್ಲಿದ್ದ ಋಷ್ಯಾಶ್ರಮವನ್ನು ಪ್ರವೇಶಿಸಿದಳು. ವಿಕ್ರಮಸಿಂಹನೂ ಕನಕಲತೆಯನ್ನು ಹುಡುಕಿಕೊಂಡು ಅಲ್ಲಿಗೆ ಬರಲು ಆ ಋಷಿಯು ತನ್ನ ಬಳಿಯಲ್ಲಿದ್ದ ಕನಕಲತೆಯ ಸಂಗತಿಯನ್ನು ಅವರಿಗೆ ತಿಳಿಸಿ ಕನಕಲತಾ ವಿಕ್ರಮಸಿಂಹರಿಗೆ ಮದುವೆ ಮಾಡಿಸಿದನು. ಮಧೂಲಕನ ಮಿತ್ರರಿಬ್ಬರೂ ಮಧೂಲಕನನ್ನು ಹುಡುಕುತ್ತಿರುವಾಗ ಅವನು ಒಂದು ಕಾಡಿನಲ್ಲಿ ಅಲೆಯುತ್ತಿದ್ದುದನ್ನು ಕಂಡು ಅವನನ್ನು ವಿಕ್ರಮಸಿಂಹನ ಕೈಯಿಂದಲೇ ಕೊಲ್ಲಿಸಬೇಕೆಂದು ಹಿಡಿದು ತರುತ್ತಿರುವಾಗ ವಿಕ್ರಮಸಿಂಹನ ಮದುವೆಗಾಗಿ ಹೋಗಿದ್ದ ಬ್ರಾಹ್ಮಣರನ್ನು ಕಂಡು ಅವರಿಂದ ವಿಕ್ರಮಸಿಂಹನ ವಿಷಯವನ್ನು ತಿಳಿದುಕೊಂಡು ಮಧೂಲಕನನ್ನು ಋಷ್ಯಾಶ್ರಮಕ್ಕೆ ಎಳೆದುಕೊಂಡು ಹೋದರು. ಋಷಿಯು ಮಧೂಲಕನು ಪಶ್ಚಾತ್ತಾಪಪಡುತ್ತಿರುವುದನ್ನು ಕಂಡು ಅವನ ಅಪರಾಧವನ್ನು ಕ್ಷಮಿಸುವಂತೆ ವಿಕ್ರಮಸಿಂಹನಿಗೆ ಹೇಳಿ ಮಧೂಲಕನಿಗೆ ಸನ್ಯಾಸವನ್ನು ಕೊಡಿಸಿದುದಲ್ಲದೆ ಮಧೂಲಕನ ಮಿತ್ರರಿಗೆ ಕನಕಲತೆಯ ಸಖಿಯರನ್ನು ಕೊಡಿಸಿ ಮದುವೆ ಮಾಡಿಸಿದನು.

ನಾಟಕದ ಪಾತ್ರಗಳು.

1.	ವಿಕ್ರಮಸಿಂಹ	ನಾಯಕ.
2.	ಕನಕಲತೆ ...	ಕಥಾನಾಯಿಕೆ.
3.	ಧೌರೇಯಕ ..	ವಿದೂಷಕ.
4.	ಮಧೂಲಕ ...	ಕನಕಲತೆಯ ಸೋದರಮಾವ.
5.	ಮಯೂರಕ ...	ಮಧೂಲಕನ ಮಿತ್ರರು.
6.	ಲುಬ್ಧಕ ...	
7.	ಮಂದಾರಿಕೆ ...	ಕನಕಲತೆಯ ಸಖಿಯರು. ಇವರಲ್ಲಿ ಮಾಲಿನಿಯು ಮಧೂಲಕನ ಪಕ್ಷಪಾತಿನಿ.
8.	ಸಾಧನಿಕೆ ...	
9.	ಮಾಲಿನಿ ..	
10.	ವಕ್ರಾಂಗಿ ...	ಮಧೂಲಕನ ಕಡೆಯ ಯಕ್ಷಿಣಿ.
11.	ಅರಿಕೇಸರಿ ..	ಅನರ್ಘಪುರದ ದೊರೆ.
12.	ಸ್ವಯಂಪ್ರಭೆ ...	ಕನಕಲತೆಯ ತಾಯಿ.
13.	ಜರಂತಕ ...	ಸ್ವಯಂಪ್ರಭೆಯ ಕಂಚುಕಿ.
14.	ಪ್ರಮಥಾನಂದ	ಋಷಿ.
15.	ಸಮರ್ಥಕ ...	ಋಷಿ ಶಿಷ್ಯರು.
16.	ಕಪರ್ದಕ ...	
17.	ಭದ್ರಕ ...	
18.	ಕುಮಾರಕ ...	
19.	ವಟುಕ	

ಇವರಲ್ಲದೆ ಸೂತ್ರಧಾರ, ನಟಿ, ಕಳ್ಳರು, ಶಿಪಾಯಿಗಳು, ಬ್ರಾಹ್ಮಣರು ಮೊದಲಾದವರ ಪ್ರವೇಶ.

ಶ್ರೀರಸ್ತು. ಅವಿಘ್ನಮಸ್ತು.

ಕರ್ಣಾಟಕ

ಕನಕಲತಾಪರಿಣಯ ನಾಟಕಂ.

ಪ್ರಥಮಾಂಕಂ.

ನಾಂದೀ :—

ಶಾ|| ವಿ|| ಶ್ರೀದಾಕ್ಷಾಯಣಿ ಜೀರಿಕಾಗುಡಮಿಡಲ್ ಮೆಟ್ಟಕ್ಕಿಯಂಮೆಟ್ಟಿ ನಿಂ | ದಾವಂ ಶಂಕರಶೀರ್ಷವಮಂ ನಿರುಕಿಸುತ್ತುಂ ಗಂಗೆಯಂ ಕಂಡು ಸಂ || ಮೋದಂ ಗುಂದಿ ಕರುಂಬೆ ಸಪ್ತಪದಿಯೆಂಬ ವ್ಯಾಜದಿಂದಾಕೆಯಾ | ಪಾದಾಂ ಭೋಜಮೊಳಾಗಳೊಲ್ದಿರಗಿಮಂ ಪಾಲಿಕ್ಕೆ ಪಾರ್ಥಾಸ್ತ್ರದಂ || ೧ ||

(ನಾಂದ್ಯಂತದೊಳ್ ಸೂತ್ರಧಾರಂ ರಂಗವಂ ಸಾರ್ದು ಪುಷ್ಪಾಂಜಲಿಯಂ ಸೂಸಿ)

ಸೂತ್ರಧಾರಂ—ಕಂ || ಗಿರಿಶನತೊಡೆಯೊಳ್ನಲಸುತೆ |
ನಿರಂತರಂ ಮುನಿಸಮೂಹಸನ್ನುತೆಯಾದಾ ||
ಗಿರಿರಾಜಾತ್ಮಜೆನಲವಿಂ |
ಪೊರೆಗೀಕೃಷ್ಣಾವನೀಂದ್ರನಂ ಸಂತತಮುಂ || ೨ ||

(ಎಂದು ತೆರೆಯತ್ತಲ್ ನೋಡಿ) ಆರ್ಯೇ ! ಇತ್ತ ಬಾರಾ. (ಎಂದು ನಿಟ್ಟಿಸಿ) ಇದೇನಿವಳೆನ್ನೊಳ್ ಸೊಲ್ಲಿಸಳ್ ! ಈಗಳಂತಿವಳ್ ಕನಲ್ದಿರ್ಪುದ ಕ್ಕೆ ಕಾರಣಮೇಂ ? (ಎಂದು ಚಿಂತಿಸಿ) ಚೀ ! ಸ್ತ್ರೀಸ್ವಭಾವಮೇಗಳು ಮಿಂತಪ್ಪುದೆ.

ಕಂ || ಲಲನೆಯುರೆಳಸಿದತೊಡುವಂ |
ನಲವಿಂ ಮನಸದನ್ನರೊಸೆದುತಂದೀಯದೊಡುಂ ||

ವಿಲಸತ್ಪ್ರಣಯಾವಸರದೆ |
ತಿಳಿಯದೆಯಪರಾಧಮೆಸಗಿದೊಡುಮುರೆಮುಳಿವರ್ ‖ ೩ ‖

ಎಲೆಲೆ! ನಾನಂತಪ್ಪಪರಾಧಮನಾವುದುಮನೆಸಗಲಿಲ್ಲಂ; ಒಳ್ಳಿತ್ತು. ಈಗಳಿಂತುಕರೆದಪೆಂ. (ಎಂದು ಜವನಿಕೆಯಂ ಬಗೆಸಾರ್ದು) ಆರ್ಯೇ! ಕರ್ಣಾಂತವಿಸ್ತೀರ್ಣನಯನೆ!! ಮದೇಭಮಂಜುಳಗಮನೆ!!! ಇತ್ತಲೈತಾರ.

ನಟಿ—(ಪ್ರವೇಶಿಸಿ) ಆರ್ಯ! ಇದೇಂ! ನೀನೇಗಳುಮಿಲ್ಲದವಾಗ್ವೈಖರಿಯಿಂದೆನ್ನಂ ವ್ಯಾವರ್ಣಿಸಿಕರೆವೆ?

ಸೂತ್ರಧಾರಂ—ಆರ್ಯೇ! ನಿನ್ನನ್ನರಪ್ಪಕೋಪಾಕುಲಿತಮಾನಸೆಯರಾದಸಿಯರಂಕರೆವ ರೀತಿಪೆರತಾವುದು?

ನಟಿ—(ಅಚ್ಚರಿಯಿಂದೆ) ನಾನೇಗಳ್ ಕೋಪಾಕುಲಿತ ಮಾನಸೆಯಾಗಿರ್ದೆಂ?

ಸೂತ್ರಧಾರಂ—ಅಂತಾದೊಡೆ ನಾಂಕರೆಯುಲೊಡಂ ನೀನದೇಕೆಬಾರಲಿಲ್ಲಂ?

ನಟಿ—ಆರ್ಯ! ನಾನಾಗಳೊಂದು ಬಿಸವಂದಮನೀಕ್ಷಿಸುತಿರ್ದೆಂ.

ಸೂತ್ರಧಾರಂ—ಅದೇಂ?

ನಟಿ—ಇತ್ತಲೆ ಕಣ್ಗೊಳಿತಿರ್ಪುದುನೋಡ,

ಚಂ‖ಮಾ‖ ಪರಭೃತಮಿಂಚರಂಬಡೆದು ಪಾಡುವುದಂಪದೆದಾಲಿಸುತ್ತೆಪಾ|
ದರಿಯುದುತಾಂತಳರ್ತಕತದಿಂ ಮಿಗೆ ಪೊಂಪುಳಿವೋಗಲಂತದಂ ‖
ನಿರುಕಿಸಿತಳ್ಕಗೆಯ್ಯಲೆಳಸುತ್ತುರು ಶೀತಲಮಂದಮಾರುತಂ |
ಬರಲಿರದೊಲ್ಲೆನೆಂದು ತಲೆಯಂ ಕೊಡಪುತ್ತಿದಿರಲ್ಲಿರಾಜಿಕಂ ‖ ೪ ‖

ಸೂತ್ರಧಾರಂ—(ನಕ್ಕು) ಪ್ರಿಯೇ! ಇದೆಲ್ಲಮುಂ ಬಸಂತನೇಳ್ಗೆಗಡ. ಇದಂತಿರ್ಕೆ. ಇಂದೆಮ್ಮ ಪೂರ್ವಪುಣ್ಯ ಪರಿಪಾಕದಿಂದಿಲ್ಲಿ ನೆರೆದಿರ್ಪಸಾಮಾಜಿಕರನಾವುದನಾದೊಡಮೊಂದು ನವರಸಭರಿತಮಾದ ನವೀನ ನಾಟಕಮನಭಿನಯಿಸಿ ನಲವಡಿಸಲ್ಕೆಳಸಿರ್ಪೆಂ. ನೀನೀಕಜ್ಜದೊಳೆಲ್ಲಮುಮಂ ಸಜ್ಜುಗೊಳಿಸು.

ನಟ—ಆರ್ಯ! ಅಂತಪ್ಪ ನಾಟಕಮದಾವುದು ?

ಸೂತ್ರಧಾರಂ—ಶ್ರೀಮತ್ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀಕೃಷ್ಣರಾಜೇಂದ್ರ ಭೂಪಾಲಕಕೃಪಾಪರಿಪೋಷಿತಂ ಶ್ರೀಪುರ ಶ್ರೀಕಂಠಶಾಸ್ತ್ರಿಯೆಂಬ ಕಬ್ಬಿಗಂ 'ಕನಕಲತಾಪರಿಣಯ' ಮೆಂಬ ನವರಸಭರಿತಮಾದ ನವೀನನಾಟಕಮಂ ಸಮೆದಿರ್ಪನಲ್ತೆ. ಅದನೆ ಅಭಿನಯಿಸಿ ಈ ಸಭಾಸದರಂ ನಲವಡಿಪಂ.

ನಟ—(ವಿಸ್ಮಯಂಗೊಂಡು) ಆರ್ಯ! ಈಗಳೀಗಳ್ ಕಬ್ಬಂಗಳಂಗದಿಪುವರ್ಕೆ ತೊಡಗಿರ್ಪಾತನ ಕಬ್ಬದೊಳೀಸಾಮಾಜಿಕರ್ಗೊಲ್ಮೆಯೊಗೆವುದೆಂತು ?

ಸೂತ್ರಧಾರಂ—(ನಕ್ಕು) ಎಲೆಮುಗುಪೆ! ಇದೇನಿಂತುನುಡಿವೆ ? ಚೆನ್ನಾದುದು, ಚೆನ್ನಾದುದು.

ಕಂ || ಬಿದಿಗೆಯೊಳಾಮುಚ್ಚಂಜೆಯೊ |
ಳುದಯಿಸುತಿರ್ಕಳೆಗಳಿಂದೆ ಮಾತ್ರಂ ತೊಳಪಾ ||
ಬಿದುವಂಜಗತೀತಳದೊಳ್
ಪದೆದೀಕ್ಷಿಸಿಮುದಮನೋಂತದಿರ್ಪರುಮೊಳರೇಂ || ೫ ||

ಅಂತದರಿಂದೀನಾಟಕದೊಳೆಲ್ಲರ್ಗುಂ ವೊಲ್ಮೆಯೊಗೆವುದರೊಳ್ ಸಂದೆಯಮಿಲ್ಲಂ. ನೀಂ ಬೇಗದಿಂದೆಮ್ಮ ಪಾತ್ರವರ್ಗಮಂ ಸಜ್ಜುಗೊಳಿಸ.

ನಟ—ಆರ್ಯನಾಣತಿ. (ಎಂದು ತೆರಳ್ದಳ್)

ಸೂತ್ರಧಾರಂ—(ನಿಟ್ಟಿಸಿ) ಇದೇನಾಗಳೆ ನಾಟಕಾರಂಭಮಾಗಿರ್ಪಂತೆ ಕಾಣ್ಬುದು! ಕನಕಲತೆಯ ಕೆಳದಿಯಾದ ಮಾಲಿನಿ ಇತ್ತಲೈತರುತಿರ್ಪಳ್, ಆನುಂ ಪೋಗಿ ಮುಂದಣ ಪಾತ್ರಂಗಳನಸುಗೊಳಿಪೆಂ. (ಎಂದು ತೆರಳ್ದಂ)

ಇಂತಿದು ಪ್ರಸ್ತಾವನೆ.

(ಅನಂತರಂ ಮಾಲಿನಿ ರಂಗಮಂ ಪ್ರವೇಶಿಸಿ)

ಮಾಲಿನಿ—ಚಂಡವಿಕ್ರಮ ಮಹಾರಾಜಂ ತನ್ನಣುಗಿಯಾದ ಕನಕಲತೆಯಂ ಮೈದುನನಾದ ಮಧೂಲಕಂಗಿತ್ತು ಮದುವೆಗೆಯ್ಯಲ್ಕೆಳಸಿರ್ಪಂ. ಅಂತಾದೊಡೆ ಚಂಡವಿಕ್ರಮಂಗೆ ಕುವರರಿಲ್ಲದಿರ್ಪುದರಿಂ ಬಳಿಯಂ ರಾಜ್ಯಮೆಲ್ಲಮುಮಳಿಯನೆನಿಸುವೀ ಮಧೂಲಕಂಗೆ ಕೈಸಾರ್ಗುಂ. ಆಗಳ್ ನಾನೆ ಮಧೂಲಕನಂ ಕೆಯ್ವಿಡಿದು ಪಟ್ಟಮಹಿಷಿಯಾಗುವೆಂ (ಎಂದು ನಿಟ್ಟುಸಿ) ಇದೇಂ! ಸಾಧನಿಕೆ ಇತ್ತಲೈತರುತಿರ್ಪಳ್ ಬಳ್ಳಿತ್ತು (ಎಂದು ಮುಂತಣ್ಗೆ ಪೋಗಿ) ಎಲೆ ಸಾಧನಿಕೆ! ಇದೆಲ್ಲಿಗೆ ಪೋಪೆ?

ಸಾಧನಿಕೆ—(ಪ್ರವೇಶಿಸಿ) ಎಲೆಗೆ! ಮಾಲಿನಿ! ರಾಯಗುವರಿಯಾದ ಕನಕಲತೆಗೆ ಶಿಶಿರೋಪಚಾರ ಸಾಮಗ್ರಿಯಂ ಕೊಂಡುಬರಲ್ಕೆಂದು ಪೋಪೆಂ.

ಮಾಲಿನಿ—ಅವಳ್ಗೇಕೆ?

ಸಾಧನಿಕೆ—ಅದಂ ನೀನರಿಯೆಯೇಂ? ಶ್ರೀಪುರಾಧಿಪನ ವಸಂತೋತ್ಸವದೊಳ್ ದರ್ಪಕೋದ್ಯಾನದೊಳಿರ್ಪ ಗೌರೀದೇವಾಲಯಕೆ ಸಬ್ಬಾಣಿಯಂ ಪೂಜಿಸಲ್ಕೆಂದವಳ್ ಪೋಗಿರ್ದಾಗಳಲ್ಲಿರ್ಪ ಬಳ್ಳಿವನೆಯೊಳ್ ವಿಮಲನಗರದಾಳ್ದನಪ್ಪ ವಿಕ್ರಮಸಿಂಹ ಮಹಾರಾಜಂ ತನ್ನ ಕೆಳೆಯನಾದ ಧೌರೇಯಕನೊಡಂ ಬಿಹರಿಸುತಿರ್ದುದಂ ಕಂಡು ಮೋಹಿಸಿದಳ್. ಆತನುಮೆನ್ನ ಕೆಳದಿಯ ಚೆಲ್ವನಭೀಕ್ಷಿಸಿ ರೋಡಾಡಿದನಾದಂ. ಕನಕಲತೆ ಲಲನಾಜನ ಸುಲಭಮಾದ ಲಜ್ಜೆಯಿಂ ತನ್ನಭಿಪ್ರಾಯಮನವಂಗರಿಪಲ್ಕೆ ಬಗೆಯೊಳಂಜಿ ಪಿಂದಿರುಗಿ ಬಂದಳ್. ಈಗಳವಳ್ ನಿದ್ರಾಹಾರಂಗಳನುಳಿದು ಪಗಲಿರುಳು ಮವನಂಜಾನಿಸುತೆ ಪಲುಂಬಿ ಪಂಬಲಿಸಿ ಬಸವಳಿದಿರ್ಪಳ್.

ಮಾಲಿನಿ—(ನಕ್ಕು) ಅವಳೆಳಪು ಕೈಸಾರದುಗಡ.

ಸಾಧನಿಕೆ—ಅದೇಕೆ?

ಮಾಲಿನಿ—ಅವಳಂ ಮಾರಾಯನಾದ ಚಂಡವಿಕ್ರಮಂ ತನ್ನ ಮೈದುನನಾದ ಮಧೂಲಕಂಗಿತ್ತು ಮದುವೆಗೆಯ್ಯಲೆಳಸಿರ್ಪಂ.

ಸಾಧನಿಕೆ—ಆಃ! ಲೋಗರೆಗ್ಗತನಮನೇವ್ರೊರೆವೆಂ! ತಾಯ್ತಂದೆವಿರ್ ತಂ ತಮ್ಮಣುಗಿಯರಂ ಪ್ರಾಪ್ತವಯಸ್ಕೆಯರೆನಿಸಲೊಡಂ ತಕ್ಕ ವರಂಗಿತ್ತು ಮದುವೆಗೆಯ್ಯದೆ ನಂಟನಾಗಿಯುಂ **ಪೊ**ರೆಯೂರೊಳಿರ್ಪನಾಗಿಯುಂ ಸಿರಿವಂತನಾಗಿಯುಮಿರ್ಪ ಅವಿವೇಕಿಯಾದೊರ್ವಂಗಿತ್ತು ವಿವಾಹವೆಸಗಿ ಆಮರಣಾಂತಮಾಕುವರಿಯರಂ ದುಃಖವೆಂಬ ಮುನ್ನೀರೊಳ್ಮುಳುಂಗಿಪರಲ್ತೆ. ಈ ಮಧೂಲಕಂ ಬುವಿಯಾಣ್ಮನ ಮೈದುನನೆಂದು ಬೆರೆತುಬೀಗಿ ಬಡವರಂಕಾಡಿ ಸಜ್ಜನರಂ ಕಟ್ಟಳ್ಕೆಗಿರ್ಕೆಯೊಡರ್ಚಿ ಕಳ್ಳುಣಿಗಳೊಳ್ಮೊದಲಿಗನಾಗಿರ್ಪಂ. ಎಲೆಗೆ! ಮಾಲಿನಿ! ಎನ್ನ ಕೆಳದಿಯಿಂತಪ್ಪ ಕೇಡಾಳಿಯಂ ವರಯಿಸಳಲ್ತೆ. ಅಂತಪ್ಪುದು.

ಕಂ || ಸೊಗಯಿಪರಾಯಂಚೆಯನುಳಿ |
ದೊಗುಮಿಗೆಕಾಳ್ಗೆಯ್ತವಲ್ಲಿ ಬಿಹರಿಪಬಕನಂ ||
ಜಗದೊಳ್ಪೆಣ್ಣಂಚೆಯದೆಳ |
ಸುಗುಮೇಂ ಮನವೊಲ್ದುನಾಡೆ ಮರುಳಾಗುತ್ತಂ || ೬ ||

ಈಗಳಾನಿಂತು ತಳ್ವುವುದುಚಿತಮಲ್ತು. ಕನಕಲತೆಯ **ಪೊ**ರೆಯನುಳಿದು ಬಂದು ಪಲಕಾಲಮಾದುದು. ಅದರಿಂ ಶಿಶಿರೋಪಚಾರ ಸಾಮಗ್ರಿಗಳಂ ಕೊಂಡುಪೋದಪೆಂ. (ಎಂದು **ತೆರಳ್ದಳ್**)

ಮಾಲಿನಿ—ಈಗಳಾನುಂ **ಪೋ**ಗಿ ನಮ್ಮ ಮಧೂಲಕಂಗೆ ಕನಕಲತೆಯ ವಿಷಯಮನರಿಪುವೆಂ. ಅಲ್ಲದೊಡೆ ಎನ್ನೆಳಪು ಮೆಯ್ಗರೆವುದುಗಡ.

(ಎಂದು **ತೆರಳ್ದಳ್**)

(ಬಳಿಯಂ ವಿರಹಾವಸ್ಥೆಯೊಳಿರ್ಪ ಕನಕಲತೆಯುಂ ಮಂದಾರಿಕೆಯುಂ ಪುಗುವರ್)

ಕನಕಲತೆ—ಎಲೆಗೆ ಮಂದಾರಿಕೆ! ಮಾರಾಯನಪ್ಪ ವಿಕ್ರಮಸಿಂಹನೆನ್ನಂ ಪರಿಗ್ರಹಿಸುವನೇಂ ?

ಮಂದಾರಿಕೆ—ಎಲೆ ಕೆಳದಿ! ಇದೇನಿಂತು ನುಡಿವೆ? ಆತಂಗೆ ನಿನ್ನೊಳಳ್ಕರೊಗೆಯದಿರ್ದೊಡೆ ಲತಾಗೃಹದೊಳೆವೆಯಿಕ್ಕದೆ ನಿನ್ನನಂದು ನೋಳ್ಪುದೆಂತು ?

ಕಂ || ತಿಳಿಗೊಳನೆಡೆಯೊಳ್ ತೊಳತೊಳ |
ತೊಳಗುವಕಮಲಿನಿಯು ನೀಕ್ಷಿಸುತ್ತಂ ಮುದದಿಂ ||
ಬಳಿಸಾರ್ದು ಬಂಡನೀಂಟದೆ |
ಯುಳಿವುದೆಷಟ್ಪದಮಾಗುವೆ! ಜಗವೇಕಡಗಿದಮಧುಪಂ || ೭ ||

ಕನಕಲತೆ—(ನಿಟ್ಟುಸಿರ್ಕ್ಕಿ)

ಕಂ || ಅಂದಂಬೆತ್ತಾವನದೊಳ |
ಗಂದತಿಮುದಮೊಂದುತಂ ಲತಾಮಂಟಪದೊಳ್ ||
ಚಂದದೆ ಬಿಹರಿಸುತಿರ್ದಾ |
ಸುಂದರನಂ ನಾನದೆಂದುನಡೆ ನೋಡುವೆನೋ || ೮ ||

ಕಂ || ಅರಸನ ಮುಖಚಂದ್ರಮನಂ |
ನಿರುಕಿಸಿ ಬಾಯ್ದೆರೆಯುಸೊದೆಯನೀಂಟುತಮನಿಶಂ ||
ಪರಿಪರಿಯಚಾಟುವಚನಮ !
ನೊರೆಯುತ್ತಂ ಬಿನದಿಪಬಲೆ ಧನ್ಯೆಯೆನಿಪ್ಪಳ್ || ೯ ||

ಎಲೆ ಮಂದಾರಿಕೆ! ಎನಗಂತಪ್ಪಸ್ವೈಪಿಕರ್ಮಮೇಂ? ಅಕಟಕಟಾ!

(ಎಂದು ಮುಚ್ಚೆಗೆಸಂದಳ್)

ಮಂದಾರಿಕೆ—ಫಡಫಡ. ಸಾಧನಿಕೆ ಇನ್ನುಮೇಕೆ ಶಿಶಿರೋಪಚಾರ ಸಾಮಗ್ರಿಗಳಂ ಕೊಂಡುಬಾರಳ್. (ಎಂದು ಸೆರಂಗಿನಿಂ ಬೀಸುತೆ) ಎಲೆಲೆ! ನಿಷ್ಕರುಣನಾದ ಮೀಂಬಳಪಿಗೆಯ !

ಕಂ || ಕುಸುಮಾಯುಧ ನೀನಬಲೆಯ |
ನೊಸೆದೋವದೆ ತೀಕ್ಷ್ಣಮೆನಿಪ ಶರಸಂಕುಲದಿಂ ||
ದಿಸುತಿರ್ಪ ನಿನಗಿದುಚಿತಂ |
ರಸೆಯೊಳ್ ಹರಿಹರಿಣಿಯಲ್ಲಿ ದಯೆಗೆಯ್ದಪುದೇಂ || ೧೦ ||

(**ಬಳಿಯಂ ಶಿಶಿರೋಪಚಾರ ಸಾಮಗ್ರಿಗಳಂ ಪಿಡಿದು ಸಾಧನಿಕೆ ಪ್ರವೇಶಿಸಿದಳ್**)

ಸಾಧನಿಕೆ—ಕೆಳದಿ! ಕನಕಲತೆ! ಈ ಸಿರಿಕಂಡದರಸಮಂನಿನ್ನೊಡಲ್ಗೆತಳಿದಪೆಂ. (**ಎಂದು ಚಂದನರಸ ಸೇಚನೆಯಂಗೆಯ್ದಳ್**)

ಮಂದಾರಿಕೆ—ಎಲೆ ಸಖಿ! ಈ ನೆಯ್ದಿಲೆಲೆಯಂ ನಿನ್ನೆರ್ದೆಯೊಳಿಡುವೆಂ. (**ಎಂದು ನಳಿನೀಪತ್ರಂಗಳಂ ಕನಲತೆಯೆರ್ದೆಯೊಳಿಡುವಳ್**)

ಕನಕಲತೆ—(**ಕಣ್ಬನಿದುಂಬಿ**) ಎಲೆ ಮಂದಾರಿಕೆ! ಕಾಳ್ಗಿಚ್ಚಿನಂತೆನ್ನೊಡಲ ಸುರಿಪುವೀ ನೆಯ್ದಿಲೆಲೆಗಳನೇಕೆನ್ನೆರ್ದೆಯೊಳಿಡುವೆ?

ಮಂದಾರಿಕೆ—ಎಲೆ ಮುಗುದೆ! ಈ ಪತ್ರಂಗಳಂತು ಕುಳಿರ್ಕೊಡುವೊಡಂ ನಿನವೇಕಿಂತುಸುಡಿವೆ?

ಸಾಧನಿಕೆ—ಕೆಳದಿ! ನಿನ್ನ ಹೃದಯಚೋರನಾದಾಮಾರಾಯನ ಭಾವಚಿತ್ರಮನಿದೆಕೊಳ್ (**ಎಂದದಂ ಕನಕಲತೆಗಿತ್ತಳ್**)

ಕನಕಲತೆ—ಕಂ|| ಒಡಲಿಚನೆನ್ನಂ ಸರಲಿಂ |
ದಡಿಗಡಿಗುಂ ತೆಗೆದಿಸುತ್ತೆ ನೋಯಿಪನಕಟಾ ||
ಕಡುಪೆಳರಿಂ ನಿನ್ನಂ ನಾಂ |
ನುಡಿಯಿಸೆಯುಂ ನೀನದೇಕೆಸೊಲ್ಲಿಸೆರಮಣಾ || ೧೧ ||

ಎಲೆ ಮನದನ್ನಾ! ನಿರಪರಾಧಿಯಾದ ನನ್ನ ಬಗೆಯಂ ನೀನಪಹರಿಸಿ ದುದುಮಲ್ಲದೆ ನನ್ನಂ ಮನ್ಮಥಹತಕಂಗೀವುದು ತಕ್ಕುದೇಂ, ಛೀ ಛೀ ನಿನ್ನನ್ನರಪ್ಪ ನಿರ್ದಯರುಮುರ್ವಿಯೊಳೊಳರೇಂ? (**ಎಂದದಂನೋಡುತಳ್ತಳ್**)

ಮಂದಾರಿಕೆ—ಎಲೆ ಸಿಗ್ಗಾಳಿ! ಇದೇನಾ ಮಹಾರಾಜನನಿಂತುಪಳಿವೆ? ಇದು ನಿನ್ನಪರಾಧಮೆಗಡ. ಅಂತುಮಲ್ಲದಿದು ಭಾವಚಿತ್ರಂ. ಇದರೊಳ್ಮಾಪ್ರೊಳೆವಾ ವಿಕ್ರಮಸಿಂಹಂ ನಿನ್ನೊಳ್ಳೊಲ್ಲಿಪುದೆಂತು?

ಕನಕಲತೆ--ಎಲೆ ಸಾಧನಿಕೆ.! ಈಗಳಾನೇಗೆಯ್ವುದು?

ಸಾಧನಿಕೆ—ಸಖಿ! ವಿಕ್ರಮಸಿಂಹ ಮಹಾರಾಜಂ ದರ್ಪಕೋದ್ಯಾನದೊಳ್ ವಿಹರಿಸುತಿರ್ಪನೆಂದು ನಮ್ಮ ಕಂಚುಕಿಯಾದ ಜರಂತಕಂ ನುಡಿದಂ ಅದರಿಂ ನಡೆ. ನಾವಾತನಂ ಬಳಿಸಾರ್ದಪಂ.

ಮಂದಾರಿಕೆ—ಎಲೆ ಅಳೀಕಶೀಲೆ! ನೀನಾಗಳನಂತೆ ನಿನ್ನಭಿಪ್ರಾಯಮನಾತಂಗರಿಪಲಂಜುವೆಯಾದೊಡೆ ನಿನ್ನ ಮನೋರಥಮೀಗಳುಂ ಸಫಲಮಾಗದು.

ಕನಕಲತೆ—ಕೆಳದೀ! ಮಂದಾರಿಕೆ! ಎನ್ನ ಹೃದಯಮೆನನ್ನೊಳಾಗಳ್ಣಾಣನ ಮಚ್ಚಿ ಆತನೆಡೆಯುತ್ತಣಿ ನೆನ್ನಂತರ್ಭಿರ್ಜಿಮದು. (ಎಂದು **ತಲೆವಾಗಿ ನಿರ್ದಳ್**)

ಸಾಧನಿಕೆ—ಎಲೆ ರಾಜಕುಮಾರಿ! ನಡೆ ಪೋಪಂ. (**ಎಂದೆಲ್ಲರುಂ ತೆರಳ್ದರ್**)

(**ಅನಂತರಂ ಮಾಲಿನೀ ಮಧೂಲಕರ್ ಪುಗುವರ್**)

ಮಾಲಿನಿ—ಎಲೆ ಮಧೂಲಕ! ಈಗಳೇಗೆಯ್ವೆ?

ಮಧೂಲಕಂ—(**ರೋಷಾಡಿದನಗಿ**) ಗೆಯ್ವುದೇಂ? ಎನಗೆ ಸಗ್ಗಮೆ ಕರಗತಮಾಗಿರ್ಪುದಲ್ತೆ.

ಮಾಲಿನಿ—ಎಲೆಗಾಂಪ! ನೀನಿಂತು ಕಳ್ಳಣಿಯಾಗಿ ತಳ್ವಿರ್ದೊಡೆ ಕನಕಲತೆಯುಂ ವಿಕ್ರಮಸಿಂಹನನಪಹರಿಸಿಕೊಂಡು ಪೋಪಂ.

ಮಧೂಲಕಂ—ಏಂ! ಎನ್ನ **ಪೊರೆಯೊಳಿರ್ಪ** ಕನಕಲತೆಯನಪಹರಿಸುವ್ರದರ್ಕೆ ವಿಕ್ರಮಸಿಂಹನಾರ್ಪನೆ?

ಮಾಲಿನಿ—ಆವಳ್ನಿನ್ನ **ಪೊರೆಯೊಳೆಲ್ಲಿರ್ಪಳ್**?

ಮಧೂಲಕಂ—ಎಲೆ ಮಾಲಿನಿ! ಇದೊ ಕನಕಲತೆ. (ಎಂದು ಕಂಬಮಂ ತಳ್ಕೈಸುವುದರ್ಕೆ ಪೋಗಿ ನೆಲನೊಪ್ಪೆಳ್ದು) ಎಲೆ ಕನಕಲತೆ! ಎನ್ನಂ ನೂಂಕುವೆಯೇಂ? ಈಗಳೆ ನಿನ್ನ ಮುಂಗುರುಳಂ ಪಿಡಿದು ಸೆಳೆದು ನಿನ್ನ ನುರುಳ್ಚುವೆಂ. (ಎಂದೆಳ್ದು ಮತ್ತಂ ಬಿಳ್ದಂ)

ಮಾಲಿನಿ—(ನಕ್ಕು) ಎಲೆ ಮಧೂಲಕ! ಕನಕಲತೆಯುಂ ಬಿಡು. ನಾನಿರ್ಪೆನಲ್ತೆ. ಈಗಳಾವಿರ್ವರುಂ ಪೋಗಿ ಕೊರಲುವ್ವಂಬರ್ಪನ್ನೆಗಂ ಮದ್ಯಮನೀಂಟಿ ನಲಿದಾಡುವಂ ಬಾರ. (ಎಂದು ಮಧೂಲಕನ ನೆಳ್ತರಿಸುವಳ್)

ಮಧೂಲಕಂ—(ಮೇಲೆಳ್ದು) ನೀಂ ಮುಂತೆ ನಡೆ. ನಾನುಂ ಬಂದಪೆಂ. (ಎಂದಿರ್ವರುಂ ತೆರಳ್ದರ್.)

(ಅನಂತರಂ ರಾಜನುಂ ವಿದೂಷಕನುಂ ಪುಗುವರ್.)

ರಾಜಂ—ಚಂ|| ಮಾ|| ಬಡನ ಕುಸೋಟಕ ಕರ್ನೆದೆ ಕಂಪಿಪವ್ರೊಲ್ಕುಚಭಾರ
ದಿಂದೆತಾಂ| ನಡುಗೆನಿತಂಬದಾಭರದೆ ಸೇದೆನಡುತ್ತಿಲಜ್ಜೆಯಿಂದೆಮೆ||
ಲ್ಲಡಿಯಿಡುತಂತಿರಳ್ದ ಲಲನಾಮಣಿಯುಂ ನಡೆನೋಡಲಾಯ್ತನಾ|
ಗಡೆಮದನಂಕನಲ್ದು ಬಿಡುತೀಕ್ಷ್ಣಶರಂಗಳನೆಚ್ಚಸಕ್ಕಟಾ ||೧೦||

ವಿದೂಷಕಂ—ಕೆಳೆಯಾ! ನನೆಗೋಲನಪೂಸರಲನೋವನೆ ಸೈಸದನೀಂ ರಣರಂಗದೊಳರಿನೃಪರಕೂರಂಬುಗಳ ನೋವಂ ಸೈಸಿಗೆಲ್ವುದೆಂತು?

ರಾಜಂ—ನನಗೋಲನಪೂಸರಲನೋವಿಂಗುಂ ರಿಪುನೃಪರ ಕೂರಂಬುಗಳ ನೋವಿಂಗುಮಿರ್ಪ ತಾರತಮ್ಯಮಂ ನೀಂ ತಿಳಿಯೆ ಗಡ.

ವಿದೂಷಕಂ—ನೀಂ ತಿಳಿದಿರ್ಪೆ ಗಡ. ಈಗಳೆನ್ನ ಕೇಳ್ಕೆಗುತ್ತರಮಂ ಕುಡು.

ರಾಜಂ—ಅದೇಂ?

ವಿದೂಷಕಂ—ಕನಕಲತೆಗೆ ನಿನ್ನೊಳಳ್ಕರಿರ್ಪುದೇಂ?

ರಾಜಂ—ಇರ್ಪುದೆಂದು ನುಡಿವುದರ್ಕೆ ಸಂದೆಯಮೇಂ?

ವಿದೂಷಕಂ—ನೀನದನೆಂತು ತಿಳಿವೈ?

ರಾಯಂ—ಕಂ॥ ಸ್ಮರವಿಭ್ರಮವೊಗೆದಿದಲಾ |
ತರುಣಿಮುಖಗೆ ಬಾಗುಳಕ್ಕೆ ಬೀಡಾಗುತ್ತಿರಲ್ ॥
ತರಳತರವೆನಿಸೆ ಕಡೆಗ |
ಣ್ಣರಿಸೆ ನಾನೆನ್ನನಾಕೆಯೊಲ್ಲದನವರಿಂ ॥ ೧೩ ॥

ವಿದೂಷಕಂ—(ಆಲೋಚಂಗೆಯ್ವು) ಎಲೈ! ಕಡೆಗಣ್ಣೋಟದಿಂದಮೆ ತಿಳಿವಯಲ್ತೆ. ಈಗಳ್ ನಿನ್ನನಾಂ ಮೋಹಿಸಿರ್ಪೆನೊ ಮೋಹಿಸಿಲ್ಲವೊ, ಅದನರಿದು ಪೇಳ. (ಎಂದು ಕಡೆಗಣ್ಣೋಟದಿಂ ನೋಡುವಂ)

ರಾಯಂ—ಎಲೆ ಗಾಂಪ! ಪುರುಷಂ ಪೆರತೊರ್ವ ಪುರುಷನಂ ಮೋಹಿಪ್ಪುದೆಂ ದೊಡೇಂ? (ಎಂದು ನಗುವಂ)

ವಿದೂಷಕಂ—(ಕನಲ್ದು) ಆದೊಡೆ ನೀನೆನ್ನಂ ಮೋಹಿಸುವುದಿಲ್ಲಂ. ಇನ್ನೀ ನಿರ್ಭಾಗ್ಯನಾದ ಪಾರ್ವನಿಂದೇಂ ಫಲಂ (ಎಂದು ತೆರಳಲುಜ್ಜುಗಿಸುವಂ)

ರಾಯಂ—ಎಲೆ ಧೌರೇಯಕ! ಇತ್ತ ಬಾರ. ಮುನಿಯದಿರ. ಒರ್ವ ಪುರುಷಂ ಪೆರತೊರ್ವ ಪುರುಷನಂ ಪ್ರೀತಿಪ್ಪುದಕ್ಕೆ ಕೆಳೆಯೆಂದು ಪೆಸರ್. ಒರ್ವಳಂಗನೆ ಯೊರ್ವ ಪುರುಷನಂ ಪ್ರೀತಿಪ್ಪುದಕ್ಕೆ ಮೋಹಮೆಂದು ಪೆಸರ್. ನಿನಗುಮೆನಗುಮೊಪ್ಪಿರ್ಪ ಪ್ರೀತಿಗೆ ಕೆಳೆಯೆಂದು ಪೆಸರಲ್ತೆ. ನಡೆ, ಈ ನಿಷ್ಫಲಮಾದ ಸಂಭಾಷಣದಿಂದೇಂ? ಈ ಬನಸಿರಿಯುಂ ಕಣ್ಣಾರೆ ನೋಡಿ ಕಡಂಗಿರ್ಪೆನ್ನ ಮನಮಂ ಬಿನದಂಗೊಳಿಪೆಂ.

ವಿದೂಷಕಂ—ಅಂತೆಯಕ್ಕೆ (ಎಂದಿರ್ವರುಂ ವನಮಂ ಪುಗುವರ್)

ರಾಯಂ—ಈ ಯಾರವೆಯ ಸೊಬಗೆಲ್ಲಮೆನ್ನ ಮನೆಗೊಳಿಸುತ್ತಿರ್ಪುದನೈಸೆ, ಎಲೆ ಧೌರೇಯಕ!

ಮ॥ ಸ್ರ॥ ಇದೆಕೊಳ್ ಸಾಲಾಗಿ ಕುಳ್ಳಿರ್ಪರಲುಣಿಮರುಗಲ್ ವೇಣಿಯುಂ ತೊಪ್ಪಿರಲ್ ಛಂ | ದದೊಳೀಸ್ಪೂಗೊಂಚಲುಂ ಕಣ್ಗೊಳಿಸೆ ಗುರು

ಕುಚಂಬೊಲ್ಕನತ್ಪಲ್ಲವಂಗಳ್ || ಅಧರದ ರಾಗದಿಂ ಚೆಲ್ವುವಡೆದು ಮೆ
ಲೆಸೆವಿರಲ್ ಕಾಮಿನೀ ರೂಪಮಂ ತಾ| ಳ್ದುದವೊಲ್ ರಾರಾಜಿಸುತ್ತಿ
ರ್ಪುದು ಸೊಬಗಿನಶೋಕಂ ಧೃತಾನೇಕಶಾಖಂ || ೧೩ ||

ವಿದೂಷಕಂ—ಕೆಳೆಯಾ! ನೋಡಲೊಡಂ ನೋಟಕರ್ಗೆ ಸಗ್ಗಸೊಗಮನೊದವಿಸಿ ತಣಿಯಿಪ ಫಲಮಂ ಪೆರ್ಗ್ಗಳಸುಳಿದೀ ಬಂಜೆಯೆನಿಪಸುಗೆಯನೇಕೆ ಬಣ್ಣಿಪೆ! ಇದೊ ನೋಡು.

ಕಂ|| ಮಿಸುಮಿಸುಗುತ್ತೆ ನಿಜಕಾಂತಿಯಿಂ |
ನಸುಮಿಂಪಿ*ರ್ಗೆಳಪ ದಾಡಿಮೀಫಲಮಿದುತೊ ||
ಟ್ಟನೆ ಬಾಯೊಳ್ನೀರೊಸರಲ್ ||
ಮನಮೊಳ್ ಮುದಮೊದವಿಸುತ್ತಮಿರ್ದಪ್ಪುದಪದಾ ||೧೪||

ರಾಯಂ—(ನಗುತ್ತೆ) ಎಲೆ ಕೆಳೆಯಾ! ಚೆನ್ನನೆ ಬಣ್ಣಿಸಿದೈ. ಇತ್ತಲ್ ನಿರುಕಿಸ.

ಚಂ|| ಮಾ|| ಅಳಿಕುಲಶಿಂಜಿತಂ ಶ್ರುತಿಯುಮಾಗಿರೆ ಕೋಕಿಲ ಪಂಚಮ
ಸ್ವರಂ | ವಿಲಸಿತಗಾನಮಾಗೆ ಪಸುರಾಪೆಲೆಯೆಂಬುಡೆಯುಟ್ಟು ನಾಡೆ ಚೆಂ ||
ದಳಿ*ರ್ಗಳ ಕಂಚುಕಂಪೊಡುತ್ತೆ ಮಾರುತ ಕಂಪಿತಮಾಗಿ ನೋಟಕ | ರ್ಗಳ
ನುರೆ ಸಂತಸಂಗೊಳಿಸಿ ನರ್ತಿಸುಗುಂ ಮಧುಮಾಲತಿ ವೇಶ್ಯೆವೊಲ್ || ೧೫ ||

ವಿದೂಷಕಂ—ಕೆಳೆಯಾ! ಇದಿರೊಳ್ ಕಣ್ಗೊಳಿಪಂತಿರ್ಪ ಮರನಿದಾವುದು?

ರಾಯಂ—ಎಲೆ ಮೈತ್ರೇಯ! ಇದತ್ತಿ ಪಾವರಿ.

ವಿದೂಷಕಂ—(ಆಶ್ಚರ್ಯಗೊಂಡು) ತರುಗಳೊಳಂ ಜಾರತ್ವಮುಂಟೇಂ?

ರಾಯಂ—ಎಲೆಗಾಂಪ! ಪಾವರಿಯೆಂದೊಡೆ ಜಾರೆಯಲ್ತು ಪಾಟಲೀವೃಕ್ಷಂ.

ವಿದೂಷಕಂ—ಅಂತಾದೊಡೆ ಇದರೊಳ್ ಕಿಸುವಣ್ಣದಿಂ ಕಣ್ಗೊಳಿಪಂತಿರ್ಪುದೇಂ?

ರಾಯಂ—ಪಲ್ಲವಂ.

ವಿದೂಷಕಂ—(ಕುಣಿದಾಡಿ) ಈಗಳೆಮ್ಮಿರ್ವರೊಳಾರ್ ಗಾಂಪರೆಂಬುದು ವಿಶದ ಮಾಮುದಲ್ತೆ.

ರಾಜಂ—(ಬಿಸವಂದಂ ನೋಡುತ್ತು) ಅದೆಂತು ?

ವಿದೂಷಕಂ—ಪಲ್ಲವಂ ಬೆರಸು ಪಾವರಿಯಿರೆ ಪಾಣ್ಬತನಂ ಮೆಯ್ದೋರದ ದೆಂತಡಗುವುದು ?

ರಾಜಂ—ಎಲೆ ಮೂರ್ಖ ! ಪಲ್ಲವಮೆಂಬೊಡೆ ವಿಟನಲ್ತೆ. ಚೆಂವಳಿರ್(ಎಂದು ನಿಟ್ಟಿಸಿ) ಇದೊ ವಿಲಂಬಿಳವಿಗೆಯುಮುದಕರಿಣಿಯುಮಾವ ಕನಕಲತೆ ತನ್ನ ಕೆಳದಿಯರ್ ಬೆರಸುಸಾರ್ತರುತಿರ್ಪರ್ಳ್. ಈಗಳಾಮಿರ್ವರು ಮಿತ್ರನಾಲವೃಕ್ಷದ ಮರೆಯೊಳಿರ್ದು ಇವರ ಮಂತಣಮನರಿವಂ.

ವಿದೂಷಕಂ—ಅಂತೆ ಅಕ್ಕೆ (ಎಂದಿರ್ವರುಂ ತಮಾಲವೃಕ್ಷದ ಮರೆಯೊಳಿರ್ಪರ್)

(ಬಳಿಯಂ ಮಂದಾರಿಕಾ ಸಾಧನಿಕೆಯರೊಡಂ ಕನಕಲತೆ ಪ್ರವೇಶಿಸಿ)

ಕನಕಲತೆ—ಕೆಳದಿ ! ಸಾಧನಿಕೆ ! ಮದನಕೋದ್ಯಾನಮಿನ್ನುಮೆನಿತ್ತು ದೂರ ದೂರದೊಳಿರ್ಪುದು ?

ಸಾಧನಿಕೆ—ಎಲೆ ಕನಕಲತೆ ! ಇದೇನಿಂತು ಕೇಳ್ವೆ ? ನಾಮ್ ಮದನಕೋ ದ್ಯಾನದ ಲತಾಗೃಹಮುಂ ಬಳಿಸಾರ್ದಿರ್ಪೆವಲ್ತೆ.

ಕನಕಲತೆ—ಎಲೆ ಮಂದಾರಿಕೆ ! ಆ ಮಾರಾಯಂ ಮಂಜರೀಗೃಹಮನಲಂಕರಿ ಸಿಲ್ಲಮಲ್ತೆ.

ರಾಜಂ—ಕೆಳೆಯಾ ! ಕನಕಲತೆ ಎನ್ನವಿಷಯಮನೊಳದೇನನೊ ಸೊಲ್ಲಿಸು ವಳ್.

ವಿದೂಷಕಂ—ಅಂ ಈಗಳಾಮುಂ ಪ್ರೋಸಂ ನಡೆ.

ರಾಜಂ—ಈಗಳ್ನೀನುಸಿಕಮಿರ. ಇವರ ಮಂತಣಮನಾಲಿಸಂ.

ಕನಕಲತೆ—ಕಂ॥ ಆರಾಮಲತಾಗೃಹಮಿದು ।

ರಾರಾಜಿಸುತಿರೆಯುಂ ಮಾನ್ಯಪಾಲವಿಹೀನಂ ॥

ಬೀರದುಸೊಗಮಂ ನಯನಕೆ |
ನೀರೇಜಮುದಿಲ್ಲದಿರ್ಪ ಕೊಳಸಂತಿರೆವೋಲ್ ||೧೭||

ವಿದೂಷಕಂ—ಕೆಳೆಯಾ! ಈಗಳಾನೊಂದು ಬಿಸವಂದವಂ ತೋರಿಸುವೆಂ.

ರಾಮಂ—ಎಲೆಗಾಂಪ! ಬಿಸವಂದಕಿದು ಕಾಲಮಲ್ತು.

ವಿದೂಷಕಂ—ಸೀಂಸುಸಿಕಮಿರ (**ಎಂದು ಕನಕಲತೆಯ ಪೊರೆಯಂ ಸಾರ್ದಂ**)

ಕನಕಲತೆ—(**ವಿದೂಷಕನಂ ಕಂಡು ನಾಣ್ಚಿ ಸಾಧನಿಕೆಯ ಮರೆಯೊಳ್ನಿಂದಳ್**)

ಮಂದರಿಕೆ—ಎಲೆ ಅಳೀಕಶೀಲೆ! ಈ ವಿಪ್ರಸಂ ವಾಙ್ಮಾತ್ರದಿಂದಮುಮುಪಚರಿಸದೆ ನಿನ್ನ ಮೂರ್ಖತೆಯಂ ತೋರಿಸುವುದುಚಿತಮಲ್ತು (ಎಂದು **ವಿದೂಷಕನಂ ನೋಡಿ**) ಎಲೆ ಅಜ್ಜ! ನಿನಗೆ ಸುಖಾಗಮನಮೇಂ? ಇತ್ತ ಬಾರ. ಈ ಪೀಠಮನೇರ.

ವಿದೂಷಕಂ—(**ನಿಟ್ಟುಸಿರಿಕ್ಕಿದಂ**)

ಮಂದಾರಿಕೆ—(**ಬೆಗಡುಗೊಂಡು**) ಎಲೈ ಇದೇಂ ಚಿಂತಿಸುತಿರ್ಪೆ?

ವಿದೂಷಕಂ—ಎಲೆಗೆ! ಮಂದಾರಿಕೆ! ನೆನ್ನೆಯಿಂದೆನ್ನಬಗೆ ಕಳವಳಿಸುತ್ತಿರ್ಪುದು.

ಸಾಧನಿಕೆ—ಅದೇಕೆ?

ವಿದೂಷಕಂ—ನನ್ನ ಕೆಳೆಯನು ನಾನುಮೀಯಾರವೆಯೊಳ್ಬಹರಿಸುತಿರ್ದೆಮು. ಆಗಳ್ ಬಾನೆಡೆಯೊಳೊಂದು ಕಾಂತಿ ಕಣ್ಗೊಳಿಸಿದುದು.

ಸಾಧನಿಕೆ—ಅನಂತರಮನಂತರಂ?

ವಿದೂಷಕಂ—ಅನಂತರಮೊರ್ವಳ್ ತರುಣಿದಿವದತ್ತಣಿಂ ಧರೆಗಿಳಿತಂದು ಪಿಂದಣಿಂ ಬಂದು ಡಂಗುರುಚಾಟ ಮಾಡುವಂತಿರೆವೊಲೆನ್ನ ಕಣ್ಗಳಂ ಮುಚ್ಚಿದಳ್.

ಸಾಧನಿಕೆ—ಬಳಿಕ್ಕೆ ಬಳಿಕ್ಕೆ?

ವಿದೂಷಕಂ—ನಾಂ ಮುನಿದು ದಂಡಕಾಷ್ಠದಿಂದವಳಂ ಪೊಯ್ದೆಂ. ಆಗಳವ

ಳೆನ್ನುತ್ತರಿಗೆಯಂ ಬಚ್ಚಿಯಿನೀಳ್ದುಕೊಂಡು ಅಲ್ಲಿರ್ದ ತಮಾಲವೃಕ್ಷದ ಶಾಖೆಯೊಳಿಟ್ಟು ಬಾಂಬಟ್ಟೆಗೆ ನೆಗೆವಳ್ ನಾನಾಗಳ್ ಕಡುವೆಕ್ಕಸಂಗೊಂಡು ಅವಳ್ಗೆ ಕುಂಬಿಟ್ಟು ನನ್ನುತ್ತರೀಯಮಂ ನೀಡೆಂದು ಪ್ರಾರ್ಥಿಸಿದೆಂ.

ಸಾಧನಿಕೆ—ಮತ್ತೆ ಮತ್ತೇಂ ?

ವಿದೂಷಕಂ—ಮತ್ತಮಾಲಲನೆ " ಎಲೆ ದುರುಳ ! ನೀನೆನ್ನ ಮೈಮೆಯನರಿಯದೆ ನನ್ನಂ ಮಾಂಕರಿಸಿದೆ, ಅದರಿಂ ನಾಂ ನಿನಗಿದಂ ನೀಡೆಂ. ಆವಳಾದೊಡುಮೊರ್ವಳ ವಿವಾಹಿತೆಯಾದ ರಾಯುಗನ್ನೆ ನಿನ್ನುತ್ತರಿಗೆಯಂ ತೆಗೆದೀಯವೇಳ್ಕುಂ. ನೀನಂತಲ್ಲದೆ ಮುಂಬರ್ಪೊಡೆ ಮಡಿವೆ " ಯೆಂದು ನುಡಿದು ಮೆಯ್ಗರೆದಳ್.

ಸಾಧನಿಕೆ—ಅನಂತರಮನಂತರಂ ?

ವಿದೂಷಕಂ—ಈಗಳದಲ್ಲಿಯೇ ಇರ್ಪುದು. ಆ ಉತ್ತರಿಗೆಯನೆನ್ನ ಪಿತಾಮಹಂ ತನ್ನ ಕಡೆಗಾಲದೊಳೆಮ್ಮತಂದೆಗಿತ್ತಂ. ನಮ್ಮತಂದೆಯದನೆನಗಿತ್ತಂ. ಅದರಿಂ ನೀಂ ದಯೆಗೆಯ್ದು ನಿನ್ನ ಕೆಳದಿಯಾದೀ ಕನಕಲತೆಯ ತಳದಿಂದೆನ್ನವಸನಮಂ ಕುಡಿಸ.

ಸಾಧನಿಕೆ—(ಅಚ್ಚರಿಗೊಂಡು) ಅಂತೆಅಕ್ಕೆ (ಎಂದೆಲ್ಲರುಂ ತಮಾಲವೃಕ್ಷಮಂ ಬಳಿಸಾರ್ದರ್)

ಕನಕಲತೆ—(ನಿಟ್ಟುಸಿ) ಎಲೆ ಕೆಳದಿ ! ಇದರಶಾಖೆಯೊಳುತ್ತರಿಗೆಯಿಲ್ಲಂ.

ವಿದೂಷಕಂ—ಇತ್ತಬಾರ. ತಾಂ ತೋರಿಸುವೆಂ (ಎಂದು ರಾಜಮನಿರ್ಪೆಡೆಯಂ ತೋರಿಸುತೆ) ಇದೆಕೊಳ್ ಇದೆಕೊಳ್.

ಕನಕಲತೆ—(ವೃಕ್ಷಶಾಖೆಯಂ ಸಿರುಕಿಸುತೆ ರಾಯನಂ ಬಳಿಸಾರ್ದರ್)

ರಾಯಂ—(ಸಂಭ್ರಮದಿಂ ಕನಕಲತೆಯ ತಳಮಂ ಪಿಡಿದಂ)

ಕನಕಲತೆ—(ಭೀತಿಗೊಂಡು) ಎಲೆ ಕೆಳದಿ ! ಇದೀತು ?

ಸಾಧನಿಕೆ—ಪಗಲಿರುಳುಂ ನೀನದಾರಂ ಜಾನಿಸುತೆ ಪಲುಂಬಿ ಪಂಬಲಿಸಿ ನಿದ್ರಾ
ಹಾರಂಗಳ ನುಳಿದಿರ್ದೆಯೊ ಆ ಮಾರಾಯನೀತನೆ.

ಕನಕಲತೆ— (ಮುಗುಳ್ನಗೆದೋಱಿ ತಳವಂ ಬಿಡಿಸಿಕೊಳಲ್ತೊಳಸುವಳ್)

ರಾಯಂ—(ಕನಕಲತೆಯ ತಳವಂ ಬಲ್ಮೆಯಿಂ ಪಿಡಿದು)

ಕಂ॥ ತೊಳಗುವತಿಂಗಳಕಳೆಯುಂ ।
ಪಳಿಯುತೆ ಕಣ್ಗೊಳಿಪ ನಿನ್ನ ಮೊಯ್ವೊಳಗಿಂದಂ ॥
ಬೆಳಗುತ್ತಿ ಪೀರ್ಮೊಗಮಂ ।
ಲಲನಾಮಣಿ ಕಂಡ ನಾನೆ ಧನ್ಯಂ ನೆಲನೊಳ್ ॥ ೧೮ ॥

(ಎಂದು ಕನಕಲತೆಯ ಗಲ್ಲಮಂ ಪಿಡಿದು ಲಲ್ಲೆಗೆಯ್ದಂ)

ವಿದೂಷಕಂ—ಈಗಳೆಸಗುತ್ತರಿಗೆದೊರೆವುದು (ಎಂದು ಕುಣಿದಾಡಿದಂ)

ಮಂದಾರಕೆ— ಎಲೆ ಧೌರೇಯಕ! ಅದೆಂತು ?

ವಿದೂಷಕಂ—ನೀನರಿಯೆಯೋ? ಎನಗುಮುಡುಗೊರೆಯ ನೆನ್ನಕೆಳೆಯನೀವಂ.
ಆಗಳೆಸಗುತ್ತರಿಗೆ ದೊರೆಯದೇಂ ?

ಸಾಧನಿಕೆ—(ಸಂತಸಂಗೊಂಡು)ಈಗಳೆನ್ನ ಬಯ್ಕೆ ಕೈಸಾರ್ದುದು. ಎಲೆ ಮಾ
ರಾಯ! ನೀಂ ಕನಕಲತೆಯುಂ ತಪ್ಪದೆ ನಿನ್ನಪೊಳಲ್ಗೆಯ್ದೊಡೆ ನಮಗೆ
ನೀಡುಂ ಸಂತಸಮೊದವುಗುಂ. ಇವಳ ಮಾವನಾದ ಮಧೂಲಕಂ
ಗಿವಳನಿತ್ತು ಮದುವೆಗೆಯ್ವೇಳ್ಕುಮೆಂದೆಲ್ಲಮುಂ ಸಿದ್ಧಮಾಗಿ
ಪ್ಪುದು. ಅದುಕಾರಣಂ ನೀನೀಗಳೆ ನಿನ್ನ ನಗರಮಂ ಸಾರ್ಪುದರ್ಕೆ
ಸಜ್ಜುಗೊಳ್.

ರಾಯಂ—ಅಂತೆ ಅಕ್ಕೆ.

ಸಾಧನಿಕೆ—ಎಲೆ ಕೆಳದಿ! ಕನಕಲತೆ! ಎಮ್ಮಿರ್ವರುಮಂ ಮಱೆಯದಿರ್. ಕೆಲ
ದಿವಸಂಗಳೊಳಾವುಂ ವ್ಯಾಜಾಂತರದಿಂ ನಿನ್ನಂ ಬಳಿಸಾರ್ದಪೆವು.

ಕನಕಲತೆ—ನೀವೀಗಳೆನ್ನ ನೊರ್ವಳನೆ ಈಯೆಡೆಯೊಳುಳಿದು ಪೋಪುದು
ಯುಕ್ತಮಲ್ತು.

ಮಂದಾರಿಕೆ—ಎಲೆಗೆ, ನಿನ್ನ ಮಂಗಳಾಕಾಂಕ್ಷಿಗಳಾದೆಮಗಿದುಯುಕ್ತಮಲ್ತೆ.

(ಎಂದು ಮಂದಾರಿಕಾ ಸಾಧನಿಕೆಯರಿರ್ವರುಂ ತೆರಳ್ದರ್)

ವಿದೂಷಕಂ.—ಕೆಳೆಯಾ! ನೀನಾವೊಡೆ ಕನಕಲತೆ ವೆರಸುಬೀಗುತಿರ್ಪೆ. ಎನಗೈಸೆ ಮಾಧ್ಯಾಹ್ನಿಕ ಕಾಲಮತಿಕ್ರಮಿಪುದೆಂಬುದುಮ್ಮಳಂ, ಇದೊ ನೋಡು.

ಕಂ|| ಎಳೆವರೆಯೊಳಂಚೆಗಳ್ ತಾವ್ |
ನೆಲಸಿರ್ಕುಂ ಹರಿಣಶಿಶುಗಳುಂ ತರುತಳದೊಳ್ ||
ಮಲಗಿರ್ಕುಂ ಪಗಲೆರೆಯಂ |
ಬಳಲ್ಚುವಂ ಜಗಮನಹಹ ಕಿರಣಾಳಿಗಳಿಂ || ೧೯ ||

ರಾಯಂ— ಎಲೆ ಮೈತ್ರೇಯ! ನೀಂ ನುಡಿವುದು ದಿಟಂ. ನಡೆ ಕಾಲೋಚಿತ ಕರ್ಮಮ ನೊಡರ್ಚಿ ವಿಮಲನಗರಮಂ ಸಾರ್ವಂ (ಎಂದು ಕನಕಲತೆಯತ್ತಲ್ ತಿರುಗಿ) ಪ್ರಿಯೆ! ಮೆಲ್ಲಮೆಲ್ಲನೆ ಬಾರ.

(ಎಂದೆಲ್ಲರುಂ ತೆರಳ್ದರ್)

ಇಂತಿದು

ಕನಕಲತಾಹರಣಮೆಂಬ ಮೊದಲನೆಯಂಕಂ.

ದ್ವಿತೀಯಾಂಕಂ.

(ಬಳಿಯಂ ಮಾಲಿನಿ ರಂಗಮಂ ಸಾರ್ದು)

ಮಾಲಿನಿ—ಎಲೆಲೆ, ಈಗಳಾನೇಗೆಯ್ವುದು ಕಳ್ಳ್ಯಣಿಯಾದ ಮಧೂಲಕಂ ನಾಂ ಬೆಸಸಿದ ಬೆಸನ ನೆಸಗುವುದಿಲ್ಲಂ. ಈಗಳೆ ವಿಕ್ರಮಸಿಂಹಂ ಕನಕಲತೆಯುಮನಪಹರಿಸಿದನೆಂದು ಕೇಳ್ದೆಂ. ಇನ್ನೆಮ್ಮ ಮಾರಾಯನಾದ ಚಂಡವಿಕ್ರಮಂ ಕನಕಲತೆಯುಂ ವಿಕ್ರಮಸಿಂಹಂಗಿತ್ತು ಮದುವೆಗೆಯ್ವೊಡೆ ನನ್ನ ಬಯ್ಕೆಯೆಲ್ಲಂ ಬೀಷಾವಪುದು (ಎಂದಾಯ್ದು) ಈಗಳಾನೆಂತಾದೊಡಂ ಚಂಡವಿಕ್ರಮನುಮಂ ವಿಕ್ರಮಸಿಂಹನುಮಂ ಕೊಲಿಸವೇಳ್ಕುಂ. ಇದಕ್ಕಾವಯುಕ್ತಿಯನೊಡರ್ಚುವುದು.

(ಎಂದು ಚಿಂತಿಸುತಿರ್ದಳ್)

(ಅನಂತರಂ ವಕ್ರಾಂಗಿಯೆಂಬ ಯಕ್ಷಿಣಿ ರಂಗಮಂ ಸಾರ್ದು)

ವಕ್ರಾಂಗಿ—ಚಂ॥ ಮಾ॥ ತಳದೊಳಗಗ್ನಿಯಂ ಪಿಡಿವೆನಬ್ಧಿಯ ವಾರಿಯನೆಲ್ಲ
ಮೀಂಟುವೆಂ | ನಿಲಿಸುವೆನಭ್ರಮಧ್ಯದೊಳಗಾರವಿಯಂ ಹರಿಗುಂಗಜ
ಕ್ಕುಮೊ ॥ ಳ್ಗೆಳೆಯನಮರ್ಚುವೆಂ ಪದೆದು ದಂಪತಿಗಳ್ಗತಿ ವೈರಮು
ಣ್ಮಿಪೆಂ | ಸುಳಿದಪೆನೆತ್ತಲುಂ ಜಗದೆ ಬಿಜ್ಜೆಯ ಮೈಮೆಯಿನೇನೊಡ
ರ್ಚೆನಾಂ ॥ ॥ ೧೦ ॥

ಎನ್ನ ವಿದ್ಯಾಪ್ರಭಾವದಿಂದಕಾಲದೊಳ್ ಗಿಡುಗಳ್ ಪಲಿಸುವಂತೊಡರ್ಚುವೆಂ. ರಿಪುಗಳಂ ನಿಶ್ಚಲರನೆಸಗಿ ನಿರ್ನಾಮರಂ ಮಾಳ್ಪೆಂ. ಇನ್ನೆವರ ಮನೆಗೆಣೆವರ್ಪರ ನೀರಸೆಯೊಳೊರ್ವರುಮನರಿಯೆಂ.

ಮಾಲಿನಿ—(ವಕ್ರಾಂಗಿಯಂ ಕಂಡಚ್ಚರಿಗೊಂಡು) ಇದೇನಿವಳದಾವಳ್ ! ಬಳ್ಳಿತ್ತು ಇವಳಂ ಕೇಳ್ದಪೆಂ. (ಎಂದವಳಂ ಬಳಿಸಾರ್ದು) ಎಲೌ, ನೀನದಾರ್ ?

ವಕ್ರಾಂಗಿ—ಆನೊರ್ವಳ್ ಯಕ್ಷಿಣಿ. ಎನ್ನ ಪೆಸರ್ ವಕ್ರಾಂಗಿಯೆಂದು.

ಮಾಲಿನಿ—(ಸ್ವಗತಂ) ಆಃ, ಇವಳತ್ತಣಿನೆನ್ನ ಮನೋರಥಮೆಲ್ಲಂ ಸಫಲಮಕ್ಕುಂ. (ಎಂದು ಪ್ರಕಾಶಂ) ಎಲೌ, ನಿನ್ನ ವಿಷಯಮನೆಲ್ಲಮುಮನಾಂ ಕೇಳ್ದಿರ್ಪೆಂ. ಈಗಳ್ನೀನೆನಗಭಯಪ್ರದಾನಮಂ ಮಾಡವೇಳ್ಕುಂ.

ವಕ್ರಾಂಗಿ—ಎಲೌ, ಅದೇಂ ?

ಮಾಲಿನಿ—ನೀಂ ದಿಟಮಾಗಿಯು ಮೆನ್ನಬಯಕೆಯುಂ ಸಫಲಮೆಸಗುವೊಡೆ ಬಿನ್ನವಿಪೆಂ.

ವಕ್ರಾಂಗಿ—ಎಲೌ, ದಿಟಮಾಗಿಯು ಮಾಂ ಸಫಲಮಾಗಿಪೆಂ, ಸಂದೆಯಮೇತರ್ಕೆ.

ಮಾಲಿನಿ—ಆದೊಡೆ ಬಿನ್ನವಿಪೆಂ, ಆಲಿಸು. ಎಮ್ಮ ಮಾರಾಯನಾದ ಚಂಡವಿಕ್ರಮನುಮಂ ವಿಮಲನಗರದಾಳ್ದನಪ್ಪ ವಿಕ್ರಮಸಿಂಹನುಮಂ ಕೊಲವೇಳ್ಕುಂ.

ವಕ್ರಾಂಗಿ—ನಿನ್ನೀ ಪ್ರಾರ್ಥನೆಯ ನಾನೀಗಳೆ ಸಫಲಮೆಸಗುವೆಂ. ವಿಕ್ರಮಸಿಂಹನೆಲ್ಲಿರ್ದಪಂ.

ಮಾಲಿನಿ—ಅವನೀಗಳ್ ಚಿತ್ರಕೂಟಪರ್ವತದ ಪೊರೆಯೊಳ್ ಸಮ್ಮ ರಾಯಗುವರಿಯಾದ ಕನಕಲತೆವೆರಸು ಪಯಣಂಬೋಗುತಿರ್ಕುಮೆಂದ ನುವಿಪೆಂ.

ವಕ್ರಾಂಗಿ—ಎಲೌ, ಇದೊ ಚಂಡವಿಕ್ರಮನಂ ಸದೆದು ಬಳಿಕ್ಕೆ ವಿಕ್ರಮಸಿಂಹನಂ ಜವಂಗೆ ಜೀವಣಮಾಗಿಪೆಂ (ಎಂದು ತೆರಳ್ದಳ್)

ಮಾಲಿನಿ—ಈಗಳೆನ್ನೆಳಪೆಲ್ಲಮುಂ ಕೈಸಾರ್ದುದು. (ಎಂದು ಮ್ಲಾನವದನೆಯಾಗಿ) ಆಃ! ಕನಕಲತೆಯಂ ಕರೆತರವೇಳ್ಕು ಮೆಂದವಳೊಳುಸಿರಲಿಲ್ಲಂ, ಒಳ್ಳಿತ್ತು. ವಿಕ್ರಮಸಿಂಹಂ ಮಡಿದ ಬಳಿಕೆ ಕನಕಲತೆ ನಿರಾಶ್ರಯ

ಮಾದ ಮಲ್ಲಿಕಾಲತೆ ಭೂಮಿಯನಾಶ್ರಯಿಸುವಂತಿರೆ ಮಧೂಲಕನ ನಾಶ್ರಯಿಸುವಳ್. ಈ ಯೊಸಗೆವಾತನವಂಗರಿಪವೇಳ್ಕುಂ. ಈಗ ಳವನೆಲ್ಲಿರ್ಪನೊ, (ಎಂದು ಸುತ್ತಲುಂ ನಿಟ್ಟಿಸಿ) ಇದೊ, ದ್ಯೂತಾಲಯದತ್ತಣಿಂ ಮಯೂರಕ ಲುಬ್ಧಕರೆಂಬ ತನ್ನ ಕೆಳೆಯರ್ ಬೆರಸು ಸಾರ್ತರುತಿರ್ಪಂ. ಈಗಳಾಸಿಲ್ಲಿರ್ದೆ ಇವರ ಮಂತಣಮಸರಿದಪೆಂ.

(ಎಂದು ಮರೆಯೊಳಿರ್ಪಳ್)

(ಅನಂತರಂ ಮಯೂರಕ ಲುಬ್ಧಕರೊಡಂ ಮಧೂಲಕಂ ಪುಗುವಂ)

ಲುಬ್ಧಕಂ—ಎಲೆ ಮಧೂಲಕ! ನೀನೆಮಗೆ ಕುಡುವೇಳ್ಪುದಾವ ಪಣದವೃದ್ಧ್ಯಂಶಮನದೇಗಳ್ಕುಡುವೈ.

ಮಧೂಲಕಂ—ಕನಕಲತೆಯೊಳ್ ಪಸೆ ನಿಂದಚಣದೊಳೆ ಎನ್ನ ಋಣಬಾಧೆಯಂ ಪರಿಹರಿಸಿಕೊಂಡಪೆಂ.

ಮಯೂರಕಂ—ಇದನಾಂ ನಂಬುವುದೆಂತು. ಮದ್ಯಪಾಯಿಗಳೇಗಳುಂ ಪುಸಿವರಲ್ತೆ. ಅಂತಪ್ಪುದು.

ಕಂ || ಪುಸಿಯುಂನುಡಿವುದರೊಳ್ ಜೋ |
ಯಿಸಿಗರುಮಾಸ್ವರ್ಣಕಾರರುಂ ವೇಶ್ಯೆಯರುಂ ||
ಅಸಿಯರುಮುರೆವೈದ್ಯರುಮೀ |
ರಸೆಯೊಳ್ಕಳ್ಗುಡಿವ ಪಿಸುಣರುಂ ಮೊದಲಿಗರ್ಕೈ || ೨೧ ||

ಮಧೂಲಕಂ— ಎಲೆ ಮಯೂರಕ! ನಿನಗೀಸಂದೆಯಮೇತರ್ಕೆ. ಇದೆ ಕೊಳ್. ವೃದ್ಧ್ಯಂಶಕೋಸುಗ ಮೀಗಳೆ ನನ್ನ ಪಸದನಂಗಳನಿತ್ತಪೆಂ. (ಎಂದು ತಾಂ ತೊಟ್ಟಿರ್ದ ತೊಡುವಂ ತೆಗೆದು ಮಯೂರಕ ಲುಬ್ಧಕರ್ಗಿತ್ತಂ)

ಮಾಲಿನಿ—(ಮರೆಯೊಳ್) ಅರರೇ, ಈ ಮೂರ್ಖಂ ತನ್ನ ಪಸದನಮುಮನಿತ್ತು ನಾಣಿಲಿಯಾಗಿ ನಿಂದಂ, ಚೀ ಚೀ, ಜೂದಾಳಿಗಳ ಬಾಳ್ಕೆಯೆ

ಇಂತಪ್ಪುದು. ಪೊಡವಿಯೊಳ್ ಪಲಂಬರ್ ಗಾಂಪರ್ ಧನಿಕರಾಗ ಲ್ಕೆಳಸಿ ಜೂದಾಡುವುದುಮಂ ಮಿಸುನಿಯೆಸಗುವುದುಮಂ ಮೊದಲಾದ ಕಜ್ಜಂಗಳೊಳಾಸಕ್ತರಾಗಿ ಕಡೆಯೊಳ್ ತಮ್ಮ ಸ್ವಲ್ಪಧನಮುಮಂ ನೀಗಿ ದಾರಿದ್ರ್ಯಂಗನೆಗೆ ಮನವಕ್ಕರೆನಿಪರ್. ಇದಕ್ಕೀಮಧೂಲಕನೆ ನಿದರ್ಶನಮಕ್ಕೆ. (ಎಂದು ಪೊರಮಟ್ಟು ಮಧೂಲಕನಂ ಬಳಿಸಾರ್ದು) ಎಲೆ ಮಧೂಲಕ! ಇತ್ತ ಬಾರ.

ಮಧೂಲಕಂ—(**ಮಾಲಿನಿಯ ಪೊರೆಯಂ ಸಾರ್ದಪಂ**)

ಮಾಲಿನಿ—(**ಮಧೂಲಕನ ಕೊಪಕೆಯೊಳಿಂತೆನೆ ನುಡಿದು**) ಚಂಡವಿಕ್ರಮ ಮಹಾ ರಾಜಂ ಮಡಿದಂ. ವಿಕ್ರಮಸಿಂಹನುಮವನಂ ಪಿಂದಳೆದು ಪೋಗಿರ ವೇಳ್ಕುಂ. ಈಗಳಾಮಿರ್ವರುಂ ಪೋಗಿ ಸ್ವಯಂಪ್ರಭಾದೇವಿಯು ಮನವಳ ಪರಿವಾರಮುಮಂ ಬಂದಿವಿಡಿದು ಕನಕಲತಾಹರಣ ಕಾಲ ದೊಳ್ ವಿಕ್ರಮಸಿಂಹಂಗೆ ಸಾಹ್ಯಮೊಡರ್ಚಿರ್ಪಾ ಮಂದಾರಿಕಾ ಸಾಧನಿಕೆಯರನಿರ್ವರುಮಂ ರಾಜ್ಯಭ್ರಷ್ಟೆಯರನೆಸಗುವಂ ಬಾರ.

ಮಧೂಲಕಂ—ಕನಕಲತೆ ಯೆಲ್ಲಿರ್ಪಳ್?

ಮಾಲಿನಿ—ಅವಳೆಲ್ಲಿ ಪಳೊ, ಅವನಾನರಿಯೆಂ.

ಮಧೂಲಕಂ—ಈಗಳಾ ನೆನ್ನಕೆಳೆಯರ್ ಬೆರಸು ಅವಳನರಸುವೆಂ.

ಮಾಲಿನಿ—ಅಂತೆಸಗಲ್ವೇಡ. ಮೊದಲ್ ಮರುವಸಲರಂ ಸೆರೆವಿಡಿದು ಪರಿವಿಡಿ ಯಿಂದವಳನರಸು. ಆಂ ತೆರಳ್ದಪೆಂ. (**ಎಂದು ತೆರಳ್ದಳ್**)

ಮಧೂಲಕಂ—(**ಸ್ವಗತಂ**) ಈಗಳಾನೆ ರಾಯನಾದೆಂ. ಅಕ್ಕೆ ಅಕ್ಕೆ. ಕನಕ ಲತೆಯ ನರಸುವಾ ವ್ಯಾಜದಿಂದಿವರಿರ್ವರುಮ ನೊಡಂಗೊಂಡು ಸಾರ್ದು ಆವುದಾದೊಡುಮೊಂದು ತಂತ್ರಮನೆಸಗಿ ಸದೆದೊಡೆ ಋಣ ಬಾಧೆ ಸಮೂಲಮೆನೆ ಪ್ಯೆಗರೆದಪ್ಪುದು. ಅನಂತರ ಮೆನ್ನ ಬಯ್ಕೆ ಪಣ್ತುದಕ್ಕುಂ.

ಲುಬ್ಧಕಂ— ಎಲೆ ಮಧೂಲಕ! ಮಾಲಿನಿಯೇಂ ನುಡಿದಳ್?

ಮಧೂಲಕಂ—ನುಡಿವುದೇಂ, ನೀನೆತಿಳಿವಪೆ. ಈಗಳ್ವಸಟಂಬರಿಮ ಕಳ್ಗುಡಿದು ಬಳಿಕ್ಕರಿಪುವೆಂ ಬಾರ. (ಎಂದೆಲ್ಲರುಂ ತೆರಳ್ವರ್)

(ಬಳಿಯುಂ ರಾಯಂ ಕನಕಲತಾ ವಿದೂಷಕರ್ಪ್ರವೇಶಿಸುವರ್ ಪುಗುವೆಂ)

ರಾಯಂ—ಪ್ರಿಯೇ! ಕನಕಲತೆ! ಮೆಲ್ಲನೆ ಬಾರ.

ಕಂ || ಮೃದುವೆನಿಸಿದ ಪದಪಲ್ಲವ |
ಮಿದುಸೆಡೆಯುತ್ತಿರ್ಪುದುತ್ತಜಘನದ ಭರದಿಂ ||
ಸುದತೀಮಣಿ ಕಲ್ಮೆಳ್ಗಳ್ |
ಪುದಿದಿರ್ಪೀ ಕಾಡೊಳೆಂತು ನಡೆದಪೆಯಕಟಾ || ೨೦ ||

ವಿದೂಷಕಂ— ಕೆಳೆಯಾ! ಈ ಬಿಂಜದೊಳೆತ್ತಲು ಮಾನೆಗಳನೆರವಿಯೆ ನೆಲ ಸಿಪ್ಪರ್ಪುದು ಇದೋ ನೋಡು ;

ಕಂ || ಅತಿಕಠಿಣಮಾದ ವಜ್ರಾ |
ಹತಿಯಿಂದಂ ತೊಟ್ಟನುದಿರಲೆರಕೆಗಳೆಲ್ಲಂ ||
ಕ್ಷಿತಿಯಲ್ಲಿ ಬಿಳ್ದುಚಲಿಪಾ |
ಕ್ಷಿತಿಧರಮೆಂಬಂತೆ ತೋರ್ಪುದಿತ್ತಲ್ ಕಲಭಂ || ೨೨ ||

ರಾಯಂ—ಕಾಂತೇ! ಇತ್ತನೋಡ.

ಚಂ|| ಮಾ|| ಗುರುಕುಚವಿಂದ ಮೇಳಿಸಿದ ಳೆನ್ನಯಕುಂಭಮನೀಕೆಯೆಂಬ
ದೊಂ | ದುರುತರಮಾದ ಮಚ್ಚರಮನೊಂದಿರೆ ಮುನ್ನಮೆ ಈ ಮತಂಗಜಂ||
ಸರಸಿಜನೇತ್ರೆ ತನ್ನತಿಯನೇಳಿಸೆ ಮೆಲ್ನಡೆಯಿಂದೆ ಮತ್ತೆ ನೀಂ | ಕರಿಯದ
ನೀಕ್ಷಿಸುತ್ತೆ ಮುಳಿಸಂ ತಳೆದಂತಿರೆ ತಾಂ ಪುಯಲ್ಗುಗುಂ || ೨೪ ||

ಕನಕಲತೆ—(ನಿಟ್ಟುಸಿರಿಕ್ಕಿ) ಆರ್ಯಪುತ್ರ! ಎನಗೆ ನೀಡುವಾಯಸವೊದವಿ ರ್ಪುದು

ವಿದೂಷಕಂ—ಅಕಟಕಟಾ! ಎನ್ನರಸನೆ ಬತ್ತಿದತ್ತು.

ಕಂ || ಪೊಡವಿಯೊಳಡಿಯಿಡಲಾರೆಂ |
ಪೊಡೆಪಸಿಯುತ್ತಿರ್ಕುಮಕಟ ನಾನಿನ್ನೇವೆಂ ||
ಮಡಿದಪೆನೆಲೆ ಭೂಪಾಲಕ |
ತಡಮಾಡದೆ ನೀಡು ಸಲಿಲಮುಂ ಕೃಪೆಯಿಂದಂ || ೨೫ ||

ರಾಯಂ—ಕೇಳೆಯಾ! ಈಗಳಾಂ ಸಾರ್ದು ನೀರಂ ತಂದಪೆಂ. ಅನ್ನೆವರಂ ನೀನುಂ ಕನಕಲತೆಯುಂ ಮೀಯೆಡೆಯೊಳಿರಿಂ.

(ಜವನಿಕೆಯೊಳ್ ಗಾವರಮಾದುದು)

ಕನಕಲತೆ—ಎಲೆ ಕಾಂತ! ಇದೇನುಲಿವುದು ?

ವಿದೂಷಕಂ—(ಆಲಿಸಿ) ತಿಳಿದೆಂ ತಿಳಿದೆಂ. ಇದೊ, ಪರಮೆಗಳ್ ಮಾಮರನ ಶಾಖೆಯೊಳ್ ಸಂಚಳಮೊಡರ್ಚುತಿರ್ಕುಂ. ಆದೂಸರಿಂದಿವರ ಪಜ್ಜೆಯುಲಿವುದು.

ರಾಯಂ—(ನಕ್ಕು) ಎಲೆಗಾಂಪ! ಪರಮೆಗಳ್ ಮಾಮರನ ಶಾಖೆಯೊಳ್ ಸಂಚಳಮೊಡರ್ಚುವುದೆಂತೊಡೇಂ. ಅವರ ಪಜ್ಜೆಯುಲಿವುದೆಂದೊಡೇಂ.

ವಿದೂಷಕಂ—ಅಲ್ತಲ್ತು. ಅವಲ್ತು. ಈಗಳರಿದೆಂ. ಅರಿಲ್ವಟ್ಟೆಯೊಳ್ ವಿಸಟಂಬರಿವ ಪಲ್ಲಿಲಿಯ ತೇಂಗಾಲಿಗಳುಲಿವಪುವು.

ರಾಯಂ—ಎಲೆ ಧಾರೇಯಕ! ನಿನ್ನೀಸಬ್ಬವಂ ಸಾಲ್ಗುಂ ಸಾಲ್ಗುಂ. ಪ್ರಿಯೇ! ಆನೆಗಳ ಗರ್ಜನೆಯು ನೀಮೂರ್ಖನೆಂತೆಂತೊ ಬಣ್ಣಿಸಿದಪಂ,ನಾಂ ಜಲಮುಂಚಕ್ಕರಂ ಕೊಂಡುಬರ್ಪೆಂ ಅಂಜದಿರಂಜದಿರ್. (ಎಂದು ತೆರಳ್ದಂ)

(ಬಳಿಯಂ ವಜ್ರಾಂಗಿ ಪುಗುವಳ್)

ವಜ್ರಾಂಗಿ—ಇದೆಗಡಾ ಚಿತ್ರಕೂಟಪರ್ವತಂ. (ಎಂದಡಿಯಿಟ್ಟು ನಿಟ್ಟಿಸಿ) ಆಃ, ಇವಳೆ ರಾಯಗುವರಿಯಾದ ಕನಕಲತೆ. ಇವಂ ವಿಕ್ರಮಸಿಂಹನಕ್ಕುಂ. (ಎಂದು ವಿದೂಷಕನಂ ಬಳಸಾರ್ದು) ಎಲ್ಲೈ! ನೀನದಾರ್ ?

ವಿದೂಷಕಂ—(ಕನಲ್ಕೆಗೊಂಡು) ನೀನದಾರ್?

ವಕ್ರಾಂಗಿ—ನಾನೊರ್ವಳ್ ತಪಸ್ವಿನಿ.

ವಿದೂಷಕಂ—ನಾನೊರ್ವಂ ಮಾನಿಸಂ.

ವಕ್ರಾಂಗಿ—ನಿನ್ನ ಜಾತಿ ಯಾವುದು?

ವಿದೂಷಕಂ—ಪುರುಷ ಜಾತಿ.

ವಕ್ರಾಂಗಿ—ಅದಲ್ತು. ನಿನ್ನ ವರ್ಣವಾವುದೆಂದು ಕೇಳ್ದೆಂ?

ವಿದೂಷಕಂ—ವರ್ಣವೇಂ (ಎಂದು ನಕ್ಕು ತನ್ನ ಮೆಯ್ಯೊಬಗಂ ತೋರುತೆ) ಅಸಿತು ಮಿಸುಮಿಸುಪ ಬಿಳುವಣ್ಣಮುಮಲ್ತು; ಮಸಮಸಮೆಸಿಪ ಕಪಿಲೆ ವಣ್ಣಮುಮಲ್ತು; ಪೆರತೇನೆಂದೊಡೆ ಬಿತ್ತಗರಚಿತ್ತಮನಿಕ್ಕುರ್ಳಿಗೊಂಡು ಬೆಳ್ಪಳಿಯೆಸಿಸಿ ತಳತಳಿಪ ಕೆಂಬಣ್ಣಮೆ ನನ್ನವರ್ಣಂ.

ವಕ್ರಾಂಗಿ—ಎಲ್ಲೈ! ನೀಂ ವಿಪ್ರನೋ ಮೇಣ್ ಕ್ಷತ್ರಿಯನೊ? ಅದಂ ಕೇಳ್ದೆಂ.

ವಿದೂಷಕಂ—(ಕನಲ್ದು) ಎಲೆಗೆ! ನಿನಗವರಿನೇಂ ಫಲಂ?

ವಕ್ರಾಂಗಿ—ಎಲ್ಲೈ ನಿನ್ನ ಪೆಸರನಾದೊಡಮರಿಪು.

ವಿದೂಷಕಂ—ಎನ್ನ ಪೆಸರ್ ಪಲತೆರನಾಗಿರ್ಪುದು.

ವಕ್ರಾಂಗಿ—ಆವಾವತೆರಂ?

ವಿದೂಷಕಂ—ಎನ್ನ ಕುವರನೆನ್ನಂ 'ಜನಕಾ' ಎಂದು ಕರೆವಂ. ಎನ್ನಳಿಯನೆನ್ನಂ 'ಮಾವಾ' ಎಂದು ಕರೆವಂ. ಎನ್ನ ಮಡದಿ 'ಮನದನ್ನಾ' ಎಂದು ಕರೆವಳ್. ಎನ್ನ ತಾತಂ ಬರ್ಮುಕಿದಾರ್ಗಳ್ 'ವತ್ಸಾ' ಎಂದು ಕರೆಯುತಿರ್ದಂ. ಇಂತೆನ್ನ ಪೆಸರೋರೊರ್ವರೊಳೋರೊರ್ತೆರನಾಗಿರ್ಪುದು.

ವಕ್ರಾಂಗಿ—ಎನ್ನೊಳಾವತೆರಂ?

ವಿದೂಷಕಂ—ನೀಂ ಭಾವಿಸಿದಂತೆ.

ವಕ್ರಾಂಗಿ—ನಿನ್ನ ನಾಂ ವಿಕ್ರಮಸಿಂಹನೆಂದು ಭಾವಿಪೆಂ.

ವಿದೂಷಕಂ—ಅಂತಲ್ತು. ವಿಕ್ರಮಸಿಂಹ ನೆನ್ನಕೆಳೆಯಂ. ನಾಂ ಗ್ರಾಮಸಿಂಹಂ.

ವಕ್ರಾಂಗಿ—(ಸ್ವಗತಂ) ಇವನಾರೊ ಸಬ್ಬವಕಾರನಂತಿರ್ಕುಂ. ನಾನಿವನನೆ ವಿಕ್ರಮಸಿಂಹನೆಂದು ಭಾವಿಸಿಕೊಲಲೆಳಸಿರ್ದೆಂ ಒಳ್ಳಿತ್ತು. ಅವನೆ ಲ್ಲಿರ್ಪನೊ ಅದನರಿವೆಂ (ಎಂದು ಪ್ರಕಾಶಂ) ಎಲೈ! ವಿಕ್ರಮಸಿಂಹ ನೆಲ್ಲಿರ್ಪಂ?

ವಿದೂಷಕಂ—ಅವಂ ಜಲಮುಂ ಕೊಂಡುಬರಲ್ಕೆ ಪೋದಂ.

ವಕ್ರಾಂಗಿ—(ಸ್ವಗತಂ) ಅವನಂ ಕೊಲ್ವುದರ್ಕೆನಗೊಳ್ಳಿತ್ತಾದವಸರಂ ದೊರೆ ಕೊಂಡುದು. (ಎಂದು ಪ್ರಕಾಶಂ) ಎಲೈ ನಾಂ ತೆರಳ್ದಪೆಂ. (ಎಂದು ತೆರಳ್ದಳ್.)

ವಿದೂಷಕಂ—ಆಃ, ಇವಳೆಂತಪ್ಪ ಚೆಲ್ವುಗಾರ್ತಿ! ಇವಳನಾಸಾರದೆಯಾಣ್ಮನೆ ನಿತ್ತಾಯಸಂಬಟ್ಟು ನಿರವಿಸಿರ್ಪನೊ! ಇವಳಾರಕ್ಕಸರಾಳ್ದನ ಪೆಂ ಡವಾಸದೊಳ್ ಮಂಡೋದರಿಗಿಂ ನೂರ್ಮಡಿ ಸೊಗಂಗೊಂಡು ಬಾಳ ಲ್ತಕ್ಕುವಳ್.

ಕನಕಲತೆ—(ನಕ್ಕು) ಎಲೆ ಅಜ್ಜ! ಆರ್ಯಪುತ್ರ ನಿನ್ನುಮೇಕೆ ತಳ್ವುವಂ.

ವಿದೂಷಕಂ—ಎಲೆ ರಾಯಗುವರಿ! ಅಂಜದಿರಂಜದಿರ್. ಆಮುಮಾತಂ ತಳ ರ್ದ ಬಟ್ಟೆವಿಡಿದರಸುವಂ.

ಕನಕಲತೆ—ಅಂತೆ ಅಕ್ಕೆ. ನಡೆ (ಎಂದಿರ್ವರುಂ ತೆರಳ್ದರ್)

(ಅನಂತರಂ ಮಯೂರಕ ಮಧೂಲಕ ಲುಬ್ಧಕರ್ ಪ್ರವೇಶಿಸುವರ್)

ಮಧೂಲಕಂ—ಮಯೂರಕ! ಕನಕಲತೆಯೆಲ್ಲಿದಳೊ, ತಿಳಿಯಲಿಲ್ಲಂ ಈಗ ಳಿನ್ನೇವುದು?

ಮಯೂರಕಂ—ನಡೆ. ಪಿಂದಳೆದು ಪೋಪಂ. ನೀನಾನರಘಾತಿನಿಯಾದ ಮಾ ಲಿನಿಯ ಮಾತನಾಲಿಸಿ ಎಂತಪ್ಪ ದುಷ್ಕಾರ್ಯಮನೊಡರ್ಚಿದೆ!

ಮಧೂಲಕಂ—(ಕನಲ್ದು) ಎಲೆ ಗಾಂಪ! ನೀನುಸಿಕಮಿರ. (ಎಂದು ಜವನಿಕೆಯತ್ತಲ್ ನಿಟ್ಟಿಸಿ) ಇದೆ ಕೊಳ್ ಕನಕಲತೆಯಿತ್ತಲೆಯ್ತರುತಿರ್ಪಳ್. ನಾಮೀಮರದ ಮರೆಯೊಳಡಗಿರ್ಪಂ ಬಾರ.

ಲುಬ್ಧಕಂ—ಬಳಿಕ್ಕೇಗೆಯ್ವುದು.

ಮಧೂಲಕಂ—ಅನರಿಪ್ಪುವೆಂ. ಬಾರ. (ಎಂದೆಲ್ಲರುಮಂತೆಸಗುವರ್).

(ಬಳಿಯಂ ಕನಕಲತೆಯುಂ ವಿದೂಷಕನುಂ ಪುಗುವರ್)

ಕನಕಲತೆ—ಅಜ್ಜಾ! ಎನ್ನ ಬಗೆಯಂಜುತಿರ್ಪುದು. ಈಗಳಾರ್ಯಪುತ್ರನೆಲ್ಲಿರ್ಪನೊ ತಿಳಿಯೆನಲ್ತೆ. (ಎಂದು ಬಲಗಣ್ಣದಿರ್ಪುದಂ ಸೂಚಿಸಿ)

ಕಂ ॥ ಪಲವುಂಸೂಳ್ ಬಲಗಣ್ದಿಮು ।
ಚಲಿಸುಗುಮೀಸರಿಗಳಿತ್ತಲೊಳ್ದುತಿರ್ಕುಂ ॥
ಅಳಲೊಂದೊದವುಗುಮೆಮಗೀ ।
ಗಳೆನುತ್ತಾನ್ತೈದೆ ಭಾವಿಸೊಮನ್ಮನದೊಳ್ ॥ ॥ ೨೬ ॥

(ಎನೆ; ಅವ್ವನೊಂದು ಕೂರಂಬು ವಿದೂಷಕನ ಬೆನ್ನೊಳ್ ನಟ್ಟುದು)

ವಿದೂಷಕಂ—ಅಕಟಕಟಾ! ಮಡಿದೆಂ ಮಡಿದೆಂ. (ಎಂದು ನೆಲಕುರುಳ್ವಂ).

ಕನಕಲತೆ—(ಭ್ರಾಂತೆಯಾಗಿ ನಾಲ್ದೆಸೆಯುಮಂ ನಿರೀಕ್ಷಿಸಿ) ಅರರೆ! ಈ ನಿರಪರಾಧಿಯಾದ ಪಾರ್ವನೊಳ್ ಮುಳಿದು ಸರಲಿಂದೆಚ್ಚ ದುರುಳರಾರೊ ತಿಳಿಯೆನಲ್ತೆ. ಅನೇಗೆಯ್ವೆಂ. (ಎಂದು ಕಣ್ಬನಿದುಂಬುವಳ್)

(ಮಯೂರಕ ಲುಬ್ಧಕರ್ವೆರಸು ಮಧೂಲಕಂ ಕನಕಲತೆಯ ಕೆಲಮಂ ಸಾರ್ದಪಂ.)

ಮಯೂರಕಂ— ಎಲೆ ಮಧೂಲಕ! ನಾಂತೆಗೆ ನೆರೆವೆಚ್ಚ ಕೂರ್ಗಣೆ ಯಿವನನೆಂತು ನೆಲನೊಳುರುಳ್ಚಿದುದು ಕಂಡೆಯೇಂ?

ಮಧೂಲಕಂ—(ತನ್ನೊಳ್) ಈಗಳವರ್ಗಿವರ್ಗಂ ಮಚ್ಚರಮನೊಗೆಯಿಸಿ ಇವಳಂ ಕೊಳ್ವೊಡೆ ಎನ್ನ ಮನೋರಥಮೆಲ್ಲಂ ಸಫಲಮಕ್ಕುಂ

(ಎಂದು ಪ್ರಕಾಶಂ) ಲುಬ್ಧಕನೆಚ್ಚ ಕಣೆಯೆಯಿವನನುರುಳ್ಚಿದುದಲ್ಲದೆ ನೀನೆಚ್ಚ ಕಣೆಯಲ್ತು.

ಮಯೂರಕಂ—(ಕಾಯ್ಪು) ಏಂ? ನಾನೆಚ್ಚ ಕಣೆಯಲ್ತೆಂದು ನುಡಿವೆಯೇಂ?

ಲುಬ್ಧಕಂ—(ಸಂತಸಂಗೊಂಡು) ಎಲೆ ಮಯೂರಕ! ಫಡಫಡ. ನೀನಂತಪ್ಪ ಸಾಸಿಯೇಂ! ನಿನಗೇತರ್ಕೀಪನ್ನತಿಕೆ?

ಮಯೂರಕಂ—ಎಲೆದುಷ್ಟ! ಗಳಪದಿರ. ಎಮ್ಮಿರ್ವರುಪನ್ನತಿಕೆಯುಂ ಕೆಯ್ಯಾಗ ಳಗದೊಳೆ ವಿಶದಮಕ್ಕುಂ (ಎಂದಿರ್ವರುಂ ಕಾದುವರ್)

ಮಧೂಲಕಂ—(ತನ್ನೊಳ್) ಈಗಳೆನಗವಸರಂ ದೊರೆಕೊಂಡುದು (ಎಂದಿರ್ವರು ಮಂ ಕೂರ್ಗಣೆಯಿನೆಚ್ಚಂ ಮಧೂಲಕ ಲುಬ್ಧಕರಿರ್ವರುಂ ಬಿಳ್ದರ್.)

ಕನಕಲತೆ—(ಮಧೂಲಕನತ್ತಲ್ ತಿರುಗಿ) ಎಲೆ ನೀಚ! ಬ್ರಹ್ಮ ಘಾತುಕ!! ಆರ್ಯಪುತ್ರನಿಲ್ಲದ ಪೊಳ್ತಿನೊಳ್ ನೀನಿಂತಪ್ಪ ಘೋರ ಕೃತ್ಯಮಂ ಸಮೆದಿರ್ಪುದನವನರಿದೊಡೆ ನಿನ್ನಂ ನಿರ್ನಾಮಮೆಸಗದೆ ಮಾಣಂ.

ಮಧೂಲಕಂ—(ಕನಕಲತೆಯಂ ಬಳಿಸಾರ್ದು) ಎಲೆ ಕನಕಲತೆ! ಎನ್ನ ಮನೋ ವಲ್ಲಭೇ!! ನೀನೆನ್ನಂ ವರಯಿಸಿ ಸೊಗಂಗೊಂಡು ನಿನ್ನೊಲವೆಂತಂ ತುಳ್ದಾಳ್. ಎನ್ನೊಳೇಕೆ ಮುನಿವೆ?

ಕನಕಲತೆ—ಛೀ, ಕೇಡಾಳ: ಮಿತ್ರದ್ರೋಹಿ!! ತೊಲಗು ತೊಲಗು.

ಮಧೂಲಕಂ—ಎಲೆ ಕನಕಲತೆ! ಎನ್ನನಿಂತು ಮಾಂಕರಿಸುವೆಯೇಂ! (ಎಂದು ಕನಕಲತೆಯ ಬಳಲ್ಮುಡಿಯುಂ ಪಿಡಿದೀಳ್ದಪಂ.)

ಕನಕಲತೆ—(ಮಧೂಲಕಂಗೆ ಪರಾಙ್ಮುಖಿಯಾಗಿ) ಎಲೆ ದುರುಳಾ! ನಿನಗಿಂತಪ್ಪ ತ್ಯಾಹಿತಮೆಸಗುವುದು ಯುಕ್ತಮಲ್ತು.

ಉ || ಮಾ || ಮೂಡುವೊಡುಂ ತಮಿಸ್ರೆಯೊಳಗಾ ದಿನನಾಯಕನ ಗ್ನಿತಾಂಕುಳ |. ಕೋರ್ಡುವೊಡುಂ ವಿರಾಜಿಸೆಯು ಮಾಪಗಲೊಳ್ವರ ತಾರ ಕಾಳಿಯು || ಲ್ಲಾಡೆಯು ಮಾಗಿರೀಂದ್ರ ಕಳ್ತಲ ಮೀಂದುಮಯೂಖ ಮದುಷ್ಣ

ಮಾದೊಡಂ । ಕಾಡುವ ನಿನ್ನ ಸಾನೆಲೆ ಖಲಾಗ್ರಣಿ ಸೋಂಕನಿದೇಕೆ ಸಾಹಸಂ ॥ । ೨೭ ॥

ಮಧೂಲಕಂ—ಎಲೆಗೇ! ನಡೆನಡೆ. (ಎಂದು ಕನಕಲತೆಯ ಬಳಲ್ಮುಡಿಯಂ ಪಿಡಿದೀಳ್ದಂ.)

ಕನಕಲತೆ—(ಕಣ್ಣನಿದುಂಬಿ)

ಕಂ । ಅರಸನೆ ಹಾಹಾ ಕೋಗಿಲೆ ।
ವರಿಯಂ ನೋಯಿಸುತೆ ಕಾಗೆ ಕಾಡುವ ತೆರದಿಂ ॥
ದರರೇ ನಿನ್ನ ಬಲೆಯನೀ ।
ದುರುಳನಳಲ್ಚುತ್ತಮಿರ್ಪುದಂ ತಿಳಿಯೆಯ ನೀಂ ॥ ॥ ೨೮ ॥

ಎಲೆ ಕಿಡುಕುದೆವ್ವಮೆ, ಈ ಘೋರಾರಣ್ಯದೊಳಿಂತಪ್ಪವಸ್ಥೆಯನೆನಗೊದವಿಸಿ ಗೋಳಿಡುವೆನ್ನನಭೀಕ್ಷಿಸಿ ಬಿನದಿಸಲ್ಕೆಂದೆ ನನ್ನಂ ನಿರ್ಮಿಸಿದೆಯೋ? (ಎಂದುಚ್ಚಸ್ವರದಿಂದೆ) ಅಕಟಕಟಾ! ಅನಾಥೆಯಾದೆನ್ನ ನೀ ದುರುಳನಳಲ್ಚುತಿರ್ಪಂ ಆರುಂ ರಕ್ಷಕರಿಲ್ಲಮೋ?

(ಜವನಿಕೆಯೊಳ್)

ಎಲೆ ಸ್ತ್ರೀಘಾತುಕ! ನಿನ್ನ ಕೃತ್ಯಕ್ಕೆ ತಕ್ಕ ಫಲಮನನುಭವಿಪೆ ನಿಲ್ನಿಲ್.

(ಬಳಿಯಂ ಅರಿಕೇಸರಿ ಧನುರ್ಬಾಣಂಗಳಂ ಪಿಡಿದು ಚಕ್ಕನೇಳ್ತಂದಂ)

(ಮಧೂಲಕಂ ಅರಿಕೇಸರಿಯುಂ ಕಂಡು ನುಗಿದು ಪಾರಿದಂ)

ಅರಿಕೇಸರಿ—ಆಃ, ಇದೇಂ!

ಕಂ ॥ ರಸೆಯೊಳಗಣಿಯೆರಮೆನಿಸು ।
ತ್ತೊಸರುತೆ ಸೊವಡಾದರಗುತ ಕಳ್ತವಡುತ್ತಂ ॥
ಮುಸುರ್ದು* ಮುಸುಂಕುತೆ ಝೂಂಕೃತಿ ।
ಯೆಸಗುವ ಮುಚ್ಚುಗಳಸಹ್ಯಮಂ ಪುಟ್ಟಸುಗುಂ ॥ ॥ ೨೯ ॥

(ಎಂದು ಕನಕಲತೆಯಂ ಕಂಡು ಬೆಕ್ಕಸಂದಾಳ್ದು)

ಉ | ಮಾ || ಸೊನ್ನೆಯ ಬಳ್ಳಿಯೋ ತೊಳಗುವಾ ಸೆಳೆಮಿಂಚೊ ಕರಂ ವಿರಾಜಿಪಾ | ಜೊನ್ನವೊ ಚೆಲ್ವಿನಿಂಬೊ ಪವಪಿಂ ಬಗೆಗೊಂಡೆಸೆವಿಚ್ಚೆಗಾರ್ತಿಯೋ || ಕನ್ನೆಯೊ ಪಾಲ್ಗಡಲ್ಗುವರಿಯೋ ಸುರನಾರಿಯೊ ನೋಡಲೀಕೆಯುಂ | ಕೆನ್ನ ಮೊರಲ್ದು ಮನ್ಮನಮ ನಿರ್ಕುಳಿಗೊಂಡಪಳೇಂ ವಿಚಿತ್ರವೋ || || ೩೦ ||

ಎಲೆ ವನಿತಾಮಣಿ !. ನೀನದಾರ್ ?

ಕನಕಲತೆ—(ತಲೆವಾಗಿಸಿ) ನಾಂ ವಿಕ್ರಮಸಿಂಹ ಮಹಾರಾಜನ ಮಡದಿ. ಈಗಳ್ಳಾರಿಪ್ಪೋವ ನೀಚನಿಂತಪ್ಪ ಘೋರಕೃತ್ಯಮಂ ಸಮೆದಿರ್ಪನಂ.

ಅರಿಕೇಸರಿ—ಎಲೆ ಕಾಂತೇ ! ಅಂಜದಿರಂಜದಿರ್. ನಾಂ ಅನರ್ಘಪುರಕೊಡೆಯನಾದ ಅರಿಕೇಸರಿಯೆಂ. ನೀನಿನ್ನೆನ್ನ ಪಟ್ಟಮಹಿಷಿಯಾಗಿರ.

ಕನಕಲತೆ—ಎಲೈ, ನೀನಿಂತು ನುಡಿವುದು ಯುಕ್ತಮಲ್ತು.

ಕಂದ || ಅಳರತ್ತಣಿಂದೆ ಪೊರೆದಸು |
ಮೊಲವಿಂದುಣಲಿಕ್ಕಿದಾತನುಂ ನಿಜಪಿತನುಂ ||
ಇಳೆಯೊಳ್ವಿದ್ಯಾಗುರುವುಂ |
ಸಲೆಜನಕ ಸಮಾನರೆಂದು ನುಡಿವರ್ ತಿಳಿದರ್|| || ೩೧ |

ನೀನೀಗಳೆನ್ನ ನಳರತ್ತಣಿಂ ಕಾಪಿಟ್ಟೆ ಅದರಿಂದೆನಗೆ ಜನಕ ಸಮಾನನಲ್ತೆ:

ಅರಿಕೇಸರಿ—ಎಲೆಗೇ ! ತೊಳ್ತಿನ ಮಗಳೇ ! ನೀನೆನಗೆ ನೀತಿಯಂ ಕಲಿಸುವೆಯೇಂ. ನಡೆನಡೆ. ಪೆಂಡವಾಸದೊಳಿರ್ಪ ಪೆಂಡಿರ ತೊಂಡಿಲೊಳ್ವಾಣಿಯಾಗಿ ಬಾಳ್ದಪೆ (ಎಂದು ಕನಕಲತೆಯಂ ಬಲ್ಮೆಯಿಂ ಸಳೆದುಯ್ದಂ)

ಇಂತಿದು

ಕನಕಲತಾ ವಿಯೋಗಮೆಂಬೆರಡನೆಯಂಕಂ

ತೃತೀಯಾಂಕಂ.

(ಅನಂತರಂ ಮಂದಾರಿಕಾ ಸಾಧನಿಕೆಯರು ಪುಗುವರು.)

ಸಾಧನಿಕೆ—ಮಧೂಲಕಪತಕ ನೆಮ್ಮೊಡೆಯನಾದ ಚಂಡವಿಕ್ರಮನಂ ಕೊಂದು ನಮ್ಮ ಸ್ವಾಮಿ ಪ್ರಭಾದೇವಿಯುಂ ಸೆರೆಗೆಯ್ದು ತಾನೆ ಅರಸುಗೆಯ್ಯು ತಿರ್ಪನಲ್ತೆ. ಅಕಟಕಟಾ, ಎಮ್ಮ ದೇವಿಗೆ ಎಂತಪ್ಪ ಗತಿ ಸಮನಿ ಸಿದುದು! ಆಃ! ವಿಧಿ ವಿಲಾಸಮತಿ ವಿಚಿತ್ರಮ್ಮೈಸೆ;

ಉ | ಮಾ || ಈಗಳೆ ಸಾರ್ವಭೌಮನೆನಿಸುತ್ತೆಳೆಯಂ ಸಲಪುತ್ತೆ ಸಲ್ಕ್ಷ್ಮವೆ | ತ್ತೀಗಳೆ ಭೃತ್ಯನಾಗಿ ಪರಸೇವೆಯೊಳಂಕುರಿತ ಮ್ಮೈದೆ ಶೋಕಿಸು || ತ್ತೀಗಳೆ ಪುತ್ರಮಿತ್ರ ಧನ ವಸ್ತ್ರ ಸಮೂಹಮನೊಂದಿ ಬೀಗಿಮ | ತ್ತೀಗಳೆ ಭಾಗ್ಯಹೀನನೆನಿಪಂ ಮನುಜಂ ವಿಧಿ ದುರ್ವಿಲಾಸದಿಂ || || ೩೦ ||

ಮಂದಾರಿಕೆ—ಎಲೆ ಸಾಧನಿಕೆ! ಈಗಳಾವಿನ್ನೇವುದು.

ಸಾಧನಿಕೆ—ವಿಮಲ ನಗರಮಂ ಸಾರ್ದು ಕನಕಲತಾ ವಿಕ್ರಮಸಿಂಹರಡಿದಾವ ರೆಯ ನೋಲಗಿಸುತೆ ಬಾಳ್ವಂ ನಡೆ.

ಮಂದಾರಿಕೆ—ಎಲೆಗೇ! ಕಂಚುಕಿಯಾದ ಆರ್ಯಜರಂತಕನೆಲ್ಲಿದಂ.

ಸಾಧನಿಕೆ—ಅವಂ ಸೆರೆವನೆಯಂ ಕಾಪುಗೆಯ್ಯುತ್ತಿರ್ಪಂ.

ಮಂದಾರಿಕೆ—ಮಾಲಿನಿ ಯೆಲ್ಲಿದಳ್

ಸಾಧನಿಕೆ—ಮಾಲಿನಿ ಮಧೂಲಕನ ಪಟ್ಟ ಮಹಿಷಿಯಾಗಿ ಪೆಂಡವಾಸದೊಳ್ ನಲಿಯುತ್ತಿರ್ಪಳ್.

ಮಂದಾರಿಕೆ—ಅಚ್ಚರಿ! ಅಚ್ಚರಿ!!

ಸಾಧನಿಕೆ—ಅಚ್ಚರಿಯೇಕೆ?

ಕಂ || ಪಳಿಯುತಮಾಸಜ್ಜನರಂ |
ಮುಳುಗುತ ಹಂಕಾರ ಮೆಂಬ ಕಡಲೊಳಗೆಂದುಂ ||
ಸಲೆವಂಚಕರೆನಿಸಿರ್ಪಾ ||
ಖಲರತ್ಯಾಸ್ವತ್ಯಪದಮ ನೊಂದುವರಿಳೆಯೊಳ್ || || ೩೦ ||

ಅಂತುಮಲ್ಲದಿಂತಪ್ಪ ತ್ಯಾಹಿತಕವಳೆಗಡಾ ಆದಿಕಾರಣಂ. ಇದಂತಿ ರ್ಕೆ ನಡೆ. ಬಿಸಿಲ ಬೇಗೆ ಸೈಸಲರಿದಾಗಿರ್ಪುದು.

ಮಂದಾರಿಕೆ—ಎಲೆಗೇ! ವಿಮಲನಗರಮಿನ್ನುಮೆನಿತ್ತು ದೂರದೊಳಿರ್ಪುದು.

ಸಾಧನಿಕೆ—ಎಲೌ! ಈ ಕಾನನಮಂ ಪಾಯ್ದೊಡೆ ಪರಿವಿಡಿಯಿಂದೊಂದು ಕಾ ಲೂರ್ ಕಣ್ಗೊಳಿಪುದು. ಅವರತ್ತಣಿಂ ವಿಮಲ ನಗರಂ ನಾಲ್ಕಾ ವುದಂ ದೂರಮಲ್ತು. ಚಚ್ಚರಂ ಪೋಪಂ ನಡೆ (ಎಂದಡಿಯಿಡುವರ್)

(ನಿಟ್ಟುಸಿರಿಕ್ಕುತೆನರಲ್ವಶಬ್ದಮಕ್ಕುಂ)

ಸಾಧನಿಕೆ—ಎಲೆ ಕೆಳದಿ! ಇತ್ತಲಾರೊ ನರಲುತಿರ್ಪಂತೆ ತೋರ್ಪುದು.

ಮಂದಾರಿಕೆ—(**ಸುತ್ತಲುಂ ನೋಡಿ, ವಿದೂಷಕನ ಕೆಲಮಂ ಸಾರ್ದು**) ಎಲೆ ಸಖೀ, ಎಲ್ಲಮುಂ ವಿಪರೀತಮಾದುದು. (**ಎಂದು ಕಣ್ಣಿನಿದುಂಬುವಳ್**)

ಸಾಧನಿಕೆ—ಎಲೆ ಮಂದಾರಿಕೇ! ಇದೇನಿಂತೊರೆವೆ ? (**ಎಂದು ವಿದೂಷಕನಂ ಕಂಡು ಬೆಗಡುಗೊಂಡು**) ಈಗಳಾ ಮಿಂತುತಳ್ವುದುಚಿತಮಲ್ತು.

(**ಎಂದು ಸೆರಗಿನಿಂ ಬೀಸಿ ಮೆಲ್ಲನೆಳ್ಚರಿಸುವಳ್.**)

ವಿದೂಷಕಂ—(**ಕಟ್ಟಾಯಸದಿಂದೆ**) ಅಕಟಕಟಾ! ಈಯುಬ್ಬೆಗಮನಾಂ ಸೈಸೆಂ. ಎನ್ನ ಬೆನ್ನೊಳ್ ನಟ್ಟಿರ್ಪ ಈ ಕೂರಂಬಂ ಚಕ್ಕನೆಕಿಳ್ತು ನನ್ನಂ ಬದುಂಕಿಪರಾರುಮಿಲ್ಲಮೇ! (**ಎಂದಳ್ವಂ**).

ಮಂದಾರಿಕೆ— ಎಲೆ ಅಜ್ಜ! ಸೈರಿಸು ಸೈರಿಸು. (**ಎಂದದಂ ಬಿಸ್ಮೆಯಿಂಕಿಳ್ತಳ್**)

ಮಯೂರಕಂ—(**ಆಯಾಸಂಬಟ್ಟಾಗುಳಿಸುತೆ ಮೆಲ್ಲನೆಳ್ದು ಸುತ್ತಲುಂ ನೋಳ್ಪಂ**)

ಸಾಧನಿಕೆ—(ಆಶ್ಚರ್ಯಂಗೊಂಡು) ಇದೇಂ! ಮಧೂಲಕನಕೆಳೆಯರಿರ್ವರುಮಿಲ್ಲಿರ್ಪರ್.

ಲುಬ್ಧಕಂ—(ಮೆಲ್ಲನೆಳ್ದು ಗಗನದೊಳ್ ಲಕ್ಷ್ಯಮನಿಟ್ಟು) ಎಲೆ ದುರುಳ! ಮಧೂಲಕಪತಕ!! ಇಂದು ನಿನ್ನಾಯುಪೂರ್ತಿಯಾದುದೆಂದರಿಯ.

ಮಯೂರಕಂ—ಎಲೆ ಮಧೂಲಕ! ಚಲ್ಲವತ್ತ!! ಮಿತ್ರದ್ರೋಹಿ!!! ನೀನೆಮ್ಮಿರ್ವರು ಮನಿಂತಪ್ಪ ಮೋಸದಿಂ ಬೆಳ್ಮಾಡಿದೆ. ಅಕ್ಕೆ ಅಕ್ಕೆ ಅದರ್ಕೆತಕ್ಕ ಫಲಮನನುಭವಿಪೆ.

ಲುಬ್ಧಕಂ—ಎಲೆ ಮಯೂರಕ! ನಡೆ. ಆನೀಚನನರಸಿ ಅವನ ಪೆಸರನೆಮೆಯ್ಗುರೆಯಿಪಂ. (ಎಂದಿರ್ವರುಂ ತೆರಳ್ದರ.)

ಮಂದಾರಿಕೆ—ಎಲೆ ಅಜ್ಜ! ಕನಲತೆಯೆಲ್ಲಿರ್ಪಳ್?

ವಿದೂಷಕಂ—ಅಕಟಕಟಾ, ಎಲೆ ಮಧೂಲಕಪತಕ! ಮಹಾಬ್ರಾಹ್ಮಣನಾದೆನ್ನನಿಂತುಗೆಯ್ದುಯೇಂ?

ಸಾಧನಿಕೆ—ಎಲೆ ಕೆಳದಿ! ಆಮಧೂಲಕನೆ ಇಂತುಗೆಯ್ದು ಕನಕಲತೆಯನಪಹರಸಿರ್ಪನೆಂದನುವಿಪೆಂ. ಎಲೈ ಧೌರೇಯಕ! ವಿಕ್ರಮಸಿಂಹನೆಲ್ಲಿರ್ಪಂ.

ವಿದೂಷಕಂ—ಎಲೆಗೆ! ವಿಕ್ರಮಸಿಂಹಂ ನೀರಂಕೊಂಡು ಬರಲ್ಕೆ ತೆರಳ್ದಂ. ನಾಂ ಕನಕಲತೆವೆರಸು. ಅವನಾಗಮನಮಂ ನಿರೀಕ್ಷಿಸುತಿರ್ಪ ಅವಂ ಬಾರದಿರ್ಪುದಂ ಕಂಡು ಎಲ್ಲೆಡೆಯೊಳಮರಸುತಿಲ್ಲಿಗೈತಂದೆವು. ಆಗಳ್ ಮಧೂಲಕನಿಂತಪ್ಪ ಘೋರಕೃತ್ಯಮನೊಡರ್ಚಿ. ಕನಕಲತೆಯಂ ಬಲ್ಮೆಯಿಂ ಪೊಳಲ್ಗುಯ್ದನೆಂದನುವಿಪೆಂ.

ಸಾಧನಿಕೆ—ಎಲೆ ಅಜ್ಜ! ವಿಕ್ರಮಸಿಂಹನಂ ಪುಡುಕುವಂ ನಡೆ.

ಮಂದಾರಿಕೆ—ಎಲೈ! ವಿಕ್ರಮಸಿಂಹನಾವದೆಸೆವಿಡಿದು ತೆರಳ್ದಂ.

ವಿದೂಷಕಂ—ಎಲೆಗೆ! ಇತ್ತಲೆಪೋದಂ ಬಾರ,

ಸಾಧನಿಕೆ—ಅಜ್ಜ ! ನೀಂ ಮುಂತೆ ನಡೆ. (ಎಂದೆಲ್ಲರುಂ ತೆರಳ್ದರ್)

(ಬಳಿಯಂ ಜಲಮಂ ನರಸುತೆ ರಾಯಂ ಪ್ರವೇಶಿಸಿ)

ರಾಯಂ—(ಆಯಾಸದಿಂದೆ) ಆಃ ! ಇನಿತರಸಿದೊಡಂ ಜಲಮೆನಗೆ ದೊರೆಯಲಿಲ್ಲಂ. ಕನಕಲತೆಯನುಳಿದು ಬಂದು ಪಲಕಾಲಮಾದುದು. ಈಗಳೀ ಸಪ್ತಪರ್ಣಪಾದಪಂಗಳ ಕೆಲದೊಳೊಂದು ಜಲಾಶ್ರಯಂ ಕಣ್ಗೊಳಿಸುತಿರ್ಪುದೈಸೆ ; (ಎಂದಡಿಯಿಟ್ಟುನಿಟ್ಟಿಸಿ).

ಕಂದಂ || ನಳಿನಮನೋಹರಮಾಗುತೆ |
ತೊಳಗುತ್ತಂ ವಿಮಲಮೆನಿಸಿ ಚಂಚಲಮಾದೀ ||
ತಿಳಿಗೊಳನೆಸೆವಪುದೀಗಳ್ |
ವಿಲಸನ್ನವವಾಮಲೋಚನಾನಯನಂಬೊಲ್ || ೩೩ ||

ಒಳ್ಳಿತ್ತು ಇವನಾಂ ಸಾರ್ದು ಸನ್ನ ಬಾಯರಿಕೆತವಿಸಿ ನಂಜಲಮನೀಂಟಿ ಬಳಿಯಂ ಕೆಸರ್ದಾಲ್ಲಿಗೆ ಯೆಲೆಯೊಳೆನ್ನಮನವನ್ನೆಗುಮೆನ್ನ ಕೆಳೆಯಂಗುಂ ಜಲಮಂ ಕೊಂಡು ಪೋದಪೆಂ.

ವಕ್ರಾಂಗಿ—(ಪ್ರವೇಶಿಸಿ. ರಾಯನಂ ಕಂಡು ಬೆಕ್ಕಸಂಗೊಂಡು) ಆಃ ! ಇವನೆ ವಿಕ್ರಮಸಿಂಹಂ. ಇಂತಪ್ಪ ಸೌಂದರ್ಯಶಾಲಿಯನಾನೆಂತು ಕೊಂದಪೆಂ. ಇವನನಾಂ ವರಯಿಸಿ ಆ ಮಧೂಲಕನಂ ಕೊಲ್ವೊಡೆ ಈ ವಿಕ್ರಮಸಿಂಹಂಬೆರಸು ನಾನೆ ರಾಣಿವಾಸದುತ್ತಮೆಯರೊಳುತ್ತಮೆಯೆನಿಸಿ ಸೊಗದಿಂ ದಿರಲ್ಕಕ್ಕುಂ. ಇವನೊಳಾಸಿವನುಸಿರ್ದೊಡೆ ಇವನದಂ ನಿರಾಕರಿಸನೆಂದು ಸಂಕಿಪೆಂ. ಒಳ್ಳಿತ್ತು. ಇದರ್ಕಿಂತುಮಾಳ್ಪೆಂ

(ಎಂದು ರಾಯನ ಕೆಲಮಂ ಸಾರ್ದು.)

ಕಂದಂ || ಶರಣಾಗತರಂ ಪೊರೆವುದು |
ಧರಣೀರಮಣರ್ಗೆ ಸಹಜಮೆನಿಸಿದ ಧರ್ಮಂ ||

ಪೊರೆನೀನದರಿಂದೆನ್ನಂ |
ಕರುಣಾನಿಧಿ ನಿನ್ನನೀಗಳಾಂ ಮರೆವೊಕ್ಕೆಂ || ೩೪ ||

(ಎಂದು ರಾಯನಡಿಗೆರಗಿದಳ್)

ರಾಯಂ—ಎಲೌ ! ನೀನದಾರ್ ? ನಿನಗಾರತ್ತಣಿನಳರೊವವಿರ್ಪುದು ?

ವಕ್ರಾಂಗಿ—ನೀನೆನ್ನುದ್ವೇಗಮಂ ಪರಿಹರಿಸನೇಮು ಪೂಣ್ದೊಡೆ ಬಿನ್ನವಿಪೆಂ.

ರಾಯಂ—ಎಲೌ ! ದಿಟವಾಗಿಯುವಾಂ ನಿನ್ನುದ್ವೇಗಮಂ ಪರಿಹರಿಪೆಂ.

ವಕ್ರಾಂಗಿ— ನಿನ್ನ ನುಡಿಯನಾಂ ನಂಬುವುದೆಂತು.

ರಾಯಂ—ಎಲೆ ಮುಗುದೆ ! ಪೊಡವಿಯೊಡೆಯರೇಗಳುಂ ಪುಸಿವರಲ್ತು.

ವಕ್ರಾಂಗಿ—ಎಲೈ ! ಅಂತಾದೊಡಾಲಿಸು ;

ಚಂ | ವೃ || ಮನಸಿಜನೆಂಬ ನಿಷ್ಕರುಣನಾವ ನಿರಾಕರನೀಗಳೈದೆತಾಂ |
ಮುನಿಯುತೆ ತನ್ನಬಿಲ್ಗೆ ಶರಸಂಕುಲಮಂ ಭರದಿಂದೆಪೂಡುತಂ ||
ಮಿನುಗುವ ನಿನ್ನಚೆಲ್ವನೆವೆಯಿಕ್ಕದೆ ನೋಡಿವನನ್ನೊಳಾಹ ! ಭೋಂ |
ಕನೆತೆಗೆದೆಚ್ಚನೀವೊರೆವೆ ನೀವೆ ನಿಳಾಧಿಪ ನೈಸಲಾರೆನಾಂ || ೩೫ ||

ರಾಯಂ—(ಸ್ವಗತಂ) ಆಃ. ಈ ಧೂರ್ತೆಯೆನ್ನಂ ಮರುಳ್ಮಾಡಿವಳ್. ಇವಳ ನಾನೆಂತು ವರಯಿಪ್ಪುದು. (ಎಂದು ಪ್ರಕಾಶಂ) ಎಲೌ ! ನಿನ್ನ ಪೆಸರೇಂ ?

ವಕ್ರಾಂಗಿ—ಎನ್ನ ಪೆಸರ್ ವಕ್ರಾಂಗಿಯೆಂದು.

ರಾಯಂ—ರೂಪಿಂಗನುರೂಪವಾದ ಪೆಸರ್ಗೈನೆ ; ನೀನೀಕಾನನದೊಳೇತರ್ಕೆ ವಸಿಸುತಿರ್ಪೆ ?

ವಕ್ರಾಂಗಿ—ಎಲೈ ! ನಾಂ ಚಂದ್ರನಗರದೊಳಿರ್ಪ ಮಾಲಿನಿಯ ಬಿನ್ನಪಮನಾಲಿಸಿ ನಿನ್ನಂ ಕೊಂದು ಕನಕಲತೆಯಂ ಕೊಂಡುಪೋಗಲ್ಕೆಂದು ಬಂದೆಂ. ಈಗಳ್ ನಿನ್ನ ಸೊಬಗಿಂದಾಂ ವಂಚಿತೆಯಾಗಿ ನಿನ್ನಂ ವರಯಿಸಲೆಳಸಿರ್ಪೆಂ. ನೀನೆನ್ನಂ ಪರಿಗ್ರಹಿಪ್ಪೊಡೆ ಈಗಳರಸುಗೆಯ್ವು

ತ್ತಿರ್ಪ ಮಧೂಲಕನಂ ಕೊಂದು ಚಂಡವಿಕ್ರಮನ ರಾಜ್ಯಮೆಲ್ಲಮುಂ ನಿನಗೆ ಕೈಸಾರ್ವಂತೆ ಮಾಳ್ಪೆಂ.

ರಾಯಂ—(ವಿಷಾದಂಗೊಂಡು, ತನ್ನೊಳ್) ಏಂ! ಈಗಳ್ ಮಧೂಲಕನರಸುಗೆಯ್ಯುತಿರ್ಪನೇಂ? (ಎಂದು ಪ್ರಕಾಶಂ) ಎಲೌ! ಚಂಡವಿಕ್ರಮನೆಲ್ಲಿರ್ಪಂ?

ವಕ್ರಾಂಗಿ—ಚಂಡವಿಕ್ರಮಂ ವೈವಸ್ವತಾಲಯಕತಿಥಿಯಾದಂ. ಸ್ವಯಂಪ್ರಭೆ ತನ್ನ ಪರಿವಾರಂ ಬೆರಸು ಬಂಧನಾಲಯದೊಳತಿಥಿಯಾಗಿರ್ಪಳ್.

ರಾಯಂ—(ತನ್ನೊಳ್) ಆಃ. ಮಧೂಲಕಪತಕನಿಂತಪ್ಪ ಘೋರಕೃತ್ಯಮನೆಸಗಿರಮೇಳ್ಕುಮಲ್ತೆ. ಈಗಳಾನೇಗೆಯ್ವೆಂ (ಎಂದು ಚಿಂತಿಸಿ ಪ್ರಕಾಶಂ) ಏಕಪತ್ನೀವ್ರತಸ್ಥನಾದ ನನ್ನತ್ತಣಿಂ ನಿನ್ನಬಯ್ಕೆ ಸಫಲಮಾಗದು.

ವಕ್ರಾಂಗಿ—ಎಲೈ! ವಾಗ್ದಾನಮನಿತ್ತುಬಳಿಯುಂ ಪಡಿನುಡಿವೆಯೇಂ?

ರಾಯಂ—(ಕನಲ್ದು) ಎಲೆ ಮಾಯಾವಿನಿ! ನೀನೆನ್ನಂ ವಂಚಿಸಿರ್ಪೆ.

ವಕ್ರಾಂಗಿ—ನಾಂ ಜಾವಳಿಯೆಂದರಿದಿರ್ಪೆಗಡ. ನಾಂ ಮಹಾಯಕ್ಷಿಣಿಯಾದ ವಕ್ರಾಂಗಿಯೆಂ. ನೀನೆನಗೆ ಪ್ರತಿಕೂಲನಾದೊಡೆ ನಿನಗನೇಕಾಪಾಯಂಗಳನಮರ್ಚುವೆಂ.

ರಾಯಂ—ಎಲೆಗೆ! ಧೂರ್ತೆ! ನಿನ್ನನ್ನರಂ ಶಿಕ್ಷಿಪುದೆ ನನ್ನ ಧರ್ಮಮೈಸೆ; ಎಂತೆಂದೊಡೆ,

ಕಂ ॥ ಖಲರಂ ವಂಚಕರಂ ಮೇಣ್ ।
ಲಲನಾಘಾತುಕರನೈದೆ ಶಿಶುಘಾತುಕರಂ ॥
ನೆಲನೊಡೆಯರೇಗಳುಂ ತಾ ।
ಮಲಸದೆ ಶಿಕ್ಷಿಪುದೆ ನೈಜಧರ್ಮಂ ಮರುಳೇ ॥ ೩೭ ॥

ವಕ್ರಾಂಗಿ—ಎಲೆ ಗಾಂಪ! ಅದೊಡಬಲೆಯರಂ ಕೊಲ್ವುದುಂ ನಿನ್ನ ಧರ್ಮಮೇಂ?

ರಾಯಂ.—ಆಂ. ನಿನ್ನನ್ನರಪ್ಪ ಅಬಲೆಯರಂ ಕೊಲ್ವುದುಮೆನ್ನಧರ್ಮಂ.

ಕಂ || ಮುನಿಜನಮನಳಲ್ಚುತೆ ಸಂ |
ಹನನಮೊಡರ್ಚುತ್ತುಮಿರ್ದ ತಾಟಕೆಯಂ ಮೇ ||
ದಿನಿಯಣುಗಿಯುಮನದನ್ನಂ |
ಬನದೆಡೆಯೊಳ್ ಕೊಂದನೆಂಬುದಂ ನೀನರಿಯಾ || ೩೭ ||

ಅದರಿಂ ಪಡಿನುಡಿಯದೊಯ್ಯನೆ ತೊಲಗು.

ವಕ್ರಾಂಗಿ—ಎಲೆ ನೀಚ! ಎನ್ನ ಬಿಜ್ಜೆಯ ಮೈಮೆಯಂ ತೋರಿಸುವೆಂ. ನೋಡು.

(ಎಂದೊರ್ಮೆ ನೆಲನನೊದೆದಳ್)

ರಾಯಂ—(ವಿಸ್ಮಯಂಗೊಂಡು) ಎಲೆಲೆ! ಇದೇಂ ನಿಷ್ಕಾರಣವಾಗಿ ಮೊಳಗುಗುಂ! (ಎಂದು ತಾರಗೆವಟ್ಟೆಯಂ ನಿಟ್ಟಿಸಿ) ಆಃ! ಇದೊ.

ಕಂ || ದಿವದತ್ತಣಿಂದೆ ತಾರಗೆ |
ಬುವಿಯೊಳಗುದಿರುತ್ತುಮಿರ್ಕುಂ ಮರ್ಕಿಂಮುಗಳುಂ ||
ತಮೆಮೆಯ್ಗರೆದಿರ್ಪುವು ಗಡ |
ಕವಿದಿರ್ಪುದು ಸನ್ನತ್ತಲಂತಮುಮುಪಹಾ || ೩೮ ||

ವಕ್ರಾಂಗಿ—(ನಕ್ಕು) ಎಲೆ ಗಾಂಪ! ಈಗಳಾದೊಡುಮೆನ್ನಂ ವರಯಿಸಿ ಸೊಗಂಗೊಂಡು ಬಾಳ್.

ರಾಯಂ—ಎಲೆ ಕೇಡಾಳಿ! ತೊಲಗು ತೊಲಗು. ಆನಿದರ್ಕಂಜುವೆನೆಂದು ಭಾವಿಸಿದೆಯೇಂ ?

ವಕ್ರಾಂಗಿ—(ಸ್ವಗತಂ) ಆಃ. ಇವನ ಧೀರತೆಯನರಿದೆಗಡಾ ನಾನಿವನನೊಲ್ದಿರ್ಪುದು. (ಎಂದು ಪ್ರಕಾಶಂ) ಫಡಫಡ. ಇಂತೆನ್ನಂ ತೆಗಳ್ವೆಯೇಂ.

(ಎಂದು ಮೂರ್ಮೆ ಪೊಡವಿಯನೊದೆದಳ್)

(ಆಗಳೊಂದು ಪರ್ಬವು ವಿಕ್ರಮಸಿಂಹನತ್ತಲೈತಂದದು)

ರಾಯಂ— ಕಂ || ರಸನಾಯುಗ್ಮಮನಂದದೆ |
ಪಸರಿಸುತಂ ಬಿಸಮನುಗುಳುತಿರ್ಕೆಲದೊಳಗಂ ||
ಉಸಿರಿಕ್ಕುತುರುಳ್ಚುತೆ ತರು |
ವಿಸರಮನಿಪೊ ನನ್ನನಜಗರಂಬಳಸಾಗರ್ಕಂ || ೩೯ ||

ಆಃ! ಈಗಳಾನಿನ್ನೇವೆಂ. (ಎಂದು ಚಿಂತಿಸಿ) ಬಳ್ಳಿತ್ತು. ಈಮಾಯಾವಿನಿಯುಂ ಮೊದಲ್ ನಡೆದು ಬಳಿಯಮೀಪೆರ್ಬಾವಂ ಕೊಂದಪಂ. (ಎಂದೊರೆಯಿಂ ಬಾಳನುರ್ಚುವಂ)

ವಕ್ರಾಂಗಿ—(ತನ್ನೊಳ್) ಈಗಳಾನಿವನಂ ಕೊಲದಿರ್ದೊಡೆ ನನ್ನನಿವನೆ ಕೊಂದಪಂ. ಈತನ ಮೆಯ್ಸೊಬಗನಭೀಕ್ಷಿಸುತ್ತೊಡೆನ್ನ ಮನದೊಳ್ ಕಟ್ಟುರಕಮುಣ್ಮುತಿರ್ಪುದೈಸೆ. ಬಳ್ಳಿತ್ತು ಇವನಿವರ್ಕಂಜುವನಲ್ತು. ಇವನ ಪ್ರಿಯತಮೆಯಾದಾ ಕನಕಲತೆಯನಾನಿಲ್ಲಿಗುಯ್ದು ಇವನಿದಿರೊಳವಳ್ಗೆ ಡರನಮುರ್ಚಿ ಕಾಡುವೊಡೆ ಆಗಳಿವನದಂ ನಿರುಕಿಸಿ ನೈಸಲ್ಕಾರದೆ ನನ್ನೆಳಸಂ ಸಫಲಮೆಸಗುವಂ. ಅನ್ನೆವರಮಿವನಿಲ್ಲಿಯೆ ನಿಶ್ಚಲನಾಗಿರ್ಕೆ. (ಎಂದು ಪ್ರಕಾಶಂ) ಎಲೆ ನಿರ್ಭಾಗ್ಯ! ನಿಲ್ನಿಲ್. ನಿನ್ನ ಕೃತ್ಯಕೆ ತಕ್ಕ ಫಲಮನನುಭವಿಪೆ. (ಎಂದು ವಿಕ್ರಮಸಿಂಹನ ಮೇಗೆ ಭಸ್ಮಮಂ ಸೂಸಿದಳ್)

ರಾಯಂ—(ನಿಶ್ಚಲನಾಗಿ) ಆಃ! ಈ ಮಾಯಾವಿನಿ ಯೆನ್ನನೆಂತಪ್ಪವಸ್ಥೆಗೆ ನೆರೆಗೆಯ್ದಳ್. ಈಗಳೈಸೆ ;

ಕಂ || ಮಿಡುಕವು ಕರ ಪಾದಂಗಳ್ ||
ನಡುಗುಗುಮೆನ್ನೊಡಲಿದೆಲ್ಲಮೀವಿಗಳ್ ತಾಮ್ ||
ಪಡೆವುವು ಕಿವುಡಂ ಶಕ್ತಿಯು |
ಮೊಡಗುಂದುತೆ ತವಿದು ಪೋದುದಾನಿನ್ನೇವೆಂ || || ೪೦ |

ಅಕಟಕಟಾ! ಎನ್ನ ನಾ—(ಎಂದನಿಕನೆ ಬಿಡುಗಣ್ಣನಾಗಿ ನಿಂದಿರ್ದಂ)

ವಕ್ರಾಂಗಿ—(ಸಂತಸಂಗೊಂಡು) ಈಗಳಾಂ ಕನಕಲತೆಯನಿಲ್ಲಿಗುಯ್ದು ತರ್ಪೆಂ. ಅನ್ನೆವರ ಮಿವನಿಲ್ಲಿಯೆ ನಿಂದಿರ್ಕೆ. (ಎಂದು ನರ್ತಿಸುತ ತೆರಳ್ದಳ್)

(ಬಳಿಯಂ ಮಂದಾರಿಕಾ ಸಾಧನಿಕೆಯರ್ವೆರಸು ವಿದೂಷಕಂ ಸಾರ್ತಂದು)

ವಿದೂಷಕಂ—ಎಲೆ ಕೆಳೆಯಾ! ವಿಕ್ರಮಸಿಂಹ! ನೀನದೆಲ್ಲಿರ್ದಪ್ಪೈ? ಎನ್ನೊಳೇಕೆ ಮೂನರ್ಡಿಯೆ? ನಿನಗಾನಾವಕಾರಮ ನೊಡರ್ಚಿದೆಂ? (ಎಂದು ಗೋಳಿಡುವಂ)

ಸಾಧನಿಕೆ—ಎಲೆ ಅಜ್ಜ! ಸೈರಿಸು ಸೈರಿಸು,

ಮಂದಾರಿಕೆ—ಅಕಟಕಟಾ, ಈ ಘೋರಾರಣ್ಯದೊಳವನೆಲ್ಲಿರ್ಪನೊ!

ಸಾಧನಿಕೆ—(ಸುತ್ತಲುಂ ನಿಟ್ಟಿಸಿ) ಕೆಳದಿ! ಸಾಧನಿಕೇ! ಇತ್ತಲಾವನೊ ಬಿಡುಗಣ್ಣಂತೆಮೆಯಿಕ್ಕದೆ ಸುಮ್ಮನೆ ನೋಡುತಿರ್ಪಂ.

ಮಂದಾರಿಕೆ—(ನಿರೀಕ್ಷಿಸಿ) ಆಃ! ಕೆಳದಿ!! ಇದೊ ವಿಕ್ರಮಸಿಂಹಂ!!!

ವಿದೂಷಕಂ—(ವಿಕ್ರಮಸಿಂಹನ ಬಳಿಸಾರ್ದು) ಕೆಳೆಯಾ! ಇದೇನೆನ್ನೊಳ್ ಸೊಲ್ಲಿಸದೆ ನಿಂದಿರ್ಪೆ? (ಎಂದು ವಿಕ್ರಮಸಿಂಹನನಲುಗಿಸಿ) ಅರರೇ! ಇದೇನಿವನಿಂತು ನಿಶ್ಚಲನಾಗಿರ್ಪಂ!

ಸಾಧನಿಕೆ—(ವಿಕ್ರಮಸಿಂಹನ ಪೊರೆಯಂ ಸಾರ್ದು) ಎಲೆ ಧೌರೇಯಕ! ಈತನ ಕೂರಮಾದ ದಿಟ್ಟಿಯುಮಂ ಉಚ್ಛ್ವಾಸ ನಿಶ್ವಾಸಗಳುಮಂ ನಿಶ್ಚಲತ್ವಮುಮಂ ನಿರುಕಿಪ್ಪೊಡೆ ಆವನೊ ಒರ್ವನೈಂದ್ರಜಾಲಿಕನಿವಂಗಿಂತಪ್ಪ ಗತಿಯ ನೊದವಿಸಿರ್ಪನೆಂದು ತೋರ್ಪುದು.

ವಿದೂಷಕಂ—ಎಲೆಗೆ! ಅಂತಾದೊಡೆ ಚಿಂತೆಯೇಕೆ? ಇಂತಪ್ಪ ಐಂದ್ರಜಾಲಂಗಳಂ ಪರಿಹರಿಸಲಾರ್ತ ತಿರಸ್ಕರಿಣೀ ಮಂತ್ರಮನೆಮ್ಮ ತಂದೆ ತನ್ನ ಕಡೆಗಾಲದೊಳ್ ನನಗುಪದೇಶಂಗೆಯ್ದಿರ್ಪಂ. ಈಗಳಾನದಂ ಜಪಿಸಿ ಕವಿದಿರ್ಪೀಮಾಯೆಯುಮಂ ತೊಟ್ಟನೆ ತವಿಪೆಂ.

ಮಂದಾರಿಕೆ—ಎಲ್ಲೈ! ಅಂತಾದೊಡೆಚಚ್ಚರಮೆಸಗ,

ವಿದೂಷಕಂ—ಎಲೆಗೆ! ನೀಂ ಪೋಗಿ ಜಲಮಂ ಕೊಂಡುಬಾರಾ.

ಮಂದಾರಿಕೆ—ಅಂತೆ ಅಕ್ಕೆ. (ಎಂದು ಪೋಗಿ ಮಗುಳ್ದುಂ ನೀರಂ ಕೊಂಡುಬಂದಳ್.)

ವಿದೂಷಕಂ—(ವಿಕ್ರಮಸಿಂಹನ ಮೇಗೆ ಜಲಮಂ ಚಳಂಕಿಸಿ ತಳಮನಿಟ್ಟು ಮಂತ್ರ ಪುನಶ್ಚರಣೆಯಂ ಗೆಯ್ವಂ.)

ಒಡನಾ ಕಾಡೆಲ್ಲಮುಮುದ್ಯಾನವನಮಾದುದು. ವಿಕ್ರಮಸಿಂಹಂ ಮೆಲ್ಲನೆಳ್ದಾಗುಳಿಸಿದಂ.)

ಸಾಧನಿಕೆ—ಎಲೆ ಧೌರೇಯಕ! ಈ ಮಹಾರಾಯಂ ನಿನ್ನ ಮಂತ್ರದ ಮೈಮೆಯಿಂದೀಗಳ್ ನಿದ್ರಿತನೆಚ್ಚರ್ತಂತಿರೆ ಮೆಲ್ಲನೆಳ್ದಂ. ಮತ್ತಮೀಕಾನನಮೆಲ್ಲಮುಮುದ್ಯಾನವನ ಮಾದುದೈಸೆ!

ವಿದೂಷಕಂ—(ಸಂತಸಂಗೊಂಡು ರಾಯನಂ ತಳ್ಕೈಸಿ) ಎಲೆ ಕೆಳೆಯಾ! ನಿನ್ನನಿಂತಪ್ಪವಸ್ಥೆಗೆ ನೆಲೆಗೆಯ್ದ ದುರಾತ್ಮರಾರ್. ನುಡಿಯ.

ರಾಯಂ—ಎಲೆ ಮೈತ್ರೇಯ! ಇದೇನಿಂತೆಸಗುವಾರರಿಯೆಯ?

ಕಂ ‖ ಒದವಿಸಿ ದಾರಿದ್ರ್ಯಮನೊ |
ಳ್ಪಿದರೊಳ್ ಕಟ್ಟಳಲಮರ್ಚಿ ಕಾಡುತಿರ್ಪರೊಳ್ ‖
ಮುದಮಂ ಬೀರುತೆ ನಲಿಯಿಪ |
ಬಿದಿತಾನಿಂತಪ್ಪವಸ್ಥೆಗೀಡಾಗಿಸಿತೈ ‖ ‖ ೩೧ ‖

ಎಲೆ ಮೈತ್ರೇಯ! ಕನಕಲತೆಯೆಲ್ಲಿರ್ಪಳ್?

ವಿದೂಷಕಂ—ಕೆಳೆಯಾ! ಜಲಾಹರಣಕೋಸುಗಂ ನೀಂ ತೆರಳ್ದ ಬಳಿಕ್ಕೆ ಪಲ ಕಾಲಂ ನಿನ್ನಾಗಮನಮಂ ನಿರೀಕ್ಷಿಸುತಿರ್ದು ನಾನುಂ ಕನಕಲತೆಯುಂ ನಿನ್ನನರಸುತಿಲ್ಲಿಗೆಯ್ತರುತಿರ್ದೆವು. ಆಗಳಾರೊ ನಮ್ಮಂ ಸರಲಿಂ ಪೆಚ್ಚರ್. ಬಳಿಯಮಾಂ ಮುಚ್ಚೆಗೆಸಂದೆಂ. ಅನಂತರಮೇನಾದುದೊ ಅದನೆಲ್ಲಮುಮೀ ಮಂದಾರಿಕಾ ಸಾಧನಿಕೆಯರರಿವರ್.

ರಾಯಂ—ಎಲೆ ಸಾಧನಿಕೆ! ನೀನಿಲ್ಲಿಗೆಂತು ಬಂದಾ?

ಸಾಧನಿಕೆ—ಎಲೆ ಮಹಾರಾಯ! ಚಿತ್ತವಿಸು, ಬಿನ್ನವಿಪೆಂ. ಕನಕಲತೆಯನೊಡಂಗೊಂಡು ನೀನಿತ್ತಲ್ ಬಂದಬಳಿಕೆ ರಕ್ಕಸಿಯಾದಾಮಾಲಿನಿ ಎಮ್ಮ ಚಂಡವಿಕ್ರಮ ಮಹಾರಾಜನಂ ತಂತ್ರದಿಂ ಕೊಲಿಸಿ ಎಮ್ಮ ದೇವಿಯರನವರ ಪರಿವಾರಂ ಬೆರಸುಬಂದಿವಿಡಿದು ನಮ್ಮಿರ್ವರುಮಂ ದೇಶಭ್ರಷ್ಟೆಯರನೊಡರ್ಚಿದಳ್. ಎಮ್ಮ ಕಂಚುಕಿಯಾದ ಜರಂತಕಂ ವಿಧಿವಶದಿಂ ಸೆರೆಸಾಲೆಯೊಡೆಯನಾಗಿ ಚಂದ್ರ ನಗರದೊಳೆ ನಿಂದಂ. ಮಧೂಲಕಂ ಕನಕಲತೆಗೋಸುಗಂ ನಿನ್ನನೆ ಪಿಂದಳೆದು ಬಂದು ಈ ಘೋರೇಯಕನಂ ತೆಗೆನೆರೆದೆಚ್ಚಂ. ಬಳಿಯಂ ಕನಕಲತೆ ಆ ನೀಚನಂ ಕಂಡು ನುಗಿದು ಗೋಳಿಡಲವಂ ಪಾಳೆಲ್ದಂ. ಅನಂತರಂ ಕನಕಲತೆಯೇನಾದಳೊ ನಾನರಿಯೆಂ. (ಎಂದು **ಕಣ್ಬನಿ ದುಂಬಿದಳ್**)

ರಾಯಂ—ಹಾ! ಪ್ರಿಯೆ! ಕನಕಲತೆ! ನಿನ್ನನಾವೆಡೆಯೊಳ್ ಕಾಣ್ಬೆಂ. ಇನ್ನೇವೆಂ? (ಎಂದು **ಮೂರ್ಛಿತನಾದಂ.**)

ಮಂದಾರಿಕೆ—**(ರಾಯನಂ ಸೆರಂಗಿನಿಂ ಬೀಸಿ ಎಚ್ಚರಿಸಿದಳ್)**

ರಾಯಂ—ಕಂ॥ ರತಿಯಂ ಸೌಂದರ್ಯದಿಭಾ।
ರತಿಯಂ ಚಾತುರ್ಯದಿಂದೆ ನಾಣ್ಗೊಳಿಸಿದಳಾ॥
ಸತಿಯನಗಲ್ದೀಕ್ಷಿತಿಯೊಳ್।
ಗತಿಸಿರ್ಭಾಗ್ಯನೆನಿಸಿ ನಾನದೆಂತು ಬಾಳ್ದಪೆನಕಟಾ ॥೩೦॥

ಎಲೆ ಸಾಧನಿಕೆ! ನೀನಾಮಧೂಲಕನ ಮರುಮಂಚಿತನಮನೆನ್ನೊಳಾಗಳೆ ನುಡಿದಿರ್ದೆಗಳ. ಅವನೆ ವಕ್ರಾಂಗಿಯೆಂಬ ಯಕ್ಷಿಣಿಯಂ ಕಳುಪಿ ನನ್ನುಮಂ ತಳವೆಳಗಾಗಿಸಿದಂ (**ಎಂದು ಕನಲ್ಕೆಗೊಂಡು ಗಗನದೊಳ್ ಲಕ್ಷ್ಯಮನಿಟ್ಟು**) ಎಲೆ ಮಧೂಲಕ ಪತಕ! ಇನ್ನಿನ್ನಾಯು ಪರಿಪೂರ್ಣತೆಯಾಂತುದೈನೆ;

(ಎಂದು ತೆರೆಯತ್ತಲ್ ತಿರುಗಿ) ಎಲೆ ಸಮರ್ಥಕ! ಸಮರ್ಥಕ!!

ಸಮರ್ಥಕಂ—(ಪ್ರವೇಶಿಸಿ) ಇದೆ ಬಂದೆಂ. ಆವುದಾಣತಿ?

ಪ್ರಮಥಾನಂದಂ—ಈಗಳೆಮ್ಮಲೆವನೆಯೊಳ್ ಹೋಮದ್ರವ್ಯಂಗಳನನಿತುಮಂ ಸಜ್ಜುಗೊಳಿಸಿ ನಿರ್ಮಲಾನದಿಯಿಂ ಚಕ್ಕನಗ್ರ್ಯೋದಕಮಂ ಕೊಂಡು ಬಾರ. ಸಮಿತ್ಪುಷ್ಪಂಗಳಂ ತರ್ಪುದೆಂದು ವಟುಗಳ್ಗೆ ಬೆಸಸು. ಚೆಚ್ಚರಂ ನಡೆ.

ಸಮರ್ಥಕಂ—ಅಣತಿ. (ಎಂದಿರ್ವರುಂ ತೆರಳ್ದರ್)

(ಅನಂತರಂ ವಕ್ರಾಂಗಿ ಪುಗುವಳ್)

ವಕ್ರಾಂಗಿ—ಈಗಳೆನ್ನ ವಿದ್ಯಾಪ್ರಭಾವದಿಂ ವಿಕ್ರಮಸಿಂಹನಂ ಜೇಳ್ಮತಿ ಅವನೊಳ್ ಪಸೆಸಿಲಲೆಳಸಿರ್ಪೆಂ. ಅದರಿಂ ಕನಕಲತೆಯು ನವನ ಕೆಲಕುಯ್ದು ಅವಳಂ ಕಾಡುವೊಡೆ ವಿಕ್ರಮಸಿಂಹನವ ನೀಕ್ಷಿಸಿ ನೈಸಪೆ ನನ್ನ ಬಯ್ಕೆಯಂ ಸಲಿಸುವಂ. ಈಗಳಾ ಚಿತ್ರಕೂಟಪರ್ವತದೆಡೆಯೊಳ್ ಕನಕಲತೆ ಯಿಲ್ಲಮತ್ತಿ. ಇನ್ನೇಗೆಯ್ವೆಂ. (ಎಂದು ಚಿಂತಿಸಿ) ಬಳ್ಳಿತ್ತು ಇದಿರೊಳ್ ಕಣ್ಗೊಳುತಿರ್ಪಿ ಅನರ್ಘಪುರದೊಳವಳಿರವೇಳ್ಕು ಮೊಂದನುವಿಪೆಂ. ಅದರಿಂ ತುರಿಸದೆ ಪೋಗಿ ಅವಳ ನರಸುವೆಂ. (ಎಂದು ತೆರಳ್ದಳ್)

(ಬಳಿಮಮರಿಕೇಸರಿಯು ನೆರವನೆಯೊಳಿರ್ದ ಕನಕಲತೆ ಪುಗುವಳ್.)

ಕನಕಲತೆ—(ಕಣ್ಬನಿದುಂಬಿ)

ಕಂ || ಸಲಿಲಮನರಸುತೆವನದೊಳ್ |
ಗುಳಿದೆನ್ನಂತಳರ್ದೆ*ಯೆಲ್ಲಿ ಗಕ್ಕಟಕಾಂತಾ ||
ಖಲನೆನ್ನಂ ನೆರೆಗೆಯ್ದಂ |
ಗಳಳಲ್ಬವನರಿಯೆನಾರುಮಂ ರಕ್ಷಕರಂ || || ೩೬ ||

(ಎಂದು ನಿಟ್ಟುಸಿರಿಕ್ಕುತ) ಎಲೆ ದೈವಮೆ ! ನಿನಗೆ ನಾನಾವಪಕಾರವು ನೆಸಗಿದುದರ್ಕೆನ್ನ ನಿಂತೞಲ್ಚುತಿರ್ಪೈ ! ಆಃ ಈಗಳಾರೆನ್ನನೀ ಸೆರೆಸಾಲೆಯಿಂ ಬಿಡುತೆಗೊಳಿಪರ್ ! ಅಕಟಕಟಾ ! ಈ ದುರುಳನಾದೊಡೆನ್ನಂ ಬಲ್ಮೆಯಿಂದಿಲ್ಲಿಗುಯ್ದು ಭಂಜಿಸಲ್ ಬಗೆದಿರ್ಪಂ. ಇನ್ನೆನ್ನ ಪಾತಿವ್ರತ್ಯಕ್ಕೆ ದಿಟವಾಗಿಯುಂ ಹಾನಿವರ್ಪುದಲ್ತೆ. ಎಲೆಲೆ ! ಅಸಿಯರ್ಗೆ ಪಾತಿವ್ರತ್ಯದತ್ತಣಿಂ ಪೆರತಾವ ಧರ್ಮಮಿರ್ಪುದು. ಜೆಃಜೆಃ.

(ಬಳಿಕ್ಕೆ ವಕ್ರಾಂಗಿ ಪ್ರವೇಶಿಸಿ ಬಂಧನಾಲಯದ ಸನಿಹವಂ ಸಾರ್ದು)

ವಕ್ರಾಂಗಿ—ಇದೇ ನೀ ಬಂಧನಾಲಯದೊಳಾರೊ ದುಃಖಿಸುತಿರ್ಪರ್ ! ಒಳ್ಳಿತ್ತು. ಆಲಿಸುವೆಂ. (ಎಂದಾಲಿಸುತಿರ್ದಳ್)

ಕನಕಲತೆ— ನಾಣಿಲ್ಲದ ನಾರಿಯುಂ ನಾಯಮಿಲ್ಲದ ನಾಡೊಡೆಯನುಂ ಬಾಳ್ವುದನುಳಿದು ಸಾಯ್ವುದುತ್ತಮಮೆನ್ಸೆ ;

ಕಂ || ಬಗೆವೊಡೆ ಪಾತಿವ್ರತ್ಯಮೆ |
ಸೊಗಯಿಪ ತೊಡುವಲ್ತೆ ಲಲನೆಯರ್ಗದನುಳಿಯಲ್ ||
ಜಗದೊಳ್ ವನಿತೆಯರೆನಿಪರೆ |
ಬಗೆಗೊಳ್ವುದೆ ಗಂಧಮುಳಿಯೆ ಪುಷ್ಪಸ್ತಬಕಂ || || ೪೨ ||

ವಕ್ರಾಂಗಿ—ಆಃ ಇವಳದಾರ್ ! ತನ್ನ ಪಾತಿವ್ರತ್ಯಂ ಕಿಡುಗುಮೆಂದು ಸಂಕಿಸಿ ಉಮ್ಮಳಂಗೊಂಡಿರ್ಪಳ್. ಒಳ್ಳಿತ್ತು ಇನ್ನು ಮಿವಳಾಲಾಪವುನಾಲಿಸಿ ತಿಳಿವೆಂ. (ಎಂದಾಲಿಸುತಿರ್ದಳ್).

ಕನಕಲತೆ—ಆಃ ಚಂಡವಿಕ್ರಮ ಮಹಾರಾಜನ ಬಸಿರೊಳುದಯಿಸಿ, ವಿಕ್ರಮಸಿಂಹ ಮಹಾರಾಜನಂ ಕೈವಿಡಿದು ಈ ಖಲನ ಸೆರೆವನೆಯೊಳ್ ತೊಳಲುತಿರ್ಪ ನಾನೆಂತಪ್ಪ ನಿರ್ಭಾಗ್ಯೆ !

ವಕ್ರಾಂಗಿ—(ಸಂತಸಂಗೊಂಡು) ಆಃ ನನ್ನೆಳವು ಕೈಸಾರ್ದುದಲ್ತೆ. (ಎಂದು

ಪ್ರಕಾಶಂ) ಎಲೆ ಕನಕಲತೆ! ಸೈರಿಸು, ನಿನ್ನನಾಂ ವಿಕ್ರಮಸಿಂಹನಂ ಬಳಿಸಾರ್ಚುವೆಂ.

ಕನಕಲತೆ—(ಬಂಧನಾಲಯದ ಗವಾಕ್ಷದತ್ತಣಿಂ ನಿಟ್ಟಿಸಿ) ಇದೇನೆನ್ನ ಸಾವಳೊ ಆರ್ಯಪುತ್ರನ ಕೆಲಕೆ ಕರೆದುಯ್ವೆನೆಂದು ಕೂಗಿಡುವಳ್!

ವಕ್ರಾಂಗಿ—ಎಲೆಗೆ! ಆನೊರ್ವಳ್ ತಪಸ್ವಿನಿ. ವಿಕ್ರಮಸಿಂಹನೆಂಬೆಳೆಯಾಳ್ದಂ ನಿನ್ನ ಬಿರಹದಿಂ ತೊಳಲುತೆ ನನ್ನ ಸಾಹ್ಯಮನಪೇಕ್ಷಿಸಿ ನನ್ನಂ ಪ್ರಾರ್ಥಿಸಿದಂ. ಆನವನಂ ನಿರುಕಿಸಿ ಮರುಗಿ ನಿನ್ನ ನರಸುತಿಲ್ಲಿಗೈತಂದೆಂ ನೀನೆನ್ನಂ ಪಿಂದಳೆದು ಬಾರ, ನಿನ್ನಂ ಕರೆದುಯ್ವೆಂ.

ಕನಕಲತೆ—(ಸಂತಸದಿಂ, ಸ್ವಗತಂ) ಎಲ್ಲೈ! ಸರ್ವಾಂತರ್ಯಾಮಿಯಾದ ಜಗದ್ರಕ್ಷಕ! ನೀನೀಗಳೆನ್ನಳಲಂ ಕಂಡು ಸೈರಿಸಲಾರದೆ ಈ ರೂಪಿಂದಿಲ್ಲಿಗೈತಂದೆಯೋ? (ಎಂದು ಪ್ರಕಾಶಂ) ಎಲಾ! ನಾನೀಯೆಡೆಯಿಂ ಬಿಡುತೆಗೊಂಡು ಬರ್ಪುದೆಂತು?

ವಕ್ರಾಂಗಿ—ಎಲೆ ವತ್ಸೇ! ನೀನೆನ್ನ ತಪದ ಮೈಮೆಯಿಂದೊರ್ವರ್ಗಂ ಕಣ್ಬೊಲನಾಗದಿರ್ಪೆ, ಚಕ್ಕನೆ ಬಾರ. (ಎಂದು ಕಣ್ಗಳಂ ಮುಚ್ಚಿಕೊಂಡು ಜಾನಿಸಿದಳ್, ಒಡನಾಸೆರೆಸಾಲೆಯ ಬಾಗಿಲ್ ತೆರೆಯಲ್ಪಟ್ಟುದು)

ಕನಕಲತೆ—(ಅಚ್ಚರಿಯಿಂದೆ) ಈ ತಪಸ್ವಿನಿಯ ತಪೋಮಹಿಮೆ ಬಣ್ಣಿಸಲರಿದಾಗಿರ್ಪುದು. (ಎಂದು ಮೆಲ್ಲನೆ ಪೊರಮಟ್ಟು ಬಂದಳ್)

ವಕ್ರಾಂಗಿ—ಎಲೆಗೆ! ನಡೆನಡೆ. ತಳ್ವುವೊಡೆನ್ನ ಕಾರ್ಯಮೆಲ್ಲ ಮತ್ಯಾಹಿತಮಕ್ಕುಂ (ಎಂದು ಕನಕಲತೆಯ ನೊಡಂಗೊಂಡು ತೆರಳ್ದಳ್)

(ಬಳಿಕ್ಕ ಚೋರರ್ ಪುಗುವರ್)

ಚೋರರ್—ಮ|| ವಿ|| ಮಳೆಗಾಲಂಬರೆ ಚಂದ್ರಯಾಮಿಕವಿಹೀನಂ ನಟ್ಟಿರುಳ್
ಸಂದಿರಲ್ | ಪೊಳಲಂ ಸ್ವರ್ವಾತಿಪರ್ಷದಿಂದವಿರತಂ ಕಳ್ದುಯ್ವ

ವೈಶ್ವರ್ಯಮುಮಂ ॥ ಪಗಲುಮಂ ತೊಟ್ಟನೆ ಸಾರ್ದು ನಟ್ಟವಗಲೊಳ್
ಪಾಂಥರ್ಕಳಂ ಕಾಡಿಕ | ಟ್ಟಳರಂ ಸಾರ್ಚಿ ಸಮಸ್ತ ವಸ್ತ್ರಧನ
ಮಂ ಕೊಂಡುಯ್ದಪೆವ್ ಗ್ರೀಷ್ಮದೊಳ್ ॥ ॥ ೪೮ ॥

ಮೊದಲನೆಯಂ—ಎಲೈ! ಇಂದು ನೀಮೆಲ್ಲರುಂ ತಂದಿರ್ಪ ವಸ್ತುಗಳನೇಗೆಯ್ದಿರ್?

ಎರಡನೆಯಂ—ಎಮ್ಮ ಸಂಕೇತಸ್ಥಾನದೊಳದಂ ಪೂಳ್ದಿಟ್ಟೆವ್.

ಮೊದಲನೆಯಂ—ಈಗಳಾಂ ದೇವಾಲಯಮುಮಂ ಸಾರ್ದು ಭಗವತಿಯಪ್ಪ ಮಹಾಕಾಳಿಯುಂ ಪೂಜಿಸಿ ಬಚ್ಚರಂ ಬಂದಪೆಂ. ನೀಮೆಲ್ಲರುಂ ಚಂದ್ರನಗರದ ಮಾರ್ಗದೊಳ್ ಪಿಸಟುಂಬರಿದು ಬಟ್ಟೆಗರೊಳರ್ಪ ಧನಕನಕಾದಿಗಳ್ ನೀಳ್ದುಕೊಂಡು ಬನ್ನಿಂ.

ಎಲ್ಲರುಂ—ಬಹುಸಾಣತಿ (ಎಂದು ತೆರಳ್ದರ್)

(ಅನಂತರಂ ಕನಕಲತೆವೆರಸು ವಕ್ರಾಂಗಿ ಸಾರ್ತಂದು)

ವಕ್ರಾಂಗಿ—(ಸ್ವಗತಂ) ಆಃ! ಆನಲ್ಲಿ ನಿರ್ಮಿಸಿರ್ದ ಕಾಪೆಲ್ಲಮುಂ ಮುದ್ಯಾನವನಮಾಗಿರ್ಪುದು. ವಿಕ್ರಮಸಿಂಹನುಮಲ್ಲಿಲ್ಲ. ಅರರೆ! ಚದುರನಾದಾವನೊ ಒರ್ವ ನೈಂದ್ರಜಾಲಿಕನವನು ಬಿಡುತೆ ಗೊಳಿಸಿರವೇಳ್ಕುಮೆಂದಪನುಪ್ಪೆಂ. ಈಗಳಾ ನಿನ್ನೇಗೆಯ್ವೆಂ. (ಎಂದು **ಚಿಂತಿಸಿ**) ಒಳ್ಳಿತ್ತು. ಇವಳನಾ ಮಧೂಲಕನ ಕೆಲಕುಯ್ದೊಡೆ ಅವಂ ನೋಡುಂ ನಲಿದಾಡುವಂ. ಅವರಿರ್ದಿವಳಂ ಮಧೂಲಕನಂ ಬಳಸಾರ್ಚುವೆಂ.

ಕನಕಲತೆ—ಎಲಾ! ಅದೇಂ? ಚಿಂತಿಸುತಿರ್ಪೆ? ಆರ್ಯಪುತ್ರನೆಲ್ಲಿರ್ಪಂ? ನಿನ್ನಾಶ್ರಮಮಿನ್ನು ಮೆನಿತ್ತು ದೂರದೊಳಿರ್ಪುದು?

ವಕ್ರಾಂಗಿ—ಎಲೆಗೆ! ಎನ್ನಲೆವನೆಯೆಲ್ಲಮುಂ ಸುಟ್ಟುರಿದುಪೋದುದು. ವಿಕ್ರಮಸಿಂಹನು ಮಗನಿಗಾಹುತಿಯಾದಂ.

ಕನಕಲತೆ—(ದುಃಖದಿಂದೆ) ಹಾ ! ಆರ್ಯಪುತ್ರಾ ! ರಿಪುಮದೇಭಕಂಠೀರವಾ !

(ಎಂದು ಮೂರ್ಛೆಗೆ ಸಂದಳ್)

ವಕ್ರಾಂಗಿ—(ಕನಕಲತೆಯಂ ಸೆರಂಗಿನಿಂ ಬೀಸಿ ಮೆಲ್ಲನೆಚ್ಚರಿಸಿದಳ್)

ಕನಕಲತೆ—(ಮೆಲ್ಲನೆಳ್ದು ಕಣ್ಬನಿದುಂಬಿ)

ಚಂ|| ಮಾ|| ಉಳಿಯುತೆ ನಿನ್ನನೀಗಹನಮಾದ ವನಾಂತರದಲ್ಲಿ ಭೋಂಕನೀ| ಗಳೆಸುರಲೋಕದಲ್ಲೆಸೆವ ಸುಂದರಿಯರ್ಕಳ ಚೆಲ್ವ ನೀಕ್ಷಿಸು|| ತ್ತೊಲಿಯುತನೆಂತು ಪೋದೆಯರಸಾ ! ಅಪರಾಧಿನಿಯಲ್ತು ನಿನ್ನೊಳಾಂ | ತಿಳಿಯದೆ ನಿನ್ನನೊಲ್ದುದಪರಾಧಮೆನಿಪ್ಪೊಡೆನಾಡೆ ಮನ್ನಿಸಾ || || ೪೯ ||

(ಎಂದು ನಿಟ್ಟುಸಿರಿಕ್ಕಿ ಮತ್ತಂ ಮೂರ್ಛಿತೆಯಾದಳ್)

ವಕ್ರಾಂಗಿ—ಎಲೆ ಮುಗುದೆ ! ಇನ್ನೇಕೆ ಶೋಕಿಪೆ ? ನಡೆ. ಎಮ್ಮ ಮಧೂಲಕನೊಳ್ ಪಸೆಸಿಂದು ಸೊಗವಾಳ್.

ಕನಕಲತೆ—(ಸ್ವಗತಂ)ಇದೇನಿವಳಿಂತಪ್ಪ ಕಠಿನೋಕ್ತಿಗಳ ನಾಡುವಳ್ ! ಆಃ ! ಇವಳು ಮಾನೀಚನ ಪಕ್ಷಪಾತಿನಿಯಾಗಿರವೇಳ್ಕುಂ. ಅಕಟಕಟಾ ! ದೀವಿಯಂ ಪಾಲ್ಬುಸುಳ ಪಡೆತ್ತು ತಳದಿಂ ಪಿಡಿವಂತಿರೆ ನಾನೀರಕ್ಕಸಿಯಂ ತಪಸ್ವಿನಿಯೆಂದು ಬಗೆದಿರ್ದೆಂ. (ಎಂದು ಪ್ರಕಾಶಂ) ಎಲೆ ದುಷ್ಟೆ! ಇಂತಪ್ಪ ದುರ್ಭಾಷೆಯನೆನ್ನಿದಿರೊಳುಸಿರದಿರ್. ತೊಲಗು ತೊಲಗು.

ವಕ್ರಾಂಗಿ—(ಕನಲ್ದು) ಎಲೆಗೆ ! ಎನ್ನ ನಿಂತುಮಾಂಕರಿಸುತಿರ್ಪೆಯ್ಯಸೆ ; ನಾನೆಮುಹಾ ಯಕ್ಷಿಣಿಯಾದ ವಕ್ರಾಂಗಿಯೆಂಬುದಂ ನೀನರಿಯೆ. ಈಗಳದರಿನೇಂ ? ನಡೆನಡೆ. (ಎಂದು ಬಲ್ಮೆಯಿಂ ಕಳದುಯ್ದಳ್)

(ಬಳಿಯಂ ಮಧೂಲಕಂ ಪುಗುವಂ)

ಮಧೂಲಕಂ—ಚಂ|| ಮಾ|| ತೊಡಗಿದ ಕಜ್ಜಮಂ ಪಲವೆಡರ್ ಸಮನಿಪ್ಪೊಡು ಮೊಲ್ದು ಧೈರ್ಯದಿಂ | ಬಿಡದನೆಯುತ್ತಮಂ ಸುಗಿಯುತಂ ಪೆಡ ಮೆಟ್ಟುವನಲ್ತೆ ಮಧ್ಯಮಂ || ಕಡುನೆಳರಿಂದೆ ಚೆಚ್ಚಳಿಸಿ ಕಜ್ಜ

ಪೊಡರ್ಚದೆ ಸ್ಥಿರಿರುತ್ತಿರ್ಬಾ! ಯ್ವಿಡುವನೆ ಭೂಮಿಯಲ್ಲಿ ಧಮನಂತ
ವರಿಂ ಸರಿವರ್ಪನಾದ್ಯನೊಳ್ || || ೫೦ ||

ಈ ಕಾಡೊಳ್ ಯಾತಾಯಾತಾದಿಂದೆನಗೆ ಮಿಗೆಲೆಸಿಸಿ ದಾಹಮಸವೊ
ದವಿರ್ಪುದು. ಈಗಳಾಸೀಮರನ ತಣ್ನೆಳಲೊಳಾದೊಡಂ ವಿಶ್ರಾಂತಿ
ಸುಖಮನೊಂದುವೆಂ. (ಎಂದಂತೆಗೆಯ್ದಿಂ)

(ಜವನಿಕೆಯೊಳ್ ಕಲಕಲಮಕ್ಕುಂ)

(ಬಳಿಕ್ಕೆ ಚೋರರ್ ಕನಕಲತೆಯಂ ಸೆಳೆತರ್ಪರ್)

ಮಧೂಲಕಂ—(ಭೀತಿಯಿಂದೆ) ಆಃ! ಇವರೆಲ್ಲರುಂ ಚೋರರಲ್ತೆ. ಪಾಂಥರ್ಕ
ಳಂ ಸದೆದು ಈ ಲಲನೆಯುಂ ಸೆಳೆತಂದಿರವೇಳ್ಕುಂ. ಇವರೆನ್ನಂ
ಕಂಡೊಡೆನ್ನಗತಿಯೆಂತಪ್ಪುದೊ. ಈಮರನ ಮರೆಯೊಳಾದೊಡಮಡ
ಗಿರ್ಪೆಂ. (ಎಂದು ಮರೆಯೊಳಿರ್ಪಂ)

ಮೊದಲನೆಯಂ—ಎಲೆ ಭೈರವ! ನಿನ್ನ ಮಂತ್ರದ ವೈಭವಂ ಬಣ್ಣಿಸಲರಿದಾ
ಗಿರ್ಕುಂ.

ಎರಡನೆಯಂ—ಅಂತಲ್ಲದೊಡಾಮುಷ್ಟಿ ಮಟಿವುದೆಂತೊಡೇಂ?

ಮೂರನೆಯಂ—ಅವಂತಿರ್ಕೆ. ಈಗಳಿವಳ್ ನಮ್ಮ ಗುಹೆಯೊಳ್ ಬಂದಿಗೆಯ್ದು
ನಮ್ಮನ್ತ್ರಾಳ್ದಂಗರಿಕ್ಕುವಂ.

ಮೊದಲನೆಯಂ—ಅಂತ ಅಕ್ಕೆ. ಇವಳ್ಗೆ ಮೊತ್ತಡೆಯ ನನುರೂಪನಾಗಿರ್ಕುಂ.

ಎರಡನೆಯಂ—(ಕನಕಲತೆಯತ್ತಲ್ ತಿರುಗಿ) ಎಲೆಗೆ! ನಿನಗೆ ದೈವಯೋಗದಿಂ
ದೇಳ್ಗೆಯೊದವುಗುಂ. ನಡೆನಡೆ. ಈ ಗುಹೆಯೊಳ್ ನಿನ್ನಂ ಬಂದಿ
ಗೆಯ್ದು ಕಮ್. (ಎಂಪೆಲ್ಲರುಂ ಕನಕಲತೆಯಂ ಗುಹೆಯೊಳ್ ಸೆರೆಗೆಯ್ದು
ತೆರಳ್ದರ್)

ಮಧೂಲಕಂ—(ಮರನಮರೆಯೊಳ್) ಆಃ! ಈಗಳಾಂ ಬದುರ್ಕಿದೆಂ. ಇತ್ತಲೀ
ಬಟ್ಟೆವಿಡಿದು ಪಾರಿಪೋಗುವೊಡೆನಗೆ ಶುಭಮಕ್ಕುಂ. ಅತ್ತಲವರೇ

ನಾನುಮೆನ್ನಂ ಕಂಡೊಡೆ ಸದೆಯದೆ ಮಾಣರ್. ಈಗಳಿನ್ನೇವೆಂ.

(ಎಂದು ಚಿಂತಿಸುತಿರ್ಪಂ)

(ಬಳಿಕ್ಕೆ ಮಯೂರಕ ಲುಬ್ಧಕರ್ ಪುಗುವರ್)

ಮಯೂರಕಂ--ಎಲೆ ಕೆಳೆಯಾ! ಇನಿತ್ತರಸಿದೊಡ ಮಾಧೂಲಕನೆಲ್ಲಿರ್ಪನೊ ತಿಳಿಯಲಿಲ್ಲಂ.

ಮಾಧೂಲಕಂ—(ಮರೆಯೊಳ್) ಹಿನಾನುಮುಕ್ಕೆ. ಆ ಚೋರರ್ ಹಿಂದಿರುಗುವ ನಿತರೊಳಾಂ ಪಾರಿಪ್ರೋಗುವೆಂ (ಎಂದು ಪೊರಮಟ್ಟು ಪಾರುತಿರ್ಪಂ)

ಲುಬ್ಧಕಂ—(ಮಾಧೂಲಕನಂ ಕಂಡು) ಎಲೆ ಮಯೂರಕ! ಇನಿತರೊಳ್ ಮಾಧೂಲಕಂ ಪಾರಿಪ್ರೋಗುತ್ತಿರ್ಪಂ. ಚಕ್ಕನೆ ಬಾರ. ಆವನಂ ಸದೆವಡೆವಂ

(ಎಂದಿರ್ವರುಂ ಪೋಗಿ ಮಾಧೂಲಕನಂ ಗುದ್ದಿ ನೆಲಸೊಳುರುಳ್ಚಿದರ್)

ಮಯೂರಕಂ—ಎಲೆ ಮೋಸಕಾರ! ಮಿತ್ರದ್ರೋಹಿ!! ಕೃತಘ್ನ!!! ನಿನ್ನ ಕೃತ್ಯಕೆ ತಕ್ಕುದಾವ ಫಲಮನನುಭವಿಸ. (ಎಂದೂರೆಯಿಂ ಬಾಳನುರ್ಚಿದಂ)

ಮಾಧೂಲಕಂ—(ಮೆಲ್ಲನೆಳ್ತರ್ದು ಮಯೂರಕ ಲುಬ್ಧಕರಂ ಕಂಡಟ್ಟರಗೊಂಡು) ಇವರಿರ್ವರುಮೆಂತು ಬರ್ದುಕಿದರ್. ಅಕಟಕಟಾ, ಎನ್ನ ಮನೋರಥಮೆಲ್ಲಮುಂ ಬೀಡಾದುದು. ಇವರೆನ್ನಂಕೊಲ್ವುದೆ ದಿಟಂ. (ಎಂದು ಪ್ರಕಾಶಂ) ಎಲೈ! ಕೆಳೆಯರಿರಾ! ನೀಮಿರ್ವರುಮೆನ್ನೊಳ್ ದಯೆಗೆಯ್ವುದೆ ನಾನಾಮರಣಾಂತಮುಂ ನಿಮ್ಮಾಣತಿಯಂ ತಲೆಯೊಳ್ ತಳೆದಪೆಂ.

ಲುಬ್ಧಕಂ—(ಕನಲ್ದು) ಎಲೆ ಮಿತ್ರದ್ರೋಹಿ! ನಿನ್ನನುಡಿಯಂ ನಂಬಲ್ಕಕ್ಕುಂ. ಏಕೆಂದೊಡೆ:

ಕಂ|| ತುರಗಮುಮಾಮದ ಕಲಭಮು |
ಉರಗಮುಮಬಲೆಯರ ನೈದೆನಂಬಲ್ಕಕ್ಕುಂ ||
ನೆರೆಮಿತ್ರದ್ರೋಹಿಗಳಂ |
ಧರೆಯೊಳ್ ಮತಿವಂತರೆಂತು ನಂಬುವರುಸಿರಾ || ||೨೧||

ಮಯೂರಕಂ—ಎಲೆ ಲುಬ್ಧಕ! ಇವನೊಳೆಮಗೇಕೆಮಾತು? ನಡೆ. ಈ ಕೇಡಾಳಿಯಂ ವಿಕ್ರಮಸಿಂಹನಡಿಯೊಳ್ ಕೆಡಪುವಂ.

ಲುಬ್ಧಕಂ—ಆಂ. ಇವನೆಮಗಮರ್ಚಿಪರ್ ವಿಪತ್ಪರಂಪರೆಯತ್ತಣಿಂದಿರ್ಮಡಿಯಪ್ಪೆಡರ್ಗಳನವಂಗೆ ಸಾರ್ಚಿಪರ್ಂ. ನಡೆಪೋಪಂ. ಈಗಳವಂ ಅನರ್ಘಪುರದರಣ್ಯದೊಳಿರವೇಳ್ಕುಂ. ಇವನನಲ್ಲಿಗೆ ಸೆಳೆದುಯ್ವಂ.

ಮಯೂರಕಂ—ಅಂತೆ ಅಕ್ಕೆ. (ಎಂದು ಮಧೂಲಕನ ನೋಡಿದು) ಎಲೆ ಚೆಲ್ಲವತ್ತ! ಏಳೇಳ್, ನಿನ್ನದುರುದುಂಬಿತನಕಿಂದೆ ಕಡೆಗಾಲಂ. (ಎಂದಿರ್ವರುಂ ಮಧೂಲಕನಂ ಸೆಳೆದುಯ್ದರ್)

ಕನಕಲತೆ—(ಗುಹೆಯೊಳ್)ಎಲೆ ದೈವಮೆ ನಿನ್ನ ವಿಲಾಸಮನೆನಿತ್ತು ಬಣ್ಣಿಪೆಂ. ಆ ಮಾರಾಯುಂಬೆರಸು ಪಲವಂಸೌಖ್ಯಂಗಳನನುಭವಿಸಲ್ಕೆಳಸಿ, ಮಾತಾಪಿತೃಗಳುಮಂ ಸಖೀಜನಮುಮಂ ತೊರೆದು ಆತನೊಡಂ ನಾನಾ ಘೋರಾರಣ್ಯಮಂ ಪುಗುವುದೆಂತು! ಜಲಾಪರಣವ್ಯಾಜದಿಂ ಪೊರಮಟ್ಟ ಆರ್ಯಪುತ್ರನನಗಲ್ದು ಮಧೂಲಕನೆಸಗಲೆಳಸಿರ್ದತ್ಯಾಹಿತಕಂಜಿ ಗೋಳಿಟ್ಟು ನೃಪಾಧಮನಾದ ಅರಿಕೇಸರಿಯ ಸೆರೆವನೆಯೊಳ್ ಬಂದಿಯಾಗಿ ತೊಳಲ್ವುದೆಂತುಟು! ಬಳಿಯಮಲ್ಲಿಗೇಳ್ತಂದಾರಕ್ಕಸಿಯಾದ ಯಕ್ಷಿಣಿಯುಂ ತಪಸ್ವಿನಿಯೆಂದನುವಿಸಿ ಅವಳ ವಿದ್ಯಾಪ್ರಭಾವದಿಂ ಬಿಡುತೆಗೊಂಡು ಬರ್ಪುದೆಂತುಟು! ಇತ್ತಲೀ ಘೋರಾರಣ್ಯದೊಳ್ ಚೋರರವಳಂ ತಮ್ಮ ಮಂತ್ರದ ಮೈಮೆಯಿಂ ಸದೆವಡಿದು ನನ್ನನೀಗುಹೆಯೊಳ್ ಸೆರೆಗೆಯ್ವುದೆಂತುಟು! ಛಿಃ ಛಿಃ

ಕಂ || ತರುಣಿಯಬಾಳ್ಕೆಯೆ ಕಷ್ಟಂ |
ಪರಿಕಿಸೆ ಸೌಂದರಿಯಬಾಳ್ಕೆಯದರೊಳುಂ ಬಹುಕಷ್ಟಂ ||
ಪರವಶತೆಯದತಿಕಷ್ಟಂ |
ಪರಣಮನುಳಿಯಲ್ಕುಮಂಗಮಿತರಾಧೀನಂ || ೩೬ ||

ಈಗಳಿವರೆನ್ನನೇಗೆಯ್ವರೊ ತಿಳಿಯೆಂ. ಇಲ್ಲಿನಾಂಬಿಡುತೆಗೊಳಲ್ಕಾವುದುಮುಪಾಯಮಿಲ್ಲಂ. ಇರ್ಬರಿಯೊಳುಂ ಪೆರ್ಗಲ್ಗಳ್ ತೀರ್ವೈಸಿರ್ಪುವು. ಮುಂಗಡೆಯೊಳ್ ಬಾಗಿಲಿರ್ಪುದು. (ಎಂದು ಪಿಂದಿರುಗಿ) ಆಃ. ಪಿಂಗಡೆಯೊಳ್ ಸೊಗಯಿಪ್ಪದೊಂದು ಪೊನಲ್ ಪರಿಯುತ್ತಿರ್ಕುಂ. ಒಳ್ಳಿತು, ಆನಿದರೊಳ್ ಬಿಳ್ದು ನನ್ನಸುವಂ ನೀಗಾಡುವೆಂ. (ಎಂದು **ಕಣ್ಬನಿದುಂಬಿ**) ಎಲೌ ತರಂಗಿಣಿ ! ನಿನ್ನಂತೆಯೆ ಸ್ತ್ರೀಜನ್ಮಮಂ ತಳೆದಿರ್ಪನಾಂ—(**ಎಂದರ್ಧೋಕ್ತಿಯೊಳ್**) ಫಡ ಫಡ, ಅಂತೊರೆವುದು ಯುಕ್ತಮಲ್ತು. ಸಕಲ ಸೌಭಾಗ್ಯಶಾಲಿನಿಯಾದ ನೀಂ ನಿನ್ನರಸನಂ ಸಾರ್ದಪೆಯಲ್ತೆ. ನಿರ್ಭಾಗ್ಯೆಯಾದ ನಾನೀಗಳಾರ್ಯಪುತ್ರನಂ ನೀಗಾಡಿ ಉಮ್ಮಳಕೆ ತಾಯ್ವನೆಯಾಗಿರ್ಪೆಂ. ಅವರಿಂದಾಂ ನಿನಗೆಣೆಯಲ್ತು ಎಲೆ ತಾಯೇ ! ಈಗಳಾಂ ನಿನ್ನ ಬಸಿರೊಳಡಗುವೆಂ. ನೀನೆನ್ನೊಳ್ ಪುತ್ರೀ ವಾತ್ಸಲ್ಯಮನಿಟ್ಟು ಕಾಪಿಡು. (ಎಂದು **ಪೊನಲೊಳ ಬಿಳ್ದಳ್**)

(ಬಳಿಕ್ಕೆ ಋಷಿಶಿಷ್ಯರ್ ಪುಗುವರ್)

ಕಪರ್ದಕಂ—ಎಲೆ ಭದ್ರಕ ! ಎಮ್ಮ ಗುರುಗಳ್ ಸಮಿತ್ಪುಷ್ಪಂಗಳಂ ತರ್ಪುದೆಂದೆಮಗೆ ಬೆಸಸಿರ್ದರಲ್ತೆ. ನಡೆ. ಪೋಪಂ.

ಭದ್ರಕಂ—ಎಲೆ ಕಪರ್ದಕ ! ವಟುಕನುಂ ನಾನುಂ ಪೂವಂ ತಿರಿತರ್ಪೆವ್. ಕುಮಾರಕನುಂ ನೀನುಂ ಸಮಿತ್ತುಗಳನಾಯ್ದು ತನ್ನಿಂ.

ಕುಮಾರಕಂ—ಸಮೀಪದೊಳಿರ್ಪ ಪೂವಂ ಕೊಯ್ದು ತರಲ್ಕೆ ನೀಮಿರ್ವರ್ ಪೋಗವೇಳ್ಕುಮೊ ?

ಭದ್ರಕಂ—ಎಲೆ ಕುಮಾರಕ ! ಅಂತಾದೊಡೆ ವಟುಕನಂ ನಾನುಂ ಸಮಿತ್ತುಗಳನೆ ತರ್ಪೆವ್.

ವಟುಕಂ—ಎಲೆ ಭದ್ರಕ ! ಸಮಿತ್ತುಗಳನಾಯ್ದು ತರಲ್ಕೆ ಕಡುಗೆಂಟಿನೊಳಿರ್ಪ ಕಾಡಂ ಪುಗವೇಳ್ಕುಂ. ನಾಂ ನಡೆಯಲಾರೆಂ.

ಭದ್ರಕಂ—(**ಆಳೋಚಂಗೆಯ್ದು-ಸ್ವಗತಂ**) ದಿಟಂ ದಿಟಂ. ಈಯೆರಡುಮೆನಗುಮರಿದಾಗಿರ್ಕುಂ. ಅವರಿಂದಿಂತುಗೆಯ್ವಂ. (ಎಂದು **ಪ್ರಕಾಶಂ**) ಎಲೆ

ಕಪರ್ದಕ ! ನೀಂಪೂಗಳಂಕೊಯ್ದು ತಾರ. ಕುಮಾರಕಂ ಸಮಿತ್ತು ಗಳನಾಯ್ದು ತರ್ಕೆ. ವಟುಕಂ ನಿಷ್ಪ್ರಮಾಣಂಗಳಾದ ಸಮಿತ್ತುಗಳ ನಾಯ್ದು ಬೇರ್ಪಡಿಸುಗೆ. ನಾನುಂ ನೀಂಕೊಂಡುಬಂದ ಕುಸುಮಂಗಳ ನೆವೆಯಿಕ್ಕದೆ ಪುಚ್ಚವಣವೊಡರ್ಚಿ ಕಳಿವೂಗಳಂ ಕಟ್ಟಾಯಸಂ ಬಟ್ಟು ಬೇರಿರಿಸುವೆಂ.

ಕಪರ್ದಕಂ—ಎಲೆ ಸೋಂಬ ! ನಿನ್ನಲಸಿಕೆಯ ನೆಮ್ಮ ಗುರುಗಳ್ಗರಿಪುವೆಂ.

(ಎಂದು ತೆರಳಲುಜ್ಜುಗಿಸ್ಪನಿತರೊಳ್. ಸಮರ್ಥಕಂ ಪೊಕ್ಕು)

ಸಮರ್ಥಕಂ—ಎಲೆ ಕಪರ್ದಕ ! ನಿಲ್ ನಿಲ್.

ಕಪರ್ದಕಂ—**(ಪಿಂದಿರುಗಿ ಸಮರ್ಥಕನಂ ಕಂಡು)** ಎಲೆ ಸಮರ್ಥಕ ! ಈ ಭದ್ರಕನೊಂದು ಕಜ್ಜಮುಮನೆಸಗದೆ ತಳ್ವುತಿರ್ಪಂ ನೋಡ.

ಸಮರ್ಥಕಂ—ಎಲೈ ! ಅದಂತಿರ್ಕೆ ಕುಮಾರಕನುಂ ವಟುಕನುಂ ಸಮಿತ್ಪುಷ್ಪಂಗಳಂ ತರ್ಕೆ. ಈಗಳಾಂ ನಿರ್ಮಲಾನದಿಯೊಳ್ ಅಗ್ರೋದಕಮಂ ಕೊಂಡು ಬರಲ್ಕೆಂದು ಪೋಗಿರ್ದೆಂ. ಅಲ್ಲೊರ್ವಳಬಲೆ ಮುಳುಂಗುತಲುಮೇಳುತಲುಂ ಸುಳಿಗೆ ಸಿಲ್ಕಿ ತೊಳಲುತಿರ್ದಳ್. ನೀಮಿರ್ವರುಂ ಚಚ್ಚರಂ ಬನ್ನಿಂ. ಅವಳಂ ಕರೆಗೀಳ್ದು ಬರ್ದುಂಕಿಪಂ.

ಭದ್ರಕಂ—ಅವಳಾವಳೊ ! ಅವಳಶೀಲಮೆಂತಪ್ಪುದೊ ! ಅವಳ ನಾವೆಂತು ಸೋಂಕುವುದು ?

ಸಮರ್ಥಕಂ—ಎಲೆ ಮೂರ್ಖ ! ಗಳಪದಿರ.

ಕಂ || ಆರಯ್ವೊಡೆ ಸಕಲರ್ಗಂ |
ಧಾರಿಣಿಯೊಳ್ ಕಷ್ಟಕಾಲವೊದವುಗುಮದರಿಂ ||
ಆರಾದೊಡದೇಂ ತೀವಿದ |
ಕಾರುಣ್ಯದಿನವರ್ಗೆ* ಸಾಹ್ಯಮೆಸಗುವುದುಚಿತಂ || ೫೩ ||

ನಡೆನಡೆ ಪೋಪಂ. **(ಎಂದೆಲ್ಲರುಂ ತೆರಳ್ದರ್)**

(ಬಳಿಕೆ ಪ್ರಮಥಾನಂದಂ ಧ್ಯಾನಪರನಾಗಿ ಸಾರ್ತಂದು)

ಪ್ರಮಥಾನಂದಂ—ಚಂ|| ಮಾ|| ಶ್ರಿತಜನತಾ ಸುರದ್ರುಮನೆನಿಪ್ಪ ನೆಗಳ್ತೆಯ ಕಾಲಕಾಲನಂ | ಕ್ಷಿತಿರಥನಾಗಿ ರಕ್ಕಸರನಿಕ್ಕಿದ ಮಸ್ತಕ ಸೋಮ ಸೋಮನಂ || ನುತಮುನಿವೃಂದ ಸಂಸ್ತುತನನೊಪ್ಪುವ ವಿಷ್ಟಪ ನೇತ್ರನೇತ್ರನಂ | ನುತಿಸುವೆನೊಲ್ದು ಮನ್ಮನದೊಳಾಂತ್ರಿದಶಾಲಯ ನಾಥನಾಥನಂ || || ೫೪ ||

(ಎಂದು ಜಪಸರಮಂ ತಿರುಪುತ್ತೆ) ಇದೇಂ ಸಮಿತ್ತುಗಳಂ ತರ್ಪುದರ್ಕೆ ಪೋದ ವಟುಗಳೊರ್ವರುಂ ಬಾರಲಿಲ್ಲಂ.

ಸಮರ್ಥಕಂ—(ಪೊಕ್ಕು ನಮ್ರನಾಗಿ) ನಿರ್ಮಲಾ ನದಿಯೊಳಗೋದಕಮಂ ಕೊಂಡುಬರಲ್ಕೆಂದು ನಾಂ ಪೋಗಿರ್ದಾಗಳೊರ್ವಳ್ ರಾಯುಗುವರಿ ಪೊನಲೊಳೊಂದು ಸುಳಿಗೆ ಸಿಲ್ಕಿ ತೊಳಲುತಿರ್ಪುದಂ ಕಂಡು ಎಮ್ಮಂ ದಿಗರ ಸಾಹ್ಯದಿಂದವಳಂ ಕರೆಗೀಳ್ದುತಂದೆಂ. ಈಗಳೆನಗಾವುದು ಬೆಸನಂ.

ಪ್ರಮಥಾನಂದಂ—(ಯೋಗದೃಷ್ಟಿಯಿಂ ನಿಟ್ಟಿಸಿ) ಆಃ! ಅವಳಲ್ತೆ ಚಂಡವಿಕ್ರಮನ ಕುವರಿಯಾದ ಕನಕಲತೆ, ಪತಿವಿರಹಮಂ ಸೈಸಲ್ಕಾರದೆ ಪೊನಲೊಳ್ ಬಿಳ್ದಳ್. ಒಳ್ಳಿತ್ತು. ಎಲೆ ಸಮರ್ಥಕ! ನಡೆ, ನಾನುಂ ಬಂದಪೆಂ. ಅವಳನೆಮ್ಮಾಶ್ರಮಕೆ ಕರೆದುಯ್ದು ಅವಳನಿಯನೈತರ್ಪನ್ನೆವರ ಮವಳಂ ಜಾಗರೂಕತೆಯಿಂ ಸಲಪುವಂ.

(ಎಂದಿರ್ವರುಂ ತೆರಳ್ದರ್.)

ಇಂತಿದು

→ ಕನಕಲತಾ ದುಃಖದರ್ಶಕಮೆಂಬ ನಾಲ್ಕನೆಯಂಕಂ. ←

ಪಂಚಮಾಂಕಂ.

(ಅನಂತರಂ ಕಂಚುಕಿ ರಂಗವಂ ಸಾರ್ದು)

ಕಂಚುಕಿ— ಕಂ|| ನಡುಗುಗುಮೆನ್ನಯದೇಹಂ |
ನುಡಿವೊಡಮೀ ರಸನೆಯುಬ್ಬ ಸಂಬಡುತಿರ್ಕುಂ ||
ಅಡಿಯಿಡೆ ಜಾರುಗುಮಿಳೆಯೊಳ್ |
ಫಡಫಡ ನಾಂ ಪೊಲಬುಗಿಟ್ಟೆನಡಸಿದಜರೆಯಿಂ || ೫೫ ||

ಎಲೆಲೆ! ಪರಸೇವೆಯೆ ಕಷ್ಟಂ. ಅವರೊಳುಮಿಂತಪ್ಪ ಪಳವೆಯೊಳೇಯರಸಾಲೆಯೊಳತಿಕಷ್ಟಂ. ಬೆಸಸಿದ ಕಜ್ಜದೊಳೊಂದುಮ ನೆಸಗದೆ ತೇನತೇನು ಸುಳಿದಾಡುವ ಸೇವಕರಾಳ್ದರ್ಗೆ ಮೆಚ್ಚುವಣಿಗೆಯ ಭೃತ್ಯರೆನಿಪ್ಪರ್. ಎನ್ನನ್ನರೈಸೆ; ಅಪ್ರಯೋಜಕರೆಂಬ ಅಪಪ್ರಥೆಗೆ ತಾಯ್ನೆಲೆಯೆನಿಪರ್. ಈಗಳಾ ಮಧೂಲಕನು ಮಾಲಿನಿ ತನ್ನ ಮೋಹಪಾಶದೊಳ್ ಸಿಲ್ಕಿಸಿ, ನಮ್ಮ ಚಂಡವಿಕ್ರಮ ಮಹಾರಾಜನಂ ತಂತ್ರದಿಂ ಕೊಲಿಸಿ, ಸ್ವಯಂಪ್ರಭಾದೇವಿಯುಂ ಸೆರೆಗೆಯ್ದಿರ್ಪಳ್. ಕನಕಲತಾಹರಣ ಕಾಲದೊಳ್ ವಿಕ್ರಮಸಿಂಹಂಗೆ ಸಾಹ್ಯಮೆಸಗಿದರೆಂಬ ವ್ಯಾಜದಿಂ ಮಂದಾರಿಕಾ ಸಾಧನಿಕೆಯರುಂ ದೇಶಭ್ರಷ್ಟೆಯರಾದರ್. ಅನುದಿನಮು ಮೆಮ್ಮದೇವಿ ನಿದ್ರಾಹಾರಂಗಳನುಳಿದು ಪಲುಂಬಿ ಪಂಬಲಿಸುತಿರ್ಪಳ್. ಇಂತಪ್ಪ ದುಃಖ ಪರಂಪರೆಯನಭೀಕ್ಷಿಸಿಯುಂ ಕುಂದದ ನನ್ನ ಕಲ್ಲೆರ್ದೆಯ ನಿನ್ನೇವೊರೆವೆಂ.

ಕಂ || ಧರೆಯೊಳ್ ಪಲದಿವಸಂಗಳ್ |
ಪುರುಷಂ ಬರ್ದು*ಕಿರ್ದೊಡಾತನತಿಕಷ್ಟಪರಂ ||

ಪರೆಗಿರ್ಕೆಯೆನಿಪ್ಪನೆನು ।
ತ್ತರಿದರ್ ತಾವೊರೆವ ಮಾತುನಿಕ್ಕುವಮಾಯ್ತೋ ! ॥ ೫೬ ॥

ಈಗಳಾನಿಂತು ಶೋಕಿಸುತಿರ್ಪುದುಚಿತಮಲ್ತು. ಆ ದುಷ್ಟೆ ಎನ್ನೊಳ್ ನಂಬುಗೆಯಿಟ್ಟು ನನ್ನಂ ಸೆರೆಸಾಲೆಯಧಿಕಾರಿಯಂಗೆಯ್ದಳ್. ಬಳ್ಳಿತ್ತು, ಎಮ್ಮ ದೇವಿಯ ನವಳ ಪರಿವಾರಂ ಬೆರಸುಬಿಡುತೆ ಗೊಳಿಸುವೊಡೆ ಸ್ವಾಮಿ ಭಕ್ತನೆಂಬ ಬಿರುದೆನಗೆ ಸಮನಿಕ್ಕುಂ. ಅದರಿಂದಂತೆಗೆಯ್ವೆಂ. (ಎಂದು ತೆರಳ್ದಂ)

(ಬಳಿಕೆ ಮಾಲಿನಿ ಸಾರ್ದು)

ಮಾಲಿನಿ—ಎನ್ನ ಮನೋರಥಮೆಲ್ಲಮುಂ ಸಫಲಮಾದುದು ಗಡ ! ಮಧೂಲಕಂ ಕನಕಲತೆಯಂ ಸೆಳೆತರ್ಪೊಡೆ ಅವಳುಮಂ ಚಂಡವಿಕ್ರಮಾಸುವರ್ತಿನಿಯು ನೆಸಗಿ ನಿಷ್ಕಂಟಕಮಾಗಿ ಪಟ್ಟಮಹಿಷಿಯೆನಿಸುವೆಂ. ಮರುವಸಲನೆನಿತ್ತಲ್ಪನಾದೊಡು ಮವನಂ ಸದೆಯದೆ ಬಿಡಲಾಗದುಗಡ ಅಂತಪ್ಪುದು ;

ಕಂ ॥ ಜ್ವಲನನುಮಂ ರೋಗಮುಮಂ ।
ಬಳೆವಾರಿಪುಗಳುಮನಲ್ಪಮೆಂದೆಣಿಸುತ್ತಂ ॥
ಅಳಿಯಿಸದಿರೆ ಮೊದಲವ್ರುಗಳೆ ।
ಬಳಿಯಂಬಳೆಯುತ್ತೆ ಸದೆಯದಿರ್ಕುಮೆನರನಂ ॥ ೫೭ ॥

ಅದರಿಂದೀಗಳೆ ಸಾರ್ದು ಸ್ವಯಂ ಪ್ರಭೆಯ ನವಳಪರಿವಾರಂಬೆರಸು ಕೊಲ್ವ ಮಹೋತ್ಸವಮಂ ಕಣ್ಣಾರೆ ಕಂಡು ನಲಿದಾಡುವೆಂ.

(ಜವನಿಕೆಯೊಳ್)

ಎಲೆ ಮಧೂಲಕ ಪಕ್ಷಪಾತಿಗಳಾದ ರಾಜದ್ರೋಹಿಗಳಿರಾ ! ಎಮ್ಮ ದೇವಿಯಾದ ಸ್ವಯಂಪ್ರಭೆ ನಿಮ್ಮಂ ಸದೆದು ದೆಸೆವಲಿಯಂ ಕುಡವೇಳ್ಕುಮೆಂದೆಮಗೆ ಬೆಸಸಿರ್ಪಳ್. ಅದರಿಂ ನೀಮಾವೆಡೆಯೊಳಡಗಿರ್ದೊಡುಂ ನಂದನಕಂ ನಿಮ್ಮನೊಸಲಕ್ಕಮನೊರಸದೆ ಮಾಣಂ.

ಮಾಲಿನಿ—(ಬೆಗಡುಗೊಂಡು) ಏಂ! ಸ್ವಯಂಪ್ರಭೆಯುಮಂ ಅವಳ ಮಂತ್ರಿಯಾದ ನಂದನಕನುಮಂ ಸೆರೆಯಿಂ ಬಿಡುತೆಗೊಳಿಸಿದ ದುರಾತ್ಮರಾರ್? ಈಗಳೀನುಡಿ ದಿಟಮಪ್ಪೊಡೆನ್ನ ಗತಿಯೇನಕ್ಕುಮೊ!

(ಎನೆ ರಾಜಭಟರ್ ಪುಗುವರ್)

ಮೊದಲನೆಯಂ—ಎಲೆ ರಕ್ಕಸಿ! ನಡೆನಡೆ. ಎಮ್ಮ ದೇವಿಯರಿದಿರೊಳ್ ನಿನ್ನಂ ಸಜೀವಮೆನೆ ಪೂಳ್ದಪೆಮ್.

ಎರಡನೆಯಂ—ಎಲೆ ಶಾಕಿನಿ! ನರಮಾಂಸ ಭಕ್ಷಕಿ!! ಚಚ್ಚರ ಚಚ್ಚರಂ ನಡೆ. (ಎಂದು ಮಾಲಿನಿಯಂ ಪಿಡಿದೀಳ್ವಪಂ)

ಮಾಲಿನಿ—(ನಿಟ್ಟುಸಿರಿಕ್ಕಿ) ಆಃ! ಪಲಕಾಲದಿಂ ಬಲ್ಯತನಮೊಡರ್ಚಿ ಮಧೂಲಕಂಗೆ ರಾಜ್ಯಾಭಿಷೇಕಮಂ ಗೆಯ್ಸಿ ನಾನವನ ಭೋಗಿನಿಯಾದೆಂ! ಸ್ವಯಂಪ್ರಭೆಯಂ ಸದೆಯಿಪ್ಪನಿತರೊಳೆನಗೀಯೆಡರಡಿಸಿದುದು. ಅಕಟಕಟಾ! ಮಧೂಲಕನೆಲ್ಲಿರ್ದನೊ! ನನ್ನ ಪರಿಣಾಮಮೆಂತಪ್ಪುದೊ

ಮೊದಲನೆಯಂ—ಎಲೆಗೆ! ಮೋಸಗಾರ್ತಿ!! ತೊಳ್ತ್ತನಮಗಳೆ!! ಪೆಸರ್ವಡೆದ ಪಾಣ್ಬೆ!!! ನಡೆನಡೆ. (ಎಂದಿರ್ವರುಂ ಮಾಲಿನಿಯುಂ ಸೆಳೆದುಯ್ವರ್)

(ಅನಂತರಂ ಸ್ವಯಂಪ್ರಭೆ ಕಂಚುಕಿವೆರಸುಬಂದು)

ಸ್ವಯಂಪ್ರಭೆ—ಎಲೆ ಜರಂತಕ! ಸ್ವಾಮಿಭಕ್ತಿಯೊಳ್ ನಿರತರೆನಿಸಿದ ನಿನ್ನನ್ನರ್ ನೆಲನೊಳ್ ದುರ್ಲಭರ್ಕೈಸೆ;

ಮ॥ ವಿ॥ ನೆಲನಲ್ಲಾಳ್ದನ ನೋಲಗಿಪ್ಪರಮಮಾ ದ್ರವ್ಯಾಶೆಯಿಂದಂ ಕೆಲರ್ । ಕೆಲರೊಲ್ಪಾಟಿಸುತಂ ಪ್ರತಿಷ್ಠೆಯ ನಳುಂಬಂ ಸೇವಿಪರ್ ನಾಥನಂ ॥ ಕೆಲರಾದಂ ನಿಜನಾಥನಾಕ್ಷ್ಣಯದೊಳುಂ ಪೂರ್ವೋಪಕಾರಜ್ಞತಾ । ವಿಲಸನ್ಮಾನಸರೊಲ್ದು ಸೇವಿಸುವರೈ ನಿಮ್ಮನ್ನರಾಳ್ದರ್ಕಳಂ ॥ ॥ ೫೮ ॥

ಕಂಚುಕಿ—ಒಡತಿ! ಇದೇನಿಂತು ನುಡಿದಪೆ? ಎನ್ನ ಕರ್ತವ್ಯಮ ನಾನೆಸಗಿದೆನಲ್ಲದೆ ಪೆರತೇನುಮನೆಸಗಲಿಲ್ಲಂ.

ಸ್ವಯಂಪ್ರಭೆ—ಎಲೈ! ಪುತ್ರೀವಿಹೀನೆಯಾಗಿಯುಂ ಪತಿವಿರಹಿಣಿಯಾಗಿಯುಮಿರ್ಪೆನಗೀ ರಾಜ್ಯದಿಂ ಫಲಮೇಂ?

ಕಂಚುಕಿ—ಎಲೌ ಒಡತಿ! ರಾಯಗುವರಿಯಾದ ಕನಕಲತೆ ವಿಮಲನಗರದರಸನಪ್ಪ ವಿಕ್ರಮಸಿಂಹನಂ ವರಯಿಸಿ ಅವನಂತವುರದೊಳ್ ಇರ್ಪಳ್. ಇದರ್ಕಿನಿತ್ತೇಕೆ ಚಿಂತಿಸುತಿರ್ಪೆ?

ಸ್ವಯಂಪ್ರಭೆ.—ಎಲೈ! ಪತಿಸಹಿತೆಯಾದ ಕನಕಲತೆಯನಾಂ ನಿರುಕಿಸಲ್ ಬಯಸುವೆಂ.

ಕಂಚುಕಿ.—ಒಡತಿಯಭಿಮತಮಿರ್ದಂತೆ ಅಕ್ಕೆ.

ಸ್ವಯಂಪ್ರಭೆ.—ಯಥೋಚಿತವಾದ ಪಡೆಯನೊಡಂಗೊಂಡು ಪಡೆವಳ್ಳನಪ್ಪ ಪಲ್ಲವಕನುಂ, ಮಂತ್ರಿಯಾದ ನಂದನಕನುಂ ಪುರಮಂ ರಕ್ಷಿಸುತಿರ್ಕೆ. ನೀನಿದನವರ್ಗೆ ಬೆಸಸಿ ಚಚ್ಚರಂ ಬಾರ. ವಿಮಲನಗರಕೆ ಪೋಪಂ.

ಕಂಚುಕಿ.—ಅಂತೆ ಅಕ್ಕೆ. (ಎಂದು ತೆರಳ್ದಂ)

ಸ್ವಯಂಪ್ರಭೆ.— ಈಗಳಾನುಂ ಪೋಗಿ ಕನಕಲತೆಗೆ ಬಟ್ಟಂಬಳಿಯನನುಗೆಯ್ದಪೆಂ. (ಎಂದು ತೆರಳ್ದಳ್)

(ಬಳಿಕ್ಕೆ ಮಂದಾರಿಕಾ ಸಂಧನಿಕೆಯರ್ವೆರಸುರಾಯನುಂ ವಿದೂಷಕನು ಮೇಳ್ತಂದರ್)

ರಾಯಂ.—ಆಃ! ನಿರ್ಭಾಗ್ಯನಾದ ನಾಂ ಕನಕಲತೆಯನಿನ್ನೆಲ್ಲಿ ಅರಸುವೆಂ? ಅಕಟಾ, ಎಲೌ! ವನದೇವತೆಯರಿರಾ! ಎನ್ನಮನದನ್ನೆಯಾದ ಕನಕಲತೆಯಂ ನೀಮೇನಾನುಂ ಕಂಡಿರೇಂ. (ಎಂದು ಕಿವಿಗೊಟ್ಟಾಲಿಸಿ) ನೀಮರಿಯಿರಲ್ತೆ. ಹಾ! ಪ್ರಿಯೇ! ಕನಕಲತೆ! ಎನ್ನನುಳಿದು ನೀನದೆಲ್ಲಿರ್ದಪೆ? (ಎಂದು ಕಣ್ಬನಿದುಂಬಿದಂ)

ಸಂಧನಿಕೆ.—ಎಲೆ ಮಾರಾಯ! ಸಕಲಲೋಕಶೋಕಹಾರಕನಾದ ನೀನಿಂತು ಶೋಕಿಸುವುದುಚಿತಮಲ್ತು ಸ್ಥೈರಿಸಸ್ಥೈರಿಸ.

ವಿದೂಷಕಂ.—ಎಲೆ ಕೆಳೆಯಾ! ಚೆನ್ನಾದುದು ಚೆನ್ನಾದುದು.

ಕಂ || ಪುರುಷಂಗಾಪವರ್ಗತದಂ |
ತಿರಲಡಸುಗುಮೆಡರ್ಗಳ*ಕಟ ವಿಧಿವಕ್ರತೆಯಿಂ ||
ತರದಿಂದವರೊಯ್ಯನೆಪೊಯ್ |
ಗರೆಗುಂ ತದ್ವಿಧಿ ವಿಪಾಕದಿಂದಂ ಪುಲ್ಲೊಲ್ || ೫೯ ||

ಅದರಿಂ ನಡೆ, ಇತ್ತಲೊಂದೆಲೆವನೆ ಮೆರೆದಿರ್ಪುದು ಅದಂ ಸಾರ್ದು ಅಲ್ಲಿರ್ಪ ಮುನಿವರ್ಯರ ದರ್ಶನಮಂ ಕೈಗೊಳ್ವಂ.

ರಾಮಂ—(ಬಲಗಣ್ಣಲುಗಿದಂತಭಿನಯಿಸಿ)

ಕಂ || ಕಾರಣಮಿಲ್ಲದೆಬಲಗ |
ಣ್ಣೋರಂತಿರೆ ಪಾರುತಿರ್ಕುಮೆನ್ನೆದೆ*ಯೊಳ್ ಪೊಸತ್ ||
ದೋರಿರ್ಕುಂ ಸಂತಸಮುಂ |
ಮಾರಾರಿಯ ಕೃಪೆಯಿನೇಂ ಶುಭಂ ಸಮನಿಸುವೆಡೆಯೋ || ೬೦ ||

ಬಳ್ಳಿತ್ತು, ಋಷ್ಯಾಶ್ರಮಮಂ ಪೊಕ್ಕು ಅನಂತರ ಸ್ವಾಪರಕೆಯಾತಿತಿಯೊಳ್ ತಳೆದಪಂ. (ಎಂದೆಲ್ಲರುಂ ತೆರಳ್ದರ್)

(ಬಳಿಕ್ಕೆ ಸಮರ್ಥಕನೇಳ್ತಂದು)

ಸಮರ್ಥಕಂ—ಋಜನಾಣತಿಯಂತೆ ಹೋಮದ್ರವ್ಯಂಗಳನನುಗೆಯ್ದಪೆಂ.

(ಎಂದಂತಗೆಯ್ವಂ)

(ಅನಂತರಂ ಪ್ರಮಥಾನಂದಂ ಪ್ರವೇಶಿಸಿ)

ಪ್ರಮಥಾನಂದಂ—ಎಲೆ ಸಮರ್ಥಕ! ಎಲ್ಲಮುಮಂ ಸಜ್ಜುಗೊಳಿಸಿದೆಯೇಂ?

ಸಮರ್ಥಕಂ—ಆಂ ಎಲ್ಲಮುಮಂ ಸಜ್ಜುಗೊಳಿಸಿರ್ಪೆಂ. (ಎಂದು ಪೀಠಮಂ ತೋರಿ) ದೇವರೀ ಪವಿತ್ರಾಸ್ತರಣಮೊಳ್ ಮಂಡಿಸುದು.

ಪ್ರಮಥಾನಂದಂ—(ಆಸ್ತರಣದೊಳ್ ಕುಳ್ಳಿರ್ದು ಅಗ್ನಿಯಂಹುತಮೊಡರ್ಚಿ)

ಕಂ || ಮುನಿಗಳ್ ಬೇಳ್ಪಹವ್ಯಮ |
ನನುವಿಂ ಕೊಂಡುಯ್ದು ವಾಸವಾದ್ಯಗಿರ್ವಾ ||

ಘನಮಹಿಮ ಹವ್ಯವಾಹನ |
ಮನವೊಲ್ದು ನೀವಹವ್ಯಮಂ ಕೈಗೊಳ್ಳೈ. ‖ ೬೧ ‖

(ಎಂದು ಪೇಳ್ದಂ—ಕಪರ್ದಕಂ ಸಾರ್ತಂದು)

ಕಪರ್ದಕಃ—ಎಲೆಕಲ್ಲಾಯ್ತು ! ಇರ್ವರಿಯರಾಳ್ದನೊರ್ವನಂ ನಿನ್ನ ದರ್ಶನಾಕಾಂಕ್ಷಿಯಾಗಿ ಬಂದಿರ್ಪಂ.

ಪ್ರಮಥಾನಂದಂ—ಚಕ್ಕನವನಂ ಕರೆತಾರ.

ಕಪರ್ದಕಂ— ಅಣತಿ. (ಎಂದು ತೆರಳ್ದು ಮತ್ತಂ ಸಪರಿವಾರನಾದ ವಿಕ್ರಮಸಿಂಹಂ ಬರಸು ಸಾರ್ತಂದು) ಎಲೆರಾಯ ! ಇತ್ತಲಿತ್ತಲ್.

ರಾಜಂ—ಪೂಜ್ಯರಡಿಗಳ್ಗೆರಗಿದಪೆಂ. (ಎಂದು ಮಣಿದಂ)

ಪ್ರಮಥಾನಂದಂ—ವತ್ಸ ! ನಿನ್ನ ಮನೋರಥಂ ಕೈಸಾರ್ಗುಂ.

ವಿದೂಷಕಂ— ನಿರ್ಭಾಗ್ಯಯ ಮಗುವಾದ ನಾಂ ವಂದಿಸುವೆಂ.

ಪ್ರಮಥಾನಂದಂ—ಚಿರಜೀವಿಯೆನಿಸಿ ಬರ್ದುಕು.

ವಿದೂಷಕಃ—ಎಲೆ ಜತಿಯರಾಳ್ದ ! ಪ್ರಿಯಜನವಿಯೋಗದಿಂ ತೊಳಲುತಿರ್ಪಿನ್ನ ಕೆಳೆಯಂ ಬೆರಸು ನಟ್ಟಡವಿಯೊಳೀಗಳುಂ ನಿರಾಹಾರಂಗಳಸುಳಿಮ ಕಟ್ಟುಬೆಗಮನೊಂದಿರ್ಪನಾಂ ಚಿರಜೀವಿಯೆನಿಪ್ಪುದೆಂತು.

ಪ್ರಮಥಾನಂದಂ—ವತ್ಸ, ಎನ್ನ ನುಡಿ ಪುಸಿಯಲ್ಲು.

ವಿದೂಷಕಂ—ಹಾ ! ಈಗಳರಿವೆಂ. ಚಿರಜೀವಿಯೆಂದೊಡೆ ಕಾಗೆಗಡ. ಅನುಮದರಂತಿರವೇಳ್ಕುಂ.

ಪ್ರಮಥಾನಂದಂ—ವತ್ಸ ! ಎನ್ನ ತಪೋಮಹಿಮೆಯಿಂ ನಿಮ್ಮ ವೃತ್ತಾಂತಮನೆಲ್ಲಮನುಸರಿದಿರ್ಪೆಂ. ಕನಕಲತೆ ನಮ್ಮಾಶ್ರಮದೊಳಗಿರ್ಪಳ್. (ಎಂದು ಸಮರ್ಥಕನತ್ತಲ್ ತಿರುಗಿ) ಎಲೆ ಸಮರ್ಥಕ ! ಕನಕಲತೆಯಂ ಕರೆತಾರ.

ಸಮರ್ಥಕಂ—ಅಣತಿ. (ಎಂದು ಪೋಗಿ ಮತ್ತಂ ಕನಕಲತೆ ವೆರಸು ಸಾರ್ತಂದಂ.)

ಪ್ರಮಥಾನಂದಂ—(ಕನಕಲತೆಯಂ ಕಂಡು) ವತ್ಸೇ! ಈತನಂ ಬಲ್ಲೆಯೇಂ?

(ಎಂದು ರಾಯನಂ ತೋರಿದಂ)

ಕನಕಲತೆ—(ರಾಯನಂ ಕಂಡು ಸಂತಸಗೊಂಡು) ಎಲೆ ಅಜ್ಜ! ನಿನ್ನಾಶೀರ್ವಾದಮೆ ಮೆಯ್ವಡೆದು ಕಣ್ಗೊಳಿಸುತ್ತಿರ್ಪುದಲ್ತೆ.

ರಾಯಂ—(ಕನಕಲತೆಯಂ ಕಂಡು)

ಕಂ || ಮಿಸುಮಿಸುಪೀಕಾಂತೆಯ ಮೊಗ |
ಸಸಿಯುದಯಿಸಿ ನನ್ನ ಮನದೆ ಪರ್ಬುತ್ತಿರ್ದಾ ||
ವ್ಯಸನಾಂಧಕಾರಮಂ ಭಂ |
ಜಿಸಿದತ್ತೇನೊರೆವೆ ನಿನ್ನಭಾಗ್ಯೋದಯಮಂ || ೬೦ ||

ಸಾಧನಿಕೆ—(ಕನಕಲತೆಯಂ ಕಂಡು) ಎಲೆ ಸಖೀ! ಎಮ್ಮನಾಗಳೆ ಮರೆವೆಯೇಂ?

ಕನಕಲತೆ—(ಮಂದಾರಿಕಾ ಸಾಧನಿಕೆಯರ ನಿರ್ವರುಮಂ ಸಂಭ್ರಮದಿಂ ತಳ್ಕೈಸಿದಳ್)

ಕನಕಲತೆ—ಎಲೆ ಕೆಳದಿ! ಎಮ್ಮ ಮಾತಾಪಿತೃಗಳ್ ಕುಶಲಿಗಳೇಂ?

ಮಂದಾರಿಕೆ—ಎಲೆ ರಾಯಗುವರಿ! ದುರುಳನಾದ ಮಧೂಲಕಂ ಮಾಲಿನಿಯ ಮೋಹಪಾಶದೊಳ್ ಸಿಲ್ಕಿ ಅವಳ್ ಬೆಸಸಿದಂತೆ ಎಮ್ಮ ಮಾರಾಯನಂ ಕೊಂದು ದೇವಿಯಂ ಬಂದಿವಿಡಿದಿರ್ಪಂ.

ಕನಕಲತೆ—ಹಾ! ಜನಕಾ!! ಬಾಲಿಕಾಜನವತ್ಸಲಾ!!! ನೀನೆಂತಾದ್ಯೆ? (ಎಂದು ಮೂರ್ಛೆಗೆಸಂದು ಮೆಲ್ಲನೆಳ್ಚರ್ತಳ್)

ಪ್ರಮಥಾನಂದಂ—ವತ್ಸೇ! ಸ್ಥೈರಿಸುಸ್ಥೈರಿಸು. ನಿನ್ನಿನಿಯ ನಿದಿರೊಳಿರ್ದುಂ ಪ್ರಥಮಸಮಾಗಮಾವಸರದೊಳಿಂತು ಶೋಕಿಪುದು ಯುಕ್ತಮಲ್ತು. (ಎಂದು ನಿಟ್ಟುಸಿ) ಮೇಣ್. ನಿನ್ನ ಜನನಿಯೇಳ್ತರುತಿರ್ಪಳ್ ಅವಳೆ ನಿನ್ನಂ ಸಂತವಿಡುವಳ್.

(ಬಳಿಕ್ಕೆ ಸ್ವಯಂಪ್ರಭೆವೆರಸು ಕಂಚುಕಿ ಸಾರ್ತಂದು)

ಕಂಚುಕಿ—(ಕನಕಲತೆಯಂ ಕಂಡು) ಬಡತಿ! ಇದೇಂ! ಕನಕಲತಾ ವಿಕ್ರಮಸಿಂಹರಿಲ್ಲಿಯೆಯಿರ್ಪರ್.

ಸ್ವಯಂಪ್ರಭೆ—(ಸಂಭ್ರಮದಿಂ ಕನಲತೆಯುಮನಪ್ಪಿ ಲಜ್ಜಿಗೆಯ್ವಳ್)

ಕಂಚುಕಿ—ಆಃ! ಇವರಳ್ಕರಂ ವರ್ಣಿಸಲೆನ್ನಳವಲ್ತು.

ಪ್ರಮಥಾನಂದಂ—ವತ್ಸ! ವಿಕ್ರಮಸಿಂಹ! ನೀನೀ ಕನಕಲತೆಯುಂ ಶಾಸ್ತ್ರೋಕ್ತ ವಿಧಿಯಿಂ ಕೈಪಿಡಿಯಲಿಲ್ಲಂ, ಅವರಿಂ ನಣೆ. ಸರ್ವಮಂಗಳಾಲಯುಮಂ ಸೌದರ್ಯ ಕನಕಲತೆಯುಂ ಪರಿಗ್ರಹಿಸು.

ರಾಯಂ—ಆಣತಿ.

ಪ್ರಮಥಾನಂದಂ—ಎಲೌ ಸ್ವಯಂಪ್ರಭೆ!

ಕಂ || ತನುಜಾತೆಪುಟ್ಟಿದಾಗಳ್ |
ಜನನಿಗೆ ಸಮನಿಸುವನಲ್ಮೆನಲ್ಮೆಯುದಲ್ಲಂ ||
ಅನುರೂಪವರಂಗವಳಂ |
ಮನವೊಲ್ದಿತ್ತಾಗಳಲ್ತೆ ನಲ್ಮೆಯುದೂಗಗುಂ || ೬೩ ||

ಅವರಿಂದೀಯಣುಗಿಯ ಪರಿಣಯೋತ್ಸವಮಂ ನಿರುಕಿಸಿ ಸಂತಸಮನನುಭವಿಸುವಂ ಬಾರ.

ಸ್ವಯಂಪ್ರಭೆ—ಪೂಜ್ಯರಾಣತಿಯಪ್ಪಂತೆ ಅಕ್ಕೆ. (ಎಂದೆಲ್ಲರುಂ ತೆರಳ್ವರ್)

(ಅನಂತರಂ ಮಯೂರಕ ಲುಬ್ಧಕರ್ ಮಧೂಲಕನಂ ಸೆಳೆತರ್ಪರ)

ಮಧೂಲಕಂ—ಅಃ, ಎನಿತ್ತು ಸಾಪನನೊಪಜೀದೆಂ. ಪಿಗೆಯೊದ್ದುಮೆನ್ನ ಬಯ್ಕೆ ಕೈಸಾರಲಿಲ್ಲಂ. ಚಿಃಚಿಃ ಪೆಂಡಿರ ಮಾತನಾಲಿಸಿ ಮುಂಬರಿವರ್ಗೆಲ್ಲರ್ಗಮಿಂತಪ್ಪ ಗತಿಯೆ ಸಮನಿಕ್ಕುಂ.

ಕಂ || ಅಪಹಾಚಿಂತಿಸದಿನಿಸುಂ |
ಮಹಿಳೆಯ ರಾಣತಿಯ ನೆಸಗಲೆಳಸುವ ಮನುಜಂ ||
ಇಹದೊಳಗಯಶಮನೊಂಮತೆ |
ಬಹುವಿಧಕಷ್ಟಕ್ಕೆ ನೆಲೆಯೆನಿಪ್ಪಂ ಪರದೊಳ್ || ೬೪ ||

ಮಯೂರಕಂ—ಎಲೆ ಕೃತಘ್ನ! ಅದೇನಾಳೋಚನಮನೆಸಗುತಿರ್ಪೆ? ನಡೆನಡೆ.

ವಿಕ್ರಮಸಿಂಹನ ಕೂರಸಿಯ ಸವಿಯಂ ನೋಳ್ಪೆ (ಎಂದು ನೋಡಿದಂ)

ಮಧೂಲಕಂ—(ನಮ್ರತೆಯಿಂ) ಎಲೈ! ಮಿತ್ರರಿರಾ! ಆನಾವಗ್ಗಲಿನಿಯ ಮಾತನಾಲಿಸಿ ವಿಕ್ರಮಸಿಂಹಂಗಂ ನಿಮಗಂ ಪಲವೆಡರ್ಗಳಂ ಸಾರ್ಚಿದೆಂ. ನೀಮೀಗಳೆನ್ನೊಳೊಸೆದು ನಿಮ್ಮ ಬಳ್ಗದಿಂದೆನ್ನ ಸಿಲ್ಲಿಯೆ ಇರಿದುಕೊಳ್ಳಿಂ. ವಿಕ್ರಮಸಿಂಹ ಕನಕಲತೆಯರ್ಗೆ ನೆನ್ನಮೊಗಮಂ ತೋರುವುದರ್ಕೆ ನಾಣ್ಚುವೆಂ.

ಲುಬ್ಧಕಂ—ಎಲೆ ಮೋಸಕಾರ! ಈಗಳುಮೆಮ್ಮಂ ಮರುಳ್ಗೊಳಿಸಲೆಳಸಿರ್ಪೆಗಡ!

(ಜವನಿಕೆಯೊಳ್)

ಕಂ ॥ ಮಗಮಗಿಸಿಪೋಮಗಂಧಂ ।
ಬಗೆಗೊಳಿಪುಣ್ಯಾಹ ಘೋಷಮುಂ ನಾಲ್ದೆಸೆಯಂ ॥
ಮಿಗೆ ತೀವಿಕಿವುಡುವಡೆಯಿಸೆ ।
ಸೊಗಯಿಕ್ಕುಂ ನಿನ್ನ ಮದುವೆ ನೃಪಕುಲತಿಲಕಾ ॥ ೬೪ ॥

ಮಧುಸೂರಕಂ—ಎಲೆ ಲುಬ್ಧಕ! ಇದೇಸೀಯೆಡೆಯೊಳ್ ಮಂಗಳವರೆಮುಸಂಗೊಂಡು ಮೊರೆವುದು? (ಎಂದು ಸುತ್ತಲುಂ ನಿಟ್ಟಿಸಿ) ಬಳ್ಳಿತ್ತು, ಇತ್ತಲೈತರುತಿರ್ಪಿನೀರ್ವರಂ ಕೇಳಿ ತಿಳಿವಂ.

(ಬೌಕ್ಕಿ ದೊಂದುಳಿಗೊಂಡ ಪೌರ್ವರ್ ಪುಗುವರ್)

ಸಿದ್ಧಾಂತಿಗಂ—ಎಲೆ ಜೋಯಿಸಿಗ! ವಧೂವರರ್ಗೆ ಪರಸ್ಪರವಾನುರೂಪ್ಯಂ ಮೊರೆದಿರ್ಕುಂ. ವಧುವಾದೊಡೆ ತುರುಮಿಂಡಿಯಾಗಿರ್ಪಳ್.

ಶಾಸ್ತ್ರಗಂ—ಇಂತು ಗೆಯ್ಯುವ ಕ್ಷತ್ರಿಯರ ಪದ್ಧತಿಗಡ. ಈ ಪದ್ಧತಿಯಿಂ ದೋಷಮಾಣಮಿಲ್ಲಂ. ಆಣಾಗಿ ತನಗನುರೂಪ ನಪ್ಪವರನಂ ವರಯಿಸುವಳ್. ಅದರಿಂ ದಾಂಪತ್ಯಾನುಕೂಲ್ಯಂ ಸರ್ವೋತ್ಕೃಷ್ಟಮಾಗಿರ್ಪುದು. ಎಮ್ಮೊಂದಿಗರ್ಕೆಸೆ; ಪಾಲ್ಬಸುಳೆಗಳ್ಗೆ ತಮ್ಮ ಸಂತೋ

ಪಾರ್ಥಂ ತೂಗುಂದೊಟ್ಟಿಲೊಳ್ಕೈರದಾಳಿಯುಂ ಕಟ್ಟುವರ್. ಕಾಲ ವಶದಿಂದೊತಾನು ಮತ್ತ್ಯಾಹಿತಂ ಸಮನಿಪ್ಪೊಡೆ ತಮ್ಮ ಜೀವಿತಾಂತ ಮು ಮಳಲ್ಕೆಗಡಲೊಳಳ್ದು ತೊಳಲ್ವರ್. ಇಂತಪ್ಪ ವಿವಾಹಂಗಳ ನೀಂಪುರೋಹಿತರ್ ಪಲವನೊರ್ಚಿರ್ಪರಲ್ತೆ.

ಪುರೋಹಿತಂ—ಎಲೆ ಶಾಸ್ತ್ರಿಗ! ಆನೊಡರ್ಚಿದ ವಿವಾಹಂಗಳಂ ಪಳಿವೆಗಡ. ಆ ವಿವಾಹಮಂತ್ರಂಗಳೊಳೇ ನಾನು ಮೂಣಿಯಮುಂಟೇಂ ?

ಶಾಸ್ತ್ರಿಗಂ—ಅಂತಪ್ಪ ನ್ಯೂನತೆಯೇನುಮಿಲ್ಲಂ. ಪೆರತೇನೆಂದೊಡೆ ಸಂದ ರ್ಭಾನುಗುಣ್ಯಮಾಗಿ ನಮ್ಮ ಜೋಯಿಸಿಗಂ ಪುಸಿಯುಸುಸಿರ್ಪಂತೆ ಒರೊಂದೆಡೆಯೊಳ್ ನೀನುಂ ಪುಸಿದೆ.

ಜೋಯಿಸಿಗಂ—(ಕನಲ್ದು) ಎಲೆ ಶಾಸ್ತ್ರಿಗ! ನಾನೆನಿತ್ತು ಪುಸಿವೊಡಂ ನೀಂ ಕಬ್ಬಮಂ ಗದಿಸುವವಸರದೊಳ್ ಪುಸಿವಪುಸಿಗೆ ಸಾಟಿಯೆನಿಸದು.

ಶಾಸ್ತ್ರಿಗಂ— ಎಲೆಲೆ ! ಜೋಯಿಸಿಗ ! ಎನ್ನ ಕಾವ್ಯಮನವಲೋಕಿಸಿ ಕರುಂ ಬುವರೊಳ್ ನೀನುಮೊರ್ವನೇಂ ?

ಜೋಯಿಸಿಗಂ—ನಿನ್ನ ಕಬ್ಬಮಂ ಕಂಡಳ್ಕಜಂಬಡುವ ತೊಳ್ತನಮಗುವದಾರ್. ನಿನ್ನಕಬ್ಬಮೇ ನಾನುಮುಕ್ಕೆಮು. ಅದರಿನೆನಗೇಂ ಫಲಂ.

ಸಿದ್ಧಾಂತಿಗಂ—ಎಲೆ ಶಾಸ್ತ್ರಿಗ! ನಿನ್ನ ಕೃತಿಯನೋದಿ ಕರುಬುವರಾರ್ ? ನುಡಿಯು.

ಶಾಸ್ತ್ರಿಗಂ—ಅವರು ಮೆಮ್ಮೊಂದಿಗರೆ.

ಪುರೋಹಿತಂ—ಅವರ್ ಕರುಂಬುವುದರಿಂ ನಿನಗೂಣಿಯುಮೇಂ, ನಡೆನಡೆ. ಅವ ರೊಳಳ್ಕಜಮೆಂಬಗಿನಿಯುಸಿಶ್ಮಂ ಪಜ್ಜಳಿಕ್ಕೆ. (ಎಂದೆಲ್ಲರುಮ ಡಿಯಿ ಷುವರ್)

ಮಯೂರಕಂ—(ಅಂಜಲಿಬದ್ಧನಾಗಿ) ಎಲೆ ಭೂದೇವರ್ಕಳಿರಾ ! ಈಗಳಾರೊ ಳಾರ್ ಪಸೆನಿಂದರ್ ?

ಶಾಸ್ತ್ರಿಗಂ—ಚಂಡವಿಕ್ರಮನಣುಗಿಯಾದ ಕನಕಲತೆಯೊಳ್ ವಿಕ್ರಮಸಿಂಹ ನೆಂಬ ರಸೆಯುರಸಂಘಸೆನಿಂದಂ. (ಎಂದೆಲ್ಲರುಂ ತೆರಳ್ದರ್)

ಲುಬ್ಧಕಂ— ಎಲೆ ಮಯೂರಕ! ಅಂತಾದೊಡೆ ನಾವುಮೀ ಪರ್ಣಶಾಲೆಗೆ ಪೋಪಂ ನಡೆ.

ಮಯೂರಕಂ— ಅಂತೆ ಅಕ್ಕೆ ನಡೆ.

(ಇರ್ವರುಂ ಮಧೂಲಕನಂ ಸೆಳೆದುಯ್ವರ್)

(ಬಳಿಕ್ಕೆ ಕಂಚುಕಿ ವಿದೂಷಕರ್ವೆರಸು ಕನಕಲತಾ ವಿಕ್ರಮಸಿಂಹರುಂ ಮಂದಾರಿಕಾ ಸಾಧಸಿಕೆಯರ್ವೆರಸು ಸ್ವಯಂಪ್ರಭೆಯುಂ ಪ್ರಮಥಾನಂದನುಂ ಪುಗುವರ್)

ರಾಯಂ— ಎಲೆ ಮೈತ್ರೇಯ! ಇದೇಂ ಚಿಂತಿಸುತಿರ್ಪೆ ?

ವಿದೂಷಕಂ— ಪಸಿವಿಂ ಬಸವಳಿದೆನಗೆ ಬೇರೆ ಚಿಂತೆಯೇಂ ?

ರಾಯಂ— ಈಗಳೆ ನೀಂ ಭೋಜನದಿಂ ತಣಿವೆನೆಂದು ನುಡಿದೆಗಡ!

ವಿದೂಷಕಂ— ಅದೆಂತಪ್ಪ ಭೋಜನಂ ! ಮುಪ್ಪಾಗಲ್ವರಮುಸಿರಿಕ್ಕುವುದರ್ಕವಕಾಶಮಿಲ್ಲದಿರ್ಪನಂ ಚಕ್ಕುಲಿಯುಮಂ ಕಡುಬುಗಳುಮಂ ಮೋದಲೆಳಸುವೆಂ.

ರಾಯಂ— ಮತ್ತೇಂ ?

ವಿದೂಷಕಂ— ನಿನ್ನಂತಿರೆ ನಾನುಮೊರ್ವಳೊಳ್ ಮದುವೆನಿಲವೇಳ್ಕುಂ.

ರಾಯಂ— ನೀಂ ಮೊದಲೆ ಮದುವೆನಿಂದಿರ್ಪೆಯಲ್ತೆ.

ವಿದೂಷಕಂ— ಅಂ, ಅವಳುಮಿರ್ಕೆ. ಪೆರಳೊರ್ವಳೆನ್ನಂ ಗಾಡಿಕಾರ್ತಿ ಕಾಡುತಿರ್ಪಳ್. ಅವಳೆನ್ನನೆ ಕೆಯ್ವಿಡಿಯವೇಳ್ಕುಮೆಂದೆಳಸಿರ್ಪಳ್.

ರಾಯಂ— ಕೆಳೆಯಾ! ಅವಳದಾವಳ್ ?

ವಿದೂಷಕಂ— ಸಿದ್ಧಾಂಗನೆ.

ರಾಯಂ— (ನಕ್ಕು) ಅಂತೆ ಅಕ್ಕೆ.

ವಿದೂಷಕಂ— (ಕುಣಿದಾಡುತೆ ಪವ್ವಡಿಸುವಂ)

(ಮಯೂರಕ ಲುಬ್ಧಕರ್ ಮಧೂಲಕನಂ ಪಿಡಿತರ್ಪರ್)

ಮಯೂರಕಂ—(ವಿಕ್ರಮಸಿಂಹಂಗೆರಗಿ) ಎಲೆ ಮಹಾರಾಯ ! ಇದೊ ನಿನ್ನ ಪಗೆಯಂ ಸೆಳೆತಂದಿರ್ಪೆವು: ಇವನಂ ಮೊದಲ್ ಸದೆವಡಿಯ. (ಎಂದು ಮಧೂಲಕನಂ ವಿಕ್ರಮಸಿಂಹನಡಿಯೊಳ್ ಕೆಡಪಿದಂ; ಮಾಂಗಿರ್ದ ವಿದೂಷಕಂಗೆ ಮಧೂಲಕನಡಿ ಸೋಂಕಿದುದು.)

ವಿದೂಷಕಂ—(ಕನಲ್ದು ಮೇಲೆಳ್ದು) ಎಲೆ ಕೇಡಾಳಿಯಾದ ಮಧೂಲಕ ಹತಕ ! ಮಹಾ ಬ್ರಾಹ್ಮಣನಾದ ನಾಪೆಲ್ಲಿ ಪವ್ವಡಿಸಿರ್ಪುದನರಿದುಮೆನ್ನನೊದೆವೆಯೇಂ ? (ಎಂದು ದಂಡಕಾಷ್ಠಮಂ ಮೇಲೆತ್ತುತಂ)

ಮಧೂಲಕಂ—ಎಲೆ ಕೃಪಾಳುವಾದ ವಿಕ್ರಮಸಿಂಹ ! ಸ್ತ್ರೀಯ ಮಾತನಾಲಿಸಿ ಅನೇಕ ಪಾಪಕೃತ್ಯಂಗಳಂ ಗೆಯ್ದು ರೌರವ ನರಕಕ್ಕೆ ಪಕ್ಕಾಗಿರ್ಪ ನನ್ನಂ ಮೊದಲ್ ಕೊಂದು ಬಳಿಯಂ ನಿನ್ನೊಲವೆಂತಂತುಗೆಯ್ವುದು.

ಸ್ವಯಂಪ್ರಭೆ—(ಅಳುತೆ) ಎಲೆ ಮಹಾರಾಯ ! ಎನ್ನ ತಮ್ಮನಾದೀಮಧೂಲಕನಂ ದಯೆಗೆಯ್ದು ಸಲಪುಸಲಪು.

ಲುಬ್ಧಕಂ—ಎಲೆ ಮಹಾರಾಯ ! ನೀನೇಕೆ ಚಿಂತಿಸುತಿರ್ಪೆ ? ಇಂತಪ್ಪರಂ ಶಿಕ್ಷಿಪ್ಪುದೆ ನಿನ್ನ ಧರ್ಮಂಗಡ.

ಮಧೂಲಕಂ—ಎಲೆ ರಾಯ ! ತಳ್ವುವೊಡೇನುಂ ಫಲಮಿಲ್ಲಂ. ಭೂಭಾರಮನಿಳಿಪಲಾರ್ತ ನೀನೆ ಭೂಭಾರಮಾದೆನ್ನೊಳ್ ದಯೆಗೆಯ್ವುದು ಧರ್ಮಮಲ್ತು. ನಾನೆಸಗಿರ್ಪ ಪಾಪಕೃತ್ಯಂಗಳ್ಗೀ ಜನ್ಮಮಂ ನೀಗುವುದನುಳಿದು ಬೇರೆಯಾದ ಪ್ರಾಯಶ್ಚಿತ್ತಮಿಲ್ಲಂ.

ಸ್ವಯಂಪ್ರಭೆ—(ಅಳುತೆ) ಎಲೆ ಮಹಾರಾಯ ! ಮೊದಲೆನ್ನಂ ಕೊಂದು ಬಳಿಯಮಿವನನೇನಾನುಮೆಸಗು.

ಪ್ರಮಥಾನಂದಂ—ವತ್ಸ ! ಈ ಮಧೂಲಕಂ ತನ್ನ ಪಾಪಕೃತ್ಯಂಗಳಂ ನೆನೆದು ಮರುಗುತಿರ್ಪನಂ. ಅಂತುಮಲ್ಲದೆ ತಾನೆ ಪರಣಮುಂ ನೀಗಾಡಲು

ಮೆಳಸಿರ್ಪೆಂ. ಇಂತಪ್ಪ ಮರುವಸಲಸನೀಯುತ್ಸವ ಕಾಲದೊಳ್
ಕೊಲ್ಲುದುಚಿತವಲ್ತು.

ರಾಯಂ—ಪೂಜ್ಯರಾಣತಿ.

ಪ್ರಮಥಾನಂದಂ—ಎಲೆ ಮಧೂಲಕ! ನೀಂ ಸನ್ಯಸ್ತನಪ್ಪೊಡೆ ಆಗಳ್ ಬೇರೆ ಜನ್ಮಂ ಸಮನಿಕ್ಕುಂ. ಅದರಿಂ ಸನ್ಯಾಸಮಂ ಕೈಗೊಂಡು ನನ್ನ ಸೇವಾವೃತ್ತಿಯೊಳ್ ನಿರತನೆನಿಸಿ ಬರ್ಮಕು.

ಮಧೂಲಕಂ—ಆಣತಿ.

ಪ್ರಮಥಾನಂದಂ—ಎಲ್ಶೆ ಮಂದಾರಿಕಾ ಸಾಧನಿಕೆಯರಿರಾ! ನೀಮೀ ಮಯೂರಕ ಲುಬ್ಧಕರಂ ಕೆಯ್ಪಿಡಿದು ಸಚ್ಚರಿತ್ರೆಯರೆನಿಸಿ ಚಿರಕಾಲಂ ಬಾಳಿಂ.

ಮಂದಾರಿಕಾ ಸಾಧನಿಕೆಯರ್—ಆಣತಿ. (ಎಂದು ಮಂದಾರಿಕೆ ಮಯೂರಕನ ತಳಮುಮಂ ಸಾಧನಿಕೆ ಲುಬ್ಧಕನ ತಳಮುಮಂ ಪಿಡಿದರ್)

ಪ್ರಮಥಾನಂದಂ—ವತ್ಸ! ವಿಕ್ರಮಸಿಂಹ! ನೀನೀಸ್ವಯಂಪ್ರಭೆಯುಂ ಸಲಪುತೆ ಚಂಡವಿಕ್ರಮನ ರಾಜ್ಯದೊಳರಸುಗೆಯ್ಯುತ್ತಿರ. ನಿನಗೆ ಪೆರತಾವಬಯ್ಕೆಯ ನಾಂ ಸಲಿಸವೇಳ್ಕುಂ.

ರಾಯಂ—ಇದರತ್ತಣಿನೆನಗೆ ಪೆರತಾವ ಬಯ್ಕೆಯಿರ್ಪುದು!

ಚಂ॥ ಮಾ॥ ಗಿರಿಶಪದಾರ್ಚನೈಕಪರ! ನಿನ್ನಯ ದರ್ಶನವಾಯ್ತು ಚೆಲ್ವಿನಾ। ಕರಮೆನಲೊಪ್ಪುವೀ ಕನಕವಲ್ಲರಿಯೊಳ್ ಪಸೆನಿಂದೆನೊಲ್ಮೆಯಿಂ॥ ದೊರೆತುದು ಚಂಡವಿಕ್ರಮನರಾಜ್ಯಮದೆಲ್ಲಮು ಮೀಮಧೂಲಕಂ। ಮೆರೆವತಪಸ್ವಿಯಾದ ನೆಳಸಲ್ ಪೆರತಾವುದಪೇಕ್ಷಣೀಯಮೈ॥ ॥೬೬॥

ಆದೊಡಮಿದೊಂದಕ್ಕೆ;

ಮ॥ ವಿ॥ ಬುಧಿಯಾಳ್ದರ್ ಬಹುಧರ್ಮದಿಂ ಪ್ರಜೆಗಳಂ ಪಾಲಿಕ್ಕೆ ತಾಮ್ಮೈದೆವಾ। ಸವಸುಂ ನೀಡುಗೆ ವೃಷ್ಟಿಯಂ ಸಮಯದೊಳ್ ಭೂಭಾಗದೊಳ್

ಪಗೆ

ಕನ್ನಡಂ ॥ ತವೆರಂಜಿಕ್ಕೆ ಕವೀಂದ್ರರೊಳ್ ನೆಲಸುಗಾವಾಣೀಕಟಾಕ್ಷಾಂಕು
ರಂ । ಶಿವಕಾರುಣ್ಯದೆ ಲೋಕಕಕ್ಕೆ ಸತತಂ ಭದ್ರಂ ಶುಭಂ ಮಂಗಳಂ ॥೬೭॥

(ಎಂದೆಲ್ಲರುಂ ತೆರಳ್ದರು)

ಕಂ ॥ ಧರೆಯೊಳ್ ಪ್ರಿಯವರ್ತಿಕೆಯುಂ ।
ವರಕೃಷ್ಣವಿಜಯಮುಮೆಂತು ಕನ್ನಡನುಡಿಯೊಳ್ ॥
ಮೆರೆದಿರ್ಪುವೊ ಕನಕಲತಾ ।
ಪರಿಣಯಮಿದುಮಂತೆ ಮೆರೆಗೆ ಕಮಲೆಯಕೃಪೆಯಿಂ ॥೬೮॥

ಇಂತಿದು

→ ವಿಕ್ರಮಸಿಂಹ ವಿಜಯಮೆಂಬೈದನೆಯ ಅಂಕಂ ←

ಕನಕಲತಾಪರಿಣಯ ನಾಟಕಂ ಸಂಪೂರ್ಣಂ.